
at the

# Supply Agency Limited,

**Head Office:** Bobbarya Junction

# UDIPI

**Finance Department:** Vyasa Bhavanam

## Rates of Interest for FIXED DEPOSITS

| | | |
|---|---|---|
| 4 to 6 Months | - | 4 per cent |
| 7 ,, 11 ,, | - | 5 ,, |
| 12 ,, 18 ,, | - | 6 ,, |

Special rates will be quoted on application for FIXED DEPOSITS of 2 years and above.

**Our Special Schemes of Deposit:**

DEENABANDHU NIDHI
INDUSTRIAL DEPOSITS
INDUSTRIAL CASH CERTIFICATES
SAVE AS YOU PLEASE
ANTARANGA DEPOSITS

For Particulars write to the Manager:

FINANCE DEPARTMENT,
SUPPLY AGENCY LIMITED,
VYASA BHAVANAM,
Car Street, UDIPI.

This page is available for advertisement. Rate Rs. 15/- (per insertion.)

# ANTARANGA ❖ ಅಂತರಂಗ

**UDIPI — ಉಡುಪಿ.**

KANARESE WEEKLY MAGAZINE

Proprietors: Supply Agency Limited, Udipi
Printed at the Manipal Power Press, Manipal, Udipi

ವರ್ಷ ೧. ಆದಿತ್ಯವಾರ. ೨೦, ೧೯೩೮. ಸಂಚಿಕೆ ೧೯.



ಎಸ್. ಯು. ಪಣಿಯಾಡಿ.
(Editor in Chief.)

ಕೆ. ಹೈದರ್.
(Managing Editor.)

*Associate Editors:*

ಎಸ್. ಎಸ್. ಕಾರಂತ.
ಪಿ. ಎಲ್. ಅಡಿಗ.
ಪಿ. ವಿ. ಆಚಾರ್ಯ.
ಎಂ. ವಿ. ಹೆಗ್ಡೆ.

*Members of the Advisory Board.*

ಶ್ರೀ. ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಕೊರಡ್ಕಲ್ ಶ್ರೀನಿವಾಸರಾವ್, ಗ್ರಂಥಕರ್ತ.
,, ಆರ್. ಆರ್. ಕುಂಜೂರು.
,, ಪಿ. ವಿ. ಉಪಾಧ್ಯಾಯ, ಬಿ. ಎ., ಎಲ್. ಎಲ್. ಬಿ.
,, ಆರ್. ಎಸ್. ಶೆಣೈ, ಸಂಪಾದಕ, ವರ್ತಕ ಧುರೀಣ.
ಶ್ರೀ. ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ.
ಶ್ರೀಮತಿ. ಪಿ. ಭಾರತೀ ಬಾಯಿ.
ಶ್ರೀ. ಯು. ವೆಂಕಟರಮಣಾಚಾರ್ಯ, ಮೆನೇಜರ್, ಶ್ರೀಕೃಷ್ಣಸಂದೇಶ.
,, ಉಪೇಂದ್ರ ಅನಂತ ಪೈ, ಮಾಲಕ, ಚಿತ್ರಕಲಾ.


ವಾರ್ಷಿಕ ಚಂದಾ: ಮೂರು ರೂಪಾಯಿ.
ಬಿಡಿ ಸಂಚಿಕೆ: ಒಂದಾಣೆ

ವಿ. ಪಿ. ಕ್ರಮವಿಲ್ಲ. ಹಣವನ್ನು ಮುಂಗಡವಾಗಿ ಕಳುಹಬೇಕು.


## Advertisement Tariff:

| | | |
|---|---|---|
| Full Page | 10 0 0 | Per inserstion. |
| Half ,, | 5 0 0 | ,, |
| Quarter ,, | 3 0 0 | ,, |
| 1/8 ,, | 2 0 0 | ,, |
| Column Inch | 1 0 0 | ,, |

***Special Rates for contract advertisements will be quoted on application***

## Advertisers Please Note:

- All advertisements are payable in advance.
- Any change in the advertisement must be intimated before one week.
- Blocks if any will be returned at the cost of the advertiser.
- The management reserves the right to reject objectionable advertisements.

**Messrs. Basavaraj News Agency, Belgaum,**
are exclusively authorised to sell **Antaranga** on thier own account at **Belgaum** with effect from the 1st Week of November 1938.

**Circulation Manager,**
**ANTARANGA**
**UDIPI.**

**Sri. P. K. Bhat, News Agent, Honavar**
is exclusively authorised to sell **Antaranga** on his own accout at **Honavar** with effect from the 1st week of Novembet 1938.

**Circulation Manager,**
**ANTARANGA**
**UDIPI.**

## ಪ್ರತಿಯೊಬ್ಬ ಕನ್ನಡಿಗನೂ ಓದಬೇಕಾದ ಗ್ರಂಥಗಳು

| | | | |
|---|---|---|---|
| ಆಕಾಶದೊಳಗಿನ ಅದ್ಭುತ ಚಮತ್ಕಾರಗಳು | ೧ | ೨ | ೦ |
| ಹಿಂದೂಸ್ಥಾನದ ಪ್ರಾಚೀನ ರಾಜ್ಯಪದ್ಧತಿ | ೧ | ೨ | ೦ |
| ಖಾದಿಶಾಸ್ತ್ರ . . | ೧ | ೨ | ೦ |
| ಏಷ್ಯ ಖಂಡದ ಜಾಗ್ರತಿ . | ೧ | ೨ | ೦ |
| ಶಾರದೆಯ ಸಂಸಾರ . | ೧ | ೦ | ೦ |

**ಶ್ರೀ. ಆಲೂರು ವೆಂಕಟರಾಯರ ಗೀತಾ ಪುಸ್ತಕಗಳು.**

| | | | |
|---|---|---|---|
| ಗೀತಾ ಪ್ರಕಾಶ . . | ೨ | ೦ | ೦ |
| ಗೀತಾ ಸಂದೇಶ . . | ೧ | ೪ | ೦ |
| ಗೀತಾ ಭಾವಪ್ರದೀಪ ಭಾಗ I | ೧ | ೪ | ೦ |
| ಡಿ II | ೧ | ೮ | ೦ |
| ಗೀತಾ ಪರಿಮಳ . . | ೧ | ೪ | ೦ |

ಈ ಕೆಳಗಿನವರಲ್ಲಿ ದೊರೆಯುತ್ತದೆ.

**ತುಳುನಾಡ್ ಪ್ರೆಸ್**
**ಉಡುಪಿ.**

**ನವಭಾರತ ಬುಕ್ ಡಿಪೋ**
**ಉಡುಪಿ.**

**ಯು. ಆರ್. ಶೆಣೈ ಎಂಡ್ ಸನ್ಸ್**
**ಮಂಗಳೂರು.**

*Cheif Agents for S. Kanara & Coorg.*

**SUPPLY AGENCY LTD., UDIPI.**

# ಅಂತರಂಗ

## ಮಂಗಳೂರಲ್ಲಿ ಏಕೀಕರಣಕ್ಕೆ ಪ್ರಚಂಡ ಬೆಂಬಲ!

ಮಂಗಳೂರು ಮ್ಯುನಿಸಿಪಲ್ ಕೌನ್ಸಿಲಿನ ಮುಂದಿರಿಸಲ್ಪಟ್ಟ ಏಕೀಕರಣ ಠರಾವು ಅನುಮೋದಕರಿಲ್ಲದೆ ಬಿದ್ದು ಹೋಯಿತು.-ವಾರ್ತೆ.

ಪ್ರಚಂಡ ಕಾಂಗ್ರೆಸ್ ಬಹುಮತವುಳ್ಳ ಮಂಗಳೂರು ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಕರ್ನಾಟಕ ಏಕೀಕರಣಕ್ಕೆ ದೊರಕಿರುವ ಈ ''ಪ್ರಚಂಡ ಬೆಂಬಲ''ವನ್ನು ಕರ್ನಾಟಕದ ಚರಿತ್ರೆಯಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಬೇಡವೆ?

ಂಂಂ

## ಉದಾರಬುದ್ಧಿ!

''ನಾವು ಯೆಹೂದೀ ಸಂಸ್ಕೃತಿಯನ್ನು ನಿರ್ನಾಮಗೊಳಿಸಲಿಚ್ಛಿಸುವುದಿಲ್ಲ'' ಎಂಧು ಜರ್ಮನಿಯ ಪ್ರಚಾರಮಂತ್ರಿ ಗೋಬೆಲ್ಸರ ಹೇಳಿಕೆ.

## ಚುರುಕು - - - - - - ಚುಟುಕು

• ಅವರು ಯೆಹೂದಿಯರ ಸಂಸ್ಕೃತಿಯನ್ನು ನಿರ್ನಾಮಗೊಳಿಸುವುದಲ್ಲ; ಯೆಹೂದಿಯರ ಸರ್ವಸ್ವವನ್ನೂ ಸೂರೆಗೊಳ್ಳಲು ಬಯಸುವುದು ಮಾತ್ರ!



ಸ್ಪೈನ್ ಯುದ್ಧದಲ್ಲಿ ಸರಕಾರೀ ಪಕ್ಷದ ಪರವಾಗಿ ಹೋರಾಡುತ್ತಿರುವ ಧೀರ ಜನರಲ್ ಮಿಯಾಜರು

ಂಂಂ

## ಇನ್ನೊಂದು ಸೈಮನ್ ಕಮಿಷನ್.

ಸಾಮ್ರಾಜ್ಯಶಾಹೀ ಹಿತಸಂಬಂಧಗಳನ್ನು ಭಾರತದಲ್ಲಿ ಹೇಗೆ ಸಂರಕ್ಷಿಸಬಹುದೆಂಬುದನ್ನು ಪರೀಕ್ಷಿಸಲು ಚೇಟ್‌ಫಿಲ್ಡ್ ಕಮಿಟಿಯು ಭಾರತಕ್ಕೆ ಬಂದಿದೆ. ಈಗಾಗಲೇ ಇದನ್ನು ಹೆಚ್ಚಿನವರು ಬಹಿಷ್ಕರಿಸಿದ್ದಾರೆ. ಸೈಮನ್ ಕಮಿಷನಿನ ಅಪರಾವತಾರವಿದು!

ಂಂಂ

## ಮೂಲೆಗೊತ್ತಲ್ಪಟ್ಟ ವರದಿಗಳು

ಭಾರತದ ಸೈಮನ್ ವರದಿಯು ಮೂಲೆಗೊತ್ತಲ್ಪಟ್ಟಂತೆಯೇ ಪೆಲೆಸ್ಟೈನಿನ ವುಡ್‌ಹೆಡ್ ವರದಿ ಕೂಡಾ ಮೂಲೆಪಾಲು ಮಾಡಲ್ಪಟ್ಟಿದೆ. ಭಾರತಕ್ಕಾಗಿ ಕರೆಯಲ್ಪಟ್ಟ ದುಂಡುಮೇಜು ಪರಿಷತ್ತಿನಂತೆಯೇ ಪೆಲೆಸ್ಟೈನಿಗೂ ಒಂದು ಪರಿಷತ್ತನ್ನು ಕರೆದಿದ್ದಾರೆ. ಪ್ರಾಯಶಃ ಅರಬರು ಭಾರತೀಯರಂತೆ ಅದನ್ನು ಕಡೆಗಣಿಸಬಹುದು!

ಂಂಂ

## ಬದಲಾವಣೆ

'ಮಿಸ್ಟರ್' ಎಂಬುದರ ಬದಲು 'ಶ್ರೀಯುತ' ಎಂದು ಬರೆಯಬಹುದೆಂದು ಗಾಂಧಿಜಿಯವರ ಸೂಚನೆ. ಮದುವೆಯಾದ ಸ್ತ್ರೀಯರಿಗೆ 'ಶ್ರೀಮತಿ'ಯರೆಂದು ಕರೆಯಬಹುದು. ಮದುವೆಯಾಗದವರಿಗೆ 'ಕುಮಾರಿ'ಯರೆಂದು ಹೇಳಬಹುದು. ಆದರೆ ಮದುವೆಯಾಗದವರನ್ನು 'ಕುಮಾರಿ'ಯರೆಂದು ಕರೆಯುವುದು ಕವಿ ರವೀಂದ್ರರಿಗೆ ಸರಿಯೆನಿಸುವುದಿಲ್ಲವಂತೆ. ಹಾಗಾದರೆ ಅವಿವಾಹಿತ ಸ್ತ್ರೀಯರನ್ನು ಹೇಗೆ ಕರೆಯುವುದೆಂಬುದು ಒಂದು ಜಟಿಲ ಸಮಸ್ಯೆಯಲ್ಲದೆ ಮತ್ತೇನು?

# ಅಂತರಂಗ

**ಆದಿತ್ಯವಾರ, ನವಂಬರ ೨೦, ೧೯೩೮.**

## ಸಾರ್ವಜನಿಕ ಆರೋಗ್ಯ ಮಸೂದೆ

ಮದ್ರಾಸ್ ಸರಕಾರದವರು ಸಾರ್ವಜನಿಕ ಆರೋಗ್ಯ ಮಸೂದೆಯನ್ನು ಪ್ರಕಟಿಸಿದ್ದಾರೆ. ಪ್ರಾಂತ್ಯದ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸುವುದೇ ಈ ಮಸೂದೆಯ ಧ್ಯೇಯವಾಗಿದೆ. ಸಾರ್ವಜನಿಕ ಆರೋಗ್ಯವನ್ನು ಪಾಲಿಸಬೇಕಾದರೆ ಆರೋಗ್ಯಮಯ ಜೀವನಕ್ಕೆ ಬೇಕಾಗುವ ಆಹಾರ ಪಾನೀಯಗಳು ನಿಯಮಿತ ಪ್ರಮಾಣದಲ್ಲಿರಬೇಕೆಂಬುದು ಸ್ಪಷ್ಟವಾಗಿದೆ. ಈ ಮಸೂದೆಯಿಂದಾಗಿ ಸ್ಥಳೀಯ ಸಂಸ್ಥೆಗಳು ಆರೋಗ್ಯವನ್ನು [illegible]ಸಲು ಯೋಗ್ಯ ವ್ಯವಸ್ಥೆಯನ್ನು ಮಾಡುವ ಹೊಣೆಗಾರಿಕೆಯನ್ನು ವಹಿಸಬೇಕಾಗುತ್ತದೆ. ಇದು ಕಾಯಿದೆಯಾದ ಬಳಿಕ ಪಬ್ಲಿಕ್ ಹೆಲ್ತಿನ ಡೈರೆಕ್ಟರರಿಗೆ ಪೂರ್ಣಾಧಿಕಾರವು ದೊರೆತಂತಾಗುತ್ತದೆ. ಇದಕ್ಕನುಸಾರವಾಗಿ ಸಾರ್ವಜನಿಕ ಆರೋಗ್ಯಮಂಡಲಿಯೊಂದು ಸ್ಥಾಪನೆಯಾಗುವುದರಲ್ಲಿದೆ ಆರೋಗ್ಯ ಮಂತ್ರಿಗಳು ಅದರ ಧ್ಯಕ್ಷರಾಗುವರು. ಡೈರೆಕ್ಟರರು ರ್ದರ್ಶಿಗಳಾಗುವರು. ಎಲ್ಲಾ ಸಂಸ್ಥೆಗಳ ಆರ್ಥಿಕ ಪರಿ ತ್ತಮವಾಗಿಲ್ಲದಿರುವುದರಿಂದ ಸ್ವಾಭಾವಿಕವಾಗಿ ಸಾರ್ವಜನಿಕ ಆರೋಗ್ಯಕ್ಕೆ ಅವುಗಳು ತಮ್ಮ ಆದಾಯದಿಂದ ಮೀಸಲಾಗಿರಿಸಬೇಕಾದ ಒಂದು ಮೂರನೆ ಅಂಶವು ಸಾಕಾಗದಿರುವ ಸಂದರ್ಭಗಳು ತಲೆದೋರಬಹುದು. ಇವೆಲ್ಲವನ್ನೂ ಕೂಲಂಕಷವಾಗಿ ಚರ್ಚಿಸಿ ಮಸೂದೆಯನ್ನು ಅತ್ಯಂತ ಯಶಸ್ವಿಯನ್ನಾಗಿ ಮಾಡುವ ಜವಾಬ್ದಾರಿಯು ಅದರ ಸಿಲೆಕ್ಟ್ ಕಮಿಟಿಯ ಮೇಲಿದೆ. ಕಾಯಿದೆಯಾದ ಬಳಿಕ ಅದನ್ನು ಯಶಸ್ವಿಯನ್ನಾಗಿ ಮಾಡುವ ಹೊಣೆಗಾರಿಕೆಯು ಸಾರ್ವಜನಿಕರದಾಗಿದೆ.

---

## ಸರ್ದಾರರ ಸರ್ಕ್ಯುಲರ್

ಅಖಿಲಭಾರತ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಸರ್ದಾರ್ ವಲ್ಲಭಭಾಯಿ ಪಟೇಲರು ಇತ್ತೀಚೆಗೆ ಎಲ್ಲಾ ಕಾಂಗ್ರೆಸ್ ಪ್ರಾಂತ್ಯಗಳ ಪ್ರಧಾನರಿಗೆ ಕೊಟ್ಟ ಸರ್ಕ್ಯುಲರಿನಲ್ಲಿ, ವಿದೇಶಿಯರಿಗೆ ಮತ್ತು ಬ್ರಿಟಿಷರಿಗೆ ಆದಾಯ ತೆರಿಗೆ ಮಸೂದೆಯ ಸೆಕ್ಷನ್ ೪೯ಕ್ಕನುಸಾರವಾಗಿ ಕೊಡಲ್ಪಡುವ ಸವಲತ್ತುಗಳನ್ನು ನಿಲ್ಲಿಸಲು ಗವರ್ನರರಿಗೆ ಸೂಚಿಸಬೇಕೆಂದು ಹೇಳಿರುವುದು ಸ್ತುತ್ಯವಾಗಿದೆ. ಈ ಸವಲತ್ತಿನಿಂದ ವಿದೇಶೀ ವ್ಯಾಪಾರಕ್ಕೆ ತುಂಬಾ ಸಹಾಯವಾಗುವುದಲ್ಲದೆ ಪ್ರಾಂತಿಕ ಸರಕಾರಕ್ಕೆ ತುಂಬಾ ನಷ್ಟವಿದೆ. ಬ್ರಿಟಿಷರಿಗೆ ಭಾರತದಲ್ಲಿ ಕೊಡಲ್ಪಡುವ ಸವಲತ್ತು ವಿದೇಶಗಳಲ್ಲಿರುವ ಭಾರತೀಯರಿಗೆ ದೊರಕದಿರುವುದರಿಂದ ಇದನ್ನು ಇಲ್ಲಿ ಬ್ರಿಟಿಷರಿಗೆ ಅಲ್ಲಗಳೆಯುವುದು ನ್ಯಾಯವಾಗಿದೆ.

---

## ನಿಜರೂಪ

'ಪ್ರಜಾಸತ್ತೆಯು ಭಾರತೀಯ ಪರಿಸ್ಥಿತಿ ಮತ್ತು ವಾತಾವರಣಕ್ಕೆ ಹೇಳಿಸಿರುವುದಲ್ಲ' ವೆಂದು ಮುಸ್ಲಿಮ್ ಲೀಗಿನ ಧುರೀಣರಲ್ಲೊಬ್ಬರಾದ ಕರಾಚಿಯ ಸರ್. ಅಬ್ದುಲ್ಲಾ ಹಾರೂನರು ಹೇಳಿ, ಮುಸ್ಲಿಮ್ ಲೀಗು ತನ್ನ ಧ್ಯೇಯಗಳ ಕುರಿತು ಮಾಡಿಕೊಂಡಿರುವ ಪ್ರಶಂಸೆಯ ತಳಸದಿಯನ್ನೇ ಕೆಡವಿಬಿಟ್ಟಿದ್ದಾರೆ. 'ಇಂತಹ ವಿಚಿತ್ರ ವಿಶ್ವಾಸವಿರುವ ಲೀಗಿನ ಧುರೀಣರು ಹೇಳಿದಂತೆ ಭಾರತದ ಮುಸಲ್ಮಾನರು ವರ್ತಿಸಿದರೆ ಪರಿಸ್ಥಿತಿಯು ಹೇಗಾಬಹುದೆಂದು ಹೇಳಬೇಕಾಗಿಲ್ಲ.

---

"ಪಾಪ, ಸದಾಶಿವರಾಯರು ತನ್ನ ಹಣ ಕಳಕೊಂಡದ್ದೇ ಸೈ, ಈಗ ಅವರ ಸ್ನೇಹಿತರಲ್ಲಿ ಅರ್ಧಾಂಶ ಜನರಿಗೆ ರಾಯರ ಅರಿವೇ ಇಲ್ಲ."

"ಇನ್ನೊಂದು ಅರ್ಧಾಂಶ ಜನರಿಗೆ ಅರಿವಿದೆಯೇ?"

"ಓಹೋ, ಮತ್ತುಳಿದ ಅರ್ಧಾಂಶಕ್ಕೆ ಅವರು ಹಣ ಕಳಕೊಂಡಿದ್ದಾರೆಂತ ಗೊತ್ತೇ ಇಲ್ಲ!"

---

# ಜಗತ್ತು ಎತ್ತ ಸಾಗುತ್ತಿದೆ?

ಜೆಕೊಸ್ಲೊವೇಕಿಯದ ಪ್ರಧಾನ ಮಂತ್ರಿ
**ಜನರಲ್ ಜ್ಹೋನ್ ಸಿರೋವಿ.**



## ಸ್ವಿಝರ್‌ಲೇಂಡನ್ನು ನುಂಗಲು ಜರ್ಮನಿ ಬಾಯ್ದೆರೆದಿದೆ!

★

## 'ಜನರಲ್ ಸಿರೋವಿಯುವರು ರಾಜಿಕೊಡಬೇಕು'— ಹಿಟ್ಲರ್.

---

### ಸಾರ್ವತ್ರಿಕ ಯುದ್ಧ ಸಿದ್ಧತೆಗಳು.

---

**೭೦,೦೦೦ ಜೆಕ್ ಸೈನಿಕರ ಅಧಿಕಾರಿಯಾಗಿ ಜರ್ಮನಿಯ ವಿರೋಧ ಪಕ್ಷದವರಿಗಾಗಿ ಕಳೆದ ಮಹಾಯುದ್ಧದಲ್ಲಿ ಹೋರಾಡಿ, ಧೀರ ಜನರಲ್ ಸಿರೋವಿಯು ತನ್ನ ಬಲಗಣ್ಣನ್ನು ಕಳಕೊಂಡು ವಿಜಯ ಹೊಂದಿದಾಗ "ನಾವಿದನ್ನು ಮರೆಯಲಾರೆವು" ಎಂದು ಹೇಳಿದ ವಚನ ಭಂಗ ವಿಶಾರದರಾದ ಬ್ರಿಟಿಷರು ಜೆಕೊಸ್ಲೊವೇಕಿಯವನ್ನು ಯುರೋಪಿನ ರಣಹದ್ದುಗಳಿಗೆ ಹಂಚಿಕೊಟ್ಟರು!**

**ಯು**ರೋಪಿನ ಸರ್ವಾಧಿಕಾರಿಗಳ ವಿಜಯ ಪತಾಕೆಯನ್ನು ಮೇಲೇರಿಸಿದ ಮ್ಯೂನಿಕ್ ಒಪ್ಪಂದದಿಂದ ಪ್ರಜಾಸತ್ತಾತ್ಮಕ ಜೆಕೊಸ್ಲೊವೇಕಿಯವು ಹರಿಹಂಚಿ ಹಾಕಲ್ಪಟ್ಟಿರುವುದು ಸಾಲದೆ, ಈಗ ಜೆಕ್ಕರ ಅಧೀನದಲ್ಲಿರುವ ಒಂದಿನಿತು ಭೂಮಿಯನ್ನು ಕೂಡಾ ಅಪಹರಿಸಿ ನಾಝಿ ಪ್ರಭಾವವನ್ನು ಪೂರ್ಣವಾಗಿ ಸ್ಥಾಪಿಸಬೇಕೆಂದು ಹಿಟ್ಲರನು ಮಾಡಿರುವ ನಿರ್ಣಯವು ಈಗಾಗಲೆ ಜನಜನಿತವಾಗಿದೆ. ಕಳೆದ ಮಹಾಯುದ್ಧದಲ್ಲಿ ೭೦,೦೦೦ ಜೆಕ್ ಸೈನಿಕರ ಅಧಿಕಾರಿಯಾಗಿ ರಷ್ಯದ ಪರವಾಗಿ ಜರ್ಮನರೊಡನೆ ಹೋರಾಡಿದ ಜೆಕ್ ರಾಷ್ಟ್ರವೀರ ಜನರಲ್ ಜ್ಹೋನ್ ಸಿರೋವಿಯವರು ಜೆಕೊಸ್ಲೊವೇಕಿಯದ ಪ್ರಧಾನ ಮಂತ್ರಿತ್ವವನ್ನು ಬಿಡಲೇಬೇಕೆಂದು ಹಿಟ್ಲರನು ಆಜ್ಞಾಪಿಸಿರುವ ಸುದ್ದಿಯೂ ಕೇಳಿಬರುತ್ತಿದೆ.

### ಯುದ್ಧ ಸಿದ್ಧತೆಗಳು!

ಜೆಕೊಸ್ಲೊವೇಕಿಯದಲ್ಲಿರುವ ೮೦,೦೦೦ ಪೋಲ್ ಜನರು ಮತ್ತು ಅವರು ವಾಸಿಸುವ ಸ್ಥಳವನ್ನು ಪೋಲೆಂಡ್ ಕೇಳಿ, ಆ ಸ್ಥಳದಲ್ಲಿದ್ದ ೧೨೦,೦೦೦ ಜೆಕೊಸ್ಲೊವೇಕಿಯದ ಪ್ರಜೆಗಳನ್ನೂ ಅವರು ಪಡೆದರು. ಈ ಅಲ್ಪಸಂಖ್ಯಾಕರ ಪರವಾಗಿ ಯಾರೂ ವಾದಿಸುವುದಿಲ್ಲ. ಅಲ್ಪಸಂಖ್ಯಾಕರಿಗೆ ಸ್ವಾಯತ್ತೆಯನ್ನು ಕೇಳಿ ಕೇವಲ ಸೈನ್ಯಬಲದ ದರ್ಪವನ್ನು ತೋರಿಸುವ ಸರ್ವಾಧಿಕಾರಿಗಳಿಗೆ ಬ್ರಿಟನ್ ಫ್ರಾನ್ಸ್,

ಮೊದಲಾದ ದೇಶಗಳು ಬೆದರಿ ಪ್ರಜಾಸತ್ತೆಯನ್ನು ಅವರಿಗೆ ಮಾರಿಕೊಂಡಿವೆ. ಬ್ರಿಟನು ಫ್ರಾನ್ಸುಗಳ ಈ ಧೋರಣೆಯಿಂದಾಗಿ

ಯುರೋಪಿನಲ್ಲಿ ಯಾರೂ ಎದುರಿಸಲು ಸಿದ್ಧವಾಗಿಲ್ಲವೆಂದು ಐರೋಪ್ಯ ರಾಷ್ಟ್ರಗಳ ಇತ್ತೀಚೆಗಿನ ಧೋರಣೆಯಿಂದ ಸ್ಪಷ್ಟವಾಗು

ನಲ್ಲಿ ಜರ್ಮನ್ ಪ್ರಭಾವವನ್ನು ಹೆಚ್ಚಿಸಬೇಕೆಂಬ ಹಿಟ್ಲರನ ಅಭಿಲಾಷೆಯನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

# ಸ್ಪಿಝುರ್‌ಲೇಂಡ್— ಇನ್ನೊಂದು ಜೆಕೊಸ್ಲೊವೇಕಿಯ!

ಯುರೋಪಿನ ಶಾಂತಿಯ ವಾತಾವರಣವು ಕಾರ್ಮೋಡಗಳಿಂದ ತುಂಬಿರುವುದಲ್ಲದೆ ಪ್ರತಿಯೊಂದು ರಾಷ್ಟ್ರವೂ ಈಗ ಯುದ್ಧಸಿದ್ಧತೆಗಳನ್ನು ಮಾಡುತ್ತಿದೆ.

**ಜರ್ಮನ್ ಬಲತ್ಕಾರವನ್ನು ಎದುರಿಸುವವರಿಲ್ಲ.**


ಹಿಟ್ಲರನ ಬಲಾತ್ಕಾರವನ್ನು

ತ್ತದೆ ಜೆಕ್ ಸರಕಾರಕ್ಕೆ ಬ್ರಿಟನು ಮತ್ತು ಫ್ರಾನ್ಸುಗಳು ೩೦,೦೦೦,೦೦೦ ಪೌಂಡುಗಳನ್ನು ಸಾಲವಾಗಿ ಕೊಡಲೊಪ್ಪದಿರುವುದಕ್ಕೆ ಮೂಲ ಕಾರಣವೆಂದರೆ ಹಿಟ್ಲರನ ಬೆದರಿಕೆಯಾಗಿದೆ. ಇದರಿಂದಾಗಿ ಜೆಕೊಸ್ಲೊವೇಕಿಯವು ಈಗ ರಷ್ಯದ ಬೆಂಬಲದ ಮೇಲೆ ಹೊಂದಿಕೊಂಡಿರಬೇಕಾಗಿದೆ. ಪೂರ್ವ ಯುರೋಪಿ

**ರಷ್ಯದ ವಿರೋಧ ಧೋರಣೆ.**

ಸಾಮ್ರಾಜ್ಯಶಾಹೀ ರಾಷ್ಟ್ರಗಳು ಪ್ರಜಾಸತ್ತಾತ್ಮಕ ರಾಷ್ಟ್ರಗಳನ್ನು ಮಣ್ಣುಗೂಡಿಸಲು ನಿರ್ಣಯಿಸಿವೆಯೆಂಬುದನ್ನು ಪೂರ್ಣವಾಗಿ ತಿಳಿದು ರಷ್ಯವು ಪೂರ್ವ ಯುರೋಪಿನಲ್ಲಿಯೂ, ಚೀನದ ಚಂಗ್‌ಪು ಕೆಂಗಿನಲ್ಲಿಯೂ ಪ್ರಚಂಡ ಬಲದ

**ಯುರೋಪು ಎತ್ತ ಸಾಗುತ್ತಿದೆ?**



ನಾಝಿ ಶಕ್ತಿಯು ತನ್ನ ರೌರವ ಸಾಮ್ರಾಜ್ಯವನ್ನು ಯುರೋಪಿನಲ್ಲಿ ಸಂಸ್ಥಾಪಿಸಲನುವಾಗಿದೆ.

ಸೈನ್ಯಗಳನ್ನಿಟ್ಟಿದೆ. ಇದು ಜರ್ಮನಿಗೆ ಪೂರ್ಣವಾಗಿ ತಿಳಿದಿರುವುದರಿಂದ ರಷ್ಯವು ನೊನ್ನೆಯ ಅಂತರ್ರಾಷ್ಟ್ರೀಯ ಕಮಿಷನಿನಿಂದ ಹೊರಗಿರುವಂತಾಯಿತು. ವಸ್ತುಸ್ಥಿತಿಯು



ಪ್ರಜಾಸತ್ತೆಗಾಗಿ ಕಣ್ಣೀರು ಸುರಿಸಿ ಜೆಕೊಸ್ಲೊವೇಕಿಯವನ್ನು ಕೊರಳುಕೊಯ್ಕರಿಗೆ ಅರ್ಪಿಸಿ ಅಧಿಕಾರದಿಂದ ದೂರವಾಗಿ ಅಮೆರಿಕಕ್ಕೆ ತೆರಳಲಿರುವ **ಡಾ| ಬೆನೆಷ್.**

ಹೀಗಿದ್ದರೂ ನಾಝಿಪ್ರಭಾವವು ಹಬ್ಬದಂತೆ ರಷ್ಯವು ಎಲ್ಲೆಡೆಗಳಿಂದಲೂ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದೆ.

### ಜೆಕೊಸ್ಲೊವೇಕಿಯದ ನಿರ್ನಾಮ ಯತ್ನ.

ಜೆಕೊಸ್ಲೊವೇಕಿಯದ ಈಗಿನ ಪ್ರಧಾನ ಮಂತ್ರಿಗಳಾದ ಜ್ಹೋನ್ ಸಿರೋವಿಯವರು ಜರ್ಮನರ ಮಹಾ ವೈರಿಯಾಗಿ ಜೊಬೊಶಾಫ್ ಯುದ್ಧದಲ್ಲಿ ತನ್ನ ಕಣ್ಣನ್ನು ಕಳೆದುಕೊಳ್ಳುವತನಕ ಹೋರಾಡಿರುವುದು ಹಿಟ್ಲರನಿಗೆ ಚೆನ್ನಾಗಿ ನೆನಪಿದೆ. ಈ ಅಸಾಮಾನ್ಯ ವ್ಯಕ್ತಿಯು ಈಗಲೂ ಜೆಕ್ ಸೈನಿಕರಿಗೆ ಸ್ಫೂರ್ತಿಯ ಮೂಲವಾಗಿರುವುದರಿಂದ ಸಿರೋವಿಯವರನ್ನು ಒತ್ತಾಯದಿಂದಲಾದರೂ ಪ್ರಧಾನ ಮಂತ್ರಿತ್ವದಿಂದ ದೂರಗೊಳಿಸುವ ಯತ್ನಗಳು ಹಿಟ್ಲರನಿಂದ ಮಾಡಲ್ಪಡುತ್ತಿವೆ. ಜೆಕೊಸ್ಲೊವೇಕಿಯದಲ್ಲಿ ಈಗ ಕೂಡಾ ನಾಝಿ ಪ್ರಚಾರವು ಪ್ರಬಲವಾಗಿ ನಡೆಯುತ್ತಿದೆ.

### ಸ್ವಿಝರ್ಲ್ಯಾಂಡನ್ನು ನುಂಗುವ ಯತ್ನ!

ಜೆಕೊಸ್ಲೊವೇಕಿಯದ ಕೊಳ್ಳೆಯನ್ನು ಯಶಸ್ವಿಯಾಗಿ ಮಾಡಿದ ಹಿಟ್ಲರನು ಈಗ ಸ್ವಿಝರ್ಲ್ಯಾಂಡನ್ನು ನುಂಗಲು ಬೇಕಾದ ಎಲ್ಲಾ ಯತ್ನಗಳನ್ನು ಮಾಡುತ್ತಿದ್ದಾನೆ. ಶಾಲೆಗಳಲ್ಲಿ ಜರ್ಮನಿಯ ಭಾವೀ ಜನಾಂಗಕ್ಕೆ 'ಸ್ವಿಝರ್ಲ್ಯಾಂಡಿನವರು ಜರ್ಮನರು, ರಾಜಕೀಯ ಕಾರಣಗಳಿಂದ ಅವರು ಬೇರೆಯಾಗಿದ್ದಾರೆ. ಮೂರು ಮಿಲಿಯ ಸ್ವಿಸ್ ಜನರು ಜರ್ಮನಿಯವರು ಎಂದು ಮೊದಲಾಗಿ ಕಲಿಸಲ್ಪಡುತ್ತಿದೆ.

### ಗುಟ್ಟಿನ ಚಟುವಟಿಕೆ

ಸ್ವಿಝರ್ಲ್ಯಾಂಡಿನವರಿಗೆ ಈ ಪ್ರಚಾರದ ರಹಸ್ಯವು ಮೊದಲೇ ತಿಳಿದಿರುವುದರಿಂದ ಅವರು ಬಹಳ ಜಾಗರೂಕರಾಗಿದ್ದರೂ ಗುಟ್ಟಿನ ನಾಝಿ ಸಂಸ್ಥೆಗಳು ಆಗಾಗ ಆ ಸುಂದರ ರಾಷ್ಟ್ರದಲ್ಲಿ ತಲೆದೋರುತ್ತಿವೆ. ಇತ್ತೀಚೆಗೆ ಸ್ವಿಝರ್ಲ್ಯಾಂಡಿನಲ್ಲಿ ರಹಸ್ಯವಾಗಿ ಪ್ರಚಾರ ಮಾಡುವ ಹಲವರು ಸೆರೆಹಿಡಿಯಲ್ಪಟ್ಟಿದ್ದಾರೆ.

### ಹಿಟ್ಲರನ ಮಹದಭಿಲಾಷೆ

ಜರ್ಮನಿಯ ಚತುರ ಪ್ರಚಾರ ಮಂತ್ರಿಯಾದ ಗೋಬೆಲ್ಸ್ ತನ್ನ ಅಧೀನಾಧಿಕಾರಿಗಳ ಬೆಂಬಲದಿಂದ ಯೆಹೂದಿಯರನ್ನು ಖಂಡಿಸುವ ನೆವ ಹಿಡಿದುಕೊಂಡು, ಇಟಲಿಯಲ್ಲಿ ಮಾಡಿದಂತೆಯೇ ನಾಝಿ ಪ್ರಚಾರ ಕಾರ್ಯವನ್ನು ಮಾಡುತ್ತಿದ್ದಾನೆ. ಸ್ವಿಸ್ ಸರಕಾರವು "ಜೆಸ್ಟೆಪೊ" ತಂಡದ ನಾಝಿಗಳ ಚಟುವಟಿಕೆಗಳನ್ನು ನಿಲ್ಲಿಸಲು ಬಹುಮುಖವಾಗಿ



ನಿರ್ಭಾಗ್ಯ ಜೆಕೊಸ್ಲೊವೇಕಿಯದ ಅಧ್ಯಕ್ಷತೆಗೆ ರಾಜಿಯಿತ್ತು ತನ್ನ ಒಲವಿನ ಜನ್ಮಭೂಮಿಯ ಕರುಣಾಜನಕ ಪರಿಸ್ಥಿತಿಯನ್ನು ಕಂಡು ಮುಮ್ಮಲ ಮರುಗುತ್ತಿರುವ **ಡಾ| ಹಾಝಾ.**

ಯತ್ನಿಸುತ್ತಿದೆ. ಹಿಟ್ಲರನು ಇತ್ತೀಚೆಗೆ ಸ್ವಿಝರ್ಲ್ಯಾಂಡಿಗೆ ಸ್ವಾತಂತ್ರ್ಯ ಕೊಡುವೆನೆಂಬ ಭರ

ವಸೆಯಿತ್ತಿರುವುದರಿಂದ, ವಚನ ಭಂಗ ಮಾಡುವುದರಲ್ಲಿ ಅಗ್ರಗಣ್ಯನಾದ ಹೆರ್ ಹಿಟ್ಲರನ ಧಾಳಿಯನ್ನು ತಡೆಯಲು ಅದು ಎಲ್ಲಾ ವಿಧಗಳಿಂದಲೂ ಪ್ರಯತ್ನಿಸುತ್ತಿದೆ.

**ಲೋಕವೆತ್ತ ಸಾಗುತ್ತಿದೆ?**

ಸರ್ವಾಧಿಕಾರಿಗಳ ಹಾನಿಕಾರಕ ತತ್ವಗಳು ಸಮಗ್ರ ಜಗತ್ತನ್ನು ಅವ್ಯವಸ್ಥೆಯಿಂದ ತುಂಬಿದೆ. ಸ್ಪೈನ್ ಭೂಶಿರದಲ್ಲಿ ಹಿಟ್ಲರ್ ಮುಸ್ಸೋಲಿನಿಯರು ಈಗಲೂ ಯುದ್ಧವನ್ನು ಮಾಡಿಸುತ್ತಿದ್ದಾರೆ. ಜಪಾನಿನ ಸೈನಿಕಶಕ್ತಿಯು ಚೀನವನ್ನು ಹರಿದು ಹಂಚಿಹಾಕುತ್ತಿದೆ. ದಕ್ಷಿಣ ಅಮೇರಿಕದ ಬ್ರೇಝಿಲಿನಲ್ಲಿ ಕೂಡಾ ನಾಝಿ ಪ್ರಭಾವವು ತಲೆಯೆತ್ತಿ ನಿಂತಿದೆ. ಎಬಿಸೀನಿಯವು ಒಮ್ಮೆ ಸೋತು ಸುಣ್ಣವಾಗಿ ಪುನಃ ತನ್ನ ಪುರಾತನ ಪದ್ಧತಿಯಂತೆ ಯುದ್ಧವಾರಂಭಿಸಿದೆ.

**ವಿಮಾನಪಡೆಯ ಹೆಚ್ಚಳ**

ಮ್ಯೂನಿಕ್ ಒಪ್ಪಂದವಾದ ಬಳಿಕ ಜರ್ಮನಿಯು ತನ್ನ ವಿಮಾನ ಪಡೆಯನ್ನು ಬಲಪಡಿಸುತ್ತಿದೆ. ಮ್ಯೂನಿಕ್ ಒಪ್ಪಂದವು ತನಗೆ ಪ್ರಯೋಜನಕಾರಿಯಾದರೂ ಹಿಟ್ಲರನು ಅದನ್ನು ನಂಬಲಿಲ್ಲ. ಫ್ರಾನ್ಸ್ ಇಂಗ್ಲೆಂಡ್‌ಗಳಿಗಿಂತ ಹೆಚ್ಚು ಶಕ್ತಿಯನ್ನು ಸಂಪಾದಿಸಬೇಕೆಂದು ಹಿಟ್ಲರನು ಈಗ ಆಕಾಶಪಡೆಯನ್ನು ಹೆಚ್ಚಿಸುತ್ತಿರುವುದಲ್ಲದೆ ಮುಂದೆ ನೌಕಾಪಡೆಯನ್ನು ಕೂಡಾ ಹೆಚ್ಚಿಸಲಿದ್ದಾನೆಂದು ಮೆ: ಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಬರ್ಲಿನ್ ಪ್ರತಿನಿಧಿಯು ಬರೆಯುತ್ತಾನೆ

**೫೦೦೦ ವಿಮಾನಗಳು**

ಫ್ರೆಂಚ್ ಸರಕಾರವು ಜರ್ಮನಿಯ ಪ್ರಚಂಡ ಚಟುವಟಿಕೆಗಳನ್ನು ಕಂಡು ತನ್ನ ವಿಮಾನಪಡೆಯನ್ನು ಕೂಡಾ ಸುಧಾರಿಸುತ್ತಿದೆ. ಅದಕ್ಕಾಗಿ ಈಗಾಗಲೇ ೫೦೦೦ ಯುದ್ಧ ವಿಮಾನಗಳನ್ನು ಹೆಚ್ಚಿಸುವ ಯೋಜನೆಯನ್ನು ಪ್ರಾರಂಭಿಸಿದ್ದಾರೆ.

# ಪ್ರಜಾಸತ್ತೆಯ ಪ್ರಬಲ ಪರಾಜಯ!



ಫ್ಯಾಸಿಸ್ಟ್ ಶಕ್ತಿಗೆ ತಲೆತಗ್ಗಿಸಲಾರೆನೆನ್ನುವ ರಷ್ಯದ ಸರ್ವಾಧಿಕಾರಿ **ಜೋಸೆಫ್ ಸ್ಟಾಲಿನ್.**

**ಸಾರ್ವತ್ರಿಕ ಸಿದ್ಧತೆ.**

ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ರಷ್ಯ ಮೊದಲಾದ ರಾಷ್ಟ್ರಗಳು ಯುದ್ಧಸಿದ್ಧತೆಗಳನ್ನು ಮಾಡುತ್ತಿರುವುದಲ್ಲದೆ ಯುನೈಟೆಡ್ ಸ್ಟೇಟ್ಸ್ ಕೂಡಾ ತನ್ನ ಸರ್ವತೋಮುಖ ಶಕ್ತಿಯನ್ನು ಹೆಚ್ಚಿಸುತ್ತಿದೆ. ಯುದ್ಧ ಸಾಧನಗಳನ್ನು ಹೆಚ್ಚಿಸುತ್ತಿದೆ. ಯುದ್ಧಸಾಧನಗಳನ್ನು ಹೆಚ್ಚಿಸುವ ಈ ಚಟುವಟಿಕೆಯನ್ನು ಕಂಡರೆ ಜಗತ್ತಿನ ಭವಿಷ್ಯವು ಹೇಗಾಗಬಹುದೆಂದು ಹೇಳಲಾಗುವುದಿಲ್ಲ.

## ಅಂತರಂಗದ ಸ್ಪರ್ಧೆಯನ್ನು ಬಿಡಿಸುವವರಿಗೆ—

ಅಂತರಂಗ ಸ್ಪರ್ಧೆಯಲ್ಲಿ ಈ ಕೆಳಗಿನ ಶಬ್ದಗಳಲ್ಲಿ ಕೆಲವನ್ನು ಉಪಯೋಗಿಸಿದರೆ ಸರಿಯಾದ ಉತ್ತರವು ಸಿಗುತ್ತದೆ:—

ವಿನೋದಮಯ, ಆನಂದಮಯ, ಕದನ, ಕವನ, ಆರಾಮ, ವಿರಾಮ, ದರಹಸಿತ, ಮಧುರ, ನವೀನ, ಬಿಸಿ, ಹಸಿ, ಸಿಹಿ, ಸುಭಾಷಚಂದ್ರ, ದ್ರವಿಡ, ಗಡಾ, ಷಡಾಗಮ, ನೀರದೆ, ಶಾರದೆ, ಮಳೆನೀರು, ಜನ, ತರುಣ, ತಡಿ, ತಟ, ಧುರ, ಯಮ, ಜವ, ಪರಮ, ಗರುಡ, ಕರ, ವಧು, ರಣದ, ದಮನ,

೨೫ ಕತೆಗಳ ಸಂಗ್ರಹ ಮಧುವನ ರೂ.1-8-0 ತುಳುನಾಡ್ ಪ್ರೆಸ್, ಉಡುಪಿ

# ನಕ್ಕು ವಿಚಾರಿಸುವಿರೋ? ▭ ▭ ▭

# ▭ ▭ ▭ ವಿಚಾರಿಸಿ ನಗುವಿರೋ?

[ವಿಚಾರ 'ಕೆಮರಾ'ದಿಂದ ಹಿಡಿದ 'ಸ್ನೇಪ್ ಶಾಟ್ಸ್' ದೃಶ್ಯಾವಳಿ.]

## ದೃಶ್ಯ ೩

ಭೀಮಾಚಾರ್ರು— ಏನೆಂದರೂ ಕಿವಿಗೊಡದವನಂತೆ ಆ್ಞಂ, ಹ್ಞೂಂ, ಅಂತೀಯಲ್ಲ ಗೋಪೂ? ಅದೇನು ಯೋಚನೆಯಲ್ಲಿರೋದು?

ಗೋಪು—ಇದೊಂದು ಸಮಸ್ಯೆ. ಬಿಡಿಸೋಕೆ ತೊಡಗಿದರೆ ಅಸಂಬದ್ಧ ತೋರುತ್ತೆ!

ಭೀಮಾಚಾರ್ರು—ಏನದು?

ಗೋಪು— ಮನುಷ್ಯಜನ್ಮ ಮೇಲೋ ನಾಯಿ ಜನ್ಮ ಮೇಲೋ ಅಂತ!

ಭೀಮಾಚಾರ್ರು— ನಿನಗೇನಾದ್ರೂ ಹುಚ್ಚುಗಿಚ್ಚು ಹಿಡಿದಿಲ್ಲವಷ್ಟೆ! ಅದೂ ಒಂದು ಸಮಸ್ಯೆ ಅಂತೀಯಲ್ಲ?

ಗೋಪು-ವಿಚಾರಿಸಿ ನೋಡಪ್ಪಾ, ಅದೊಂದು ದೊಡ್ಡ ಸಮಸ್ಯೆಯೇ. ನಾವು ಪೂರ್ವಜನ್ಮದಲ್ಲಿ ಏನಾಗಿದ್ದೆವೆಂಬೋದು ಗೊತ್ತಿಲ್ಲ. ನಮಗೇಕೆ? ಮಹಾ ಮಹಾ ತಪಸ್ವಿಗಳಿಗೂ ಅವರವರ ಪೂರ್ವಜನ್ಮದ ವಿಚಾರ ಗೊತ್ತಿದ್ದ ಹಾಗೆ ಕಾಣೋದಿಲ್ಲ. ಆದರೆ ನಾಯಿಗಳಿಗೆ ಗೊತ್ತುಂಟು! ಎತ್ತುಗಳಿಗೆ ಗೊತ್ತುಂಟು . . . .

ಭೀಮಾಚಾರ್ರು— ಕತ್ತೆಗಳಿಗೂ ಹಂದಿಗಳಿಗೂ ಗೊತ್ತುಂಟೊನ್ನು! ಏನು ಹುಚ್ಚುತನ! 'ಇಷ್ಟೇ' ತಾನೇ ನಿನ್ನ ವಿಚಾರ?

ಗೋಪು — ನೀನೇ ಹಾಗೆ ಹೇಳಿದೆ. ಈಗ ಹೀಗಂತಿಯಾ?

ಭೀಮಾಚಾರ್ರು-ಎಲ್ಲಿ ಯಾವಾಗ ಹಾಗೆಂದೆ ನಾನು?

ಗೋಪು— ಅಲ್ಲಿ ಆ ಋಷಿಪಂಚಮೀ ವ್ರತ ಮಹಾತ್ಮ್ಯೆಯನ್ನ ಹೆಮ್ಮಕ್ಕಳ ಮುಂದೆ ವ್ಯಾಖ್ಯಾನ ಮಾಡಿದಾಗ ಹೇಳಿದೆಯಲ್ಲ? – ಅವನ್ಯಾರೋ ಒಬ್ಬ ತನ್ನ ತಾಯಿಗೋ ತಂದೆಗೋ ಯಾರಿಗೋ ಏನೋ ಶ್ರಾದ್ಧಾ ಮಾಡ್ತಿದ್ದಾಗ . . .

ಭೀಮಾಚಾರ್ರು— ಯಾರಿಗೋ ಏನೋ ಅಂದ್ರೇನೋ?

ಗೋಪು—ಅಲ್ಲಾ, ಅವನ ತಂದೆ ತಾಯಿ ಅವನಲ್ಲೇ ಎತ್ತುನಾಯಾಗಿ ಬಿದ್ದಿದ್ರು; ಹಸಿವಿಂದ ಸಾಯ್ತಿದ್ರು; ಪೆಟ್ಟಿಂದ ನರಳುತ್ತಿದ್ರು. ಅಂವ ಶ್ರಾದ್ಧಾ ಮಾಡ್ತಿದ್ದ! ಆದ್ರಿಂದ ಯಾರಿಗೋ ಏನೋ ಶ್ರಾದ್ಧಾ ಅಂದೆ. ಅದ್ಯಾರಿಗೇ ಇರಲಿ, ಆ ಕತೆಯಿಂದ ಎತ್ತು ನಾಯಿಗಳಿಗೆಲ್ಲ ತಮ್ಮ ತಮ್ಮ ಪೂರ್ವಜನ್ಮದ ವಿಚಾರ ಗೊತ್ತುಂಟೊಂತಾಯ್ತು. ಮಾತ್ರವಲ್ಲ, ಅವು ಒಂದರ ಹತ್ತಿರ ಒಂದು ಮಾತಾಡಿಕೊಂಡು ತಮ್ಮ ಅಂದಿನ ಸುಖ ಇಂದಿನ ಕಷ್ಟ ಎಲ್ಲ ಹೇಳಿಕೊಳ್ಳುತ್ತವೆಂತ್ಲೂ ಆಯಿತು! ವಿಚಾರ ಮಾಡಿದ್ರೆ, — ಯಾಕೆ ವಿಚಾರ? ಒಂದು ಎಳ್ಳಷ್ಟು ಬುದ್ಧಿ ಇದ್ದವರಿಗೆ– ಅದು ಮಕ್ಕಳಿಗೆ ಹೇಳುವ ಅಜ್ಜೀ ಕತೆಗಿಂತ್ಲೂ ಕೀಳಾದ ಸುಳ್ಳಂಬಳ್ಳೀ ಕತೇಂತ ತೋರುತ್ತೆ! ಆದರೆ ಶಾಸ್ತ್ರ ವಚನ! ಸುಳ್ಳಾಗಲಾರದು. ಆದ್ರಿಂದ ಮನುಷ್ಯಜನ್ಮಕ್ಕಿಂತ ನಾಯಿ ಜನ್ಮ ಮೇಲು ಎನ್ನಬೇಕಾಗಿದೆ.

ಭೀಮಾಚಾರ್ರು-ತಾನು ಪೂರ್ವಜನ್ಮದಲ್ಲಿ ಮನುಷ್ಯನಾಗಿದ್ದೆನೆಂಬ ತಿಳುವಳಿಕೆ ನಾಯಿಗಿದ್ದರೆ ಅದು ಏನೇನೋ ತಿಂದು ಬದುಕೋದಕ್ಕಿಂತ ನೀರಿಗೆ ಬಿದ್ದಾದ್ರೂ ಪ್ರಾಣ ಕಳಕೊಳ್ಳದಿದ್ದೀತೆ?

ಗೋಪು— ಹಾಗಾದರೆ ಆ ಮಹಾತ್ಮ್ಯೆ ಋಷಿ ಪ್ರಣೀತ ಎಂಬೋದೆಲ್ಲ . . .

ಭೀಮಾಚಾರ್ರು— ಋಷಿಪ್ರಣೀತವೋ ಮಣ್ಣೊ!

ಗೋಪು-ಹಾಗಾದರೆ ಮಕ್ಕಳನ್ನ ಹೆದರಿಸೋಕೆ ಅಜ್ಜೀಕತೆ ಹೇಳಿದ ಅಜ್ಜಮ್ಮಗಳನ್ನ ಬೆದರಿಸೋಕೆ ಯಾರೋ ಬರೆದ ದೊಡ್ಡ ಅಜ್ಜೀ ಕತೆ ಅದು!

ಭೀಮಾಚಾರ್ರು — ಹ್ಞೂಂ, ಹಾಗೇ! ಆದರೆ ಅಂತರಂಗದಲ್ಲಿ ಇಲ್ಲೀಂದೆ.

ಗೋಪು— ಎಲ್ಲ ವ್ರತಗಳ 'ಸೂತಾವಾಚಾ' ಇದೇ ಸಾಲಿನದು!

ಭೀಮಾಚಾರ್ರು—ಅಲ್ಲ ಮತ್ತೆ! ಆದರೆ ಅಂತರಂಗದಲ್ಲಿ ಇಲ್ಲೀಂದೆ!

'ವಿಚಾರಪ್ರಿಯ'

---

# ಕಣ್ಮರೆಯಾದ ಕಮಾಲ್

## ಅಧೋಗತಿಯಲ್ಲಿದ್ದ ಟರ್ಕಿಯನ್ನು ಪ್ರಬಲ ರಾಷ್ಟ್ರವನ್ನಾಗಿ ಮಾಡಿದ ಶಾಂತ ಸರ್ವಾಧಿಕಾರಿ!

ಟರ್ಕಿಯು "ಯುರೋಪಿನ ರೋಗಿ"ಯೆಂದು ಕರೆಯಲ್ಪಡುತ್ತಿದ್ದಾಗ, ಅವಶ್ಯವುಳ್ಳ ಶುಶ್ರೂಷೆಯನ್ನು ಮಾಡಿ ಯುರೋಪಿನ ಪ್ರಬಲರಾಷ್ಟ್ರಗಳ ಸಾಲಿನಲ್ಲಿ ಟರ್ಕಿಯನ್ನು ನಿಲ್ಲಿಸಿ, ಅಂಧಶ್ರದ್ಧೆಯ ಕೂಪದಿಂದ ಟರ್ಕಿಯನ್ನು ಮೇಲೆತ್ತಿ, ಸ್ತ್ರೀಯರನ್ನು ಪರ್ದೆಯ ಬಂಧನದಿಂದ ವಿಮೋಚನೆಗೊಳಿಸಿ, ಅಂಧವಿಶ್ವಾಸಗಳ ಬುಡಕ್ಕೆ ಕೊಡಲಿಯಿಕ್ಕಿದ ಮುಸ್ತಾಫಾ ಕಮಾಲನ ದಿನವನ್ನು ಅಖಿಲ ಭಾರತವು ನಿನ್ನೆ ಆಚರಿಸಿ ತನ್ನ ಸಂತಾಪವನ್ನು ವ್ಯಕ್ತಪಡಿಸಿತು. ಇಲ್ಲಿ ಕಮಾಲನ ಸಂಕ್ಷಿಪ್ತ ಜೀವನವನ್ನು ಬರೆಯಲಾಗಿದೆ.



ಮುಸ್ತಾಫಾ ಕಮಾಲ್.

### ಕಣ್ಮರೆಯಾದ ಕಮಾಲ್!

ಶತಮಾನ ಶತಮಾನಗಳಿಂದ ಅಧಃಪತನದ ಅಂಧಕೂಪದಲ್ಲಿ ನರಳುತ್ತಿದ್ದ ಜನಾಂಗವನ್ನು ಹಿಡಿದು ಮೇಲೆತ್ತಿ, ಸುರಿವ ಕಣ್ಣೀರನ್ನೊರಿಸಿ, ಮೈಯ್ಯ ಮಲಿನತೆಯನ್ನು ಹೋಗಲಾಡಿಸಿ, ಯೋಗ್ಯ ಬಟ್ಟೆಬರೆಗಳನ್ನು ಟರ್ಕಿಗೆ ತೊಡಿಸಿದ ಭಾಗ್ಯವಿಧಾತನಾದ ಮುಸ್ತಾಫಾ ಕಮಾಲ್ ತನ್ನ ಪಾಲಿನ ಕರ್ತವ್ಯವನ್ನು ಪರಿಪೂರ್ಣಗೊಳಿಸಿ ನವಂಬರ ೧೧ರಂದು ವಿಶ್ರಾಂತಿಯನ್ನು ಹೊಂದಿದನು.

### ಅದ್ಭುತರಮ್ಯ ಜೀವನ

ಮುಸ್ತಾಫಾ ಕಮಾಲನ ಜೀವನವು ಜಗತ್ತಿನ ಮಹತ್ಪುರುಷರಂತೆ ಅದ್ಭುತರಮ್ಯವಾಗಿದೆ. ಈ ಮಹಾಶಯನು ೧೮೮೦ರಲ್ಲಿ ಸಲೋನಿಕವೆಂಬೊಂದು ಚಿಕ್ಕ ಪಟ್ಟಣದಲ್ಲಿ ಜನಿಸಿದನು. ಹಿಟ್ಲರನ ತಂದೆಯಂತೆ ಮುಸ್ತಾಫಾ ಕಮಾಲನ ಜನಕನು ಕೂಡಾ ಸಾಮಾನ್ಯನಾದೊಬ್ಬ ಅಧಿಕಾರಿಯಾಗಿದ್ದ. ಕಮಾಲನ ತಂದೆ ಆಲಿ ರಾಸಾನಿಗೆ ಜುಬೇದಾ ಎಂಬೋರ್ವ ವೀರ ಸುಂದರಿಯು ಮಡದಿಯಾಗಿದ್ದಳು. ಜೆಕೊಸ್ಲೊವೇಕಿಯವನ್ನು ಸ್ಥಾಪಿಸಿದ ಮೆಸರೀಕ್ ಮತ್ತು ಇಟಲಿಯನ್ನು ಪುನರುತ್ಥಾನಗೊಳಿಸಿದ ಮುಸ್ಸೋಲಿನಿಯರ ಮಾತೆಯರಂತೆ ಜುಬೇದಳು ಕೂಡಾ ಕಮಾಲನ ಜೀವನದ ಮಹತ್ವವನ್ನು ಹೆಚ್ಚಿಸಿದಳು.

### 'ಧಾರ್ಮಿಕ ಗುರು' ಕಮಾಲ್

ತನ್ನ ಮುದ್ದುಮಗನಿಗೆ ಧಾರ್ಮಿಕ ವಿದ್ಯಾಭ್ಯಾಸವನ್ನು ಕೊಡಿಸಿ ಅವನನ್ನು ಒಬ್ಬ ಧರ್ಮಗುರುವಾಗಿ ಮಾಡಬೇಕೆಂಬ ಅಭಿಲಾಷೆಯು ಜುಬೇದಳಿಗಿತ್ತು. ಆದರೆ ಅದೇ ಕಮಾಲನು ಇಸ್ಲಾಮ್‌ಧರ್ಮಕ್ಕೆ ಒದಗಿಕೆಯಂತೆ ತಾಗಿಕೊಂಡಿರುವ ಅಂಧಶ್ರದ್ಧೆಗಳನ್ನು ನಿರ್ನಾಮಗೊಳಿಸಬಹುದೆಂದು ಆಕೆಗೆ ತಿಳಿಯುವುದಾದರೂ ಹೇಗೆ? ಚುರುಕು ಸ್ವಭಾವದ ಕಮಾಲನನ್ನು ಒಂದೇ ವರುಷದೊಳಗೆ ಸಮೀಪದಲ್ಲಿರುವ ಸೆಕೆಂಡರಿ ಶಾಲೆಗೆ ಕಳುಹಿಸಲಾಯಿತು.

### 'ಪರಿಪೂರ್ಣ' ಕಮಾಲ್!

ಚಿಕ್ಕಂದಿನಲ್ಲಿಯೇ ಮಹತ್ವದ ಬಿರುದೊಂದನ್ನು ತನ್ನ ಅಧ್ಯಾಪಕರಿಂದ ಪಡೆಯುವ ಭಾಗ್ಯವು ಕಮಾಲನಿಗೆ ದೊರಕಿತು. ಉಪಾಧ್ಯಾಯರಿಗೆ ಈ ಚತುರ ವಿದ್ಯಾರ್ಥಿಯಲ್ಲಿ ತುಂಬಾ ಪ್ರೇಮವುಂಟಾಗಿ ಅವನಿ

# ಪರ್ದಾ ಪದ್ಧತಿಯ ನಿರ್ನಾಮವೇ ಮುಸ್ಲಿಮ್ ಸ್ತ್ರೀಯರ ಪ್ರಗತಿಯ ಪ್ರಥಮ ಹೊಸ್ತಿಲು.

ಗೊಂದು ವಿದ್ಯಾವೇತನವು ದೊರಕಿತು. ಇದಲ್ಲದೆ "ಕಮಾಲ" ಎಂಬೊಂದು ಬಿರುದು ಕೂಡಾ ಅವನಿಗೆ ಕೊಡಲ್ಪಟ್ಟಿತು. ಅರಬೀ ಭಾಷೆಯಲ್ಲಿ 'ಕಮಾಲ್' ಅಂದರೆ "ಪರಿಪೂರ್ಣ" ನೆಂದರ್ಥ.

ರು. ಕಮಾಲನಿಗೆ ಇವೆರಡು ಬಿರುದುಗಳು ಸಿಕ್ಕಿದುದಕ್ಕಾಗಿ ಬಹಳ ಸಂತೋಷವಾಗಿ, ಅವನ ಉತ್ಸಾಹವು ಇಮ್ಮಡಿ ಮುಮ್ಮಡಿಯಾಯಿತು.

### ಕಮಾಲ್-ವಿಂಡ್ಸರ್ ಭೇಟಿ



ಡ್ಯೂಕ್ ಆಫ್ ವಿಂಡ್ಸರರು ಟರ್ಕಿಗೆ ಹೋದಾಗ ತೆಗೆದ ಭಾವಚಿತ್ರವಿದು. ಚಿತ್ರದಲ್ಲಿ ಡ್ಯೂಕ್ ಆಫ್ ವಿಂಡ್ಸರ್, ಕಮಾಲ್ ಪಾಶಾ, ಡಚೆಸ್ ಆಫ್ ವಿಂಡ್ಸರರನ್ನು ಕಾಣಬಹುದು. ವಿಂಡ್ಸರ್ ಡ್ಯೂಕರು ಈಗಿನ ಪ್ರಧಾನರಾದ ಇಸ್ಮೆಟ್ ಇನೋನುರವರೊಡನೆ ಮಾತಾಡುತ್ತಿದ್ದಾರೆ.

### ಗಣಿತ ವಿಶಾರದ ಕಮಾಲ್

ಕಮಾಲನಿಗೆ ಗಣಿತದಲ್ಲಿ ತುಂಬಾ ಅಭಿರುಚಿ. ಕೆಲವೊಮ್ಮೆ ಅವನು ಉಪಾಧ್ಯಾಯರನ್ನು ತನ್ನ ಅದ್ವಿತೀಯ ಸಾಮರ್ಥ್ಯವನ್ನು ತೋರಿಸಿ ಬೆರಗುಗೊಳಿಸುತ್ತಿದ್ದನು. ಅಧ್ಯಾಪಕರು ಅವನ ಅಸಾಮಾನ್ಯ ಬುದ್ಧಿಶಕ್ತಿಯನ್ನು ಕಂಡು "ಮುಸ್ತಾಫಾ" ಎಂಬೊಂದು ಬಿರುದನ್ನು ಕೊಟ್ಟ

### ಛಡಿಯ ಕೇಡು!

ಇವೆಲ್ಲ ಬಿರುದುಗಳು ಸಿಕ್ಕಿದರೇನಾಯಿತು? ಕಮಾಲನು ಇತರ ವಿದ್ಯಾರ್ಥಿಗಳಿಂದ ಚತುರನಾದರೇನಾಯಿತು? ಒಂದು ದಿನ ಅಧ್ಯಾಪಕರೊಬ್ಬರು ಕಮಾಲನ ಬೆನ್ನಿಗೆ ಸರಿಯಾಗಿ ಛಡಿಕೊಟ್ಟದ್ದರಿಂದ ಅವನಿಗೆ ತಡೆಯಲಾರದಾಯಿತು. ಪ್ರಶಂಸೆಯ ಆನಂದಕ್ಕಿಂತಲೂ ಛಡಿಯನೋವು ಕಠಿನವಾದುದೆಂದು ಅವನಿಗರಿಯಿತು. ಈ ಪೆಟ್ಟುಗಳಿಂದ ದೂರವಾಗದೆ ಗತ್ಯಂತರವಿಲ್ಲವೆಂಬ ದೃಢ ನಿಶ್ಚಯವನ್ನು ಕಮಾಲನು ಮಾಡಿಯಾಯಿತು!

### ಶುಭ್ರ ಪೋಷಾಕಿನ ಸೈನಿಕ!

ಚಿಕ್ಕವನಾಗಿದ್ದಾಗ ಬೀದಿಗಳಲ್ಲಿ ಕೆಲವೊಮ್ಮೆ ಸಾಲಾಗಿ ನಡೆಯುತ್ತಿದ್ದ ಸೈನಿಕರ ಶುಭ್ರ ಪೋಷಾಕನ್ನು ಕಮಾಲನು ಕಂಡಿದ್ದ. ಒಂದೇ ರೀತಿಯಲ್ಲಿ ಹೆಗಲ ಮೇಲೆ ಕೋವಿಯನ್ನಿಟ್ಟು ನಡೆಯುವುದರಲ್ಲಿ ಅವನಿಗೊಂದು ವಿನೋದವು ಕಂಡಿತು. ದೃಢ ನಿರ್ಧಾರದ ಕಮಾಲನು ಸ್ಥಳೀಯ ಸೆಲೋನಿಕಾ ಸೈನಿಕ ಶಾಲೆಗೆ ಸೇರಿದ. ಅಲ್ಲಿಯ ಜೀವನವು ಅವನಿಗೆ ತುಂಬಾ ಸಂತೋಷವನ್ನುಂಟುಮಾಡಿತು. ಬಹಳ ಆಸೆಯಿಂದ ಕಮಾಲನು ಆ ಪ್ರಾಥಮಿಕ ಸೈನಿಕ ಶಾಲೆಯ ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿ ಪ್ರಥಮ ಸ್ಥಾನವನ್ನು ಹೊಂದಿದ.

### ಟರ್ಕಿಯ ನಿರಂಕುಶ ಪ್ರಭುತ್ವ.

ಕಮಾಲನ ತಾರುಣ್ಯದಲ್ಲಿ ಟರ್ಕಿಯನ್ನು ಸುಲ್ತಾನ್ ಅಹಮ್ಮದನು ತನ್ನ ನಿರಂಕುಶ ಪ್ರಭುತ್ವದ ವಿಧಾನಗಳಿಂದ ಆಳುತ್ತಿದ್ದ. ಟರ್ಕಿಯ ಜನರು ಅಂಧಶ್ರದ್ಧೆಗಳಿಂದ ತುಂಬಿದ್ದರು. ಧಾರ್ಮಿಕ ಗುರುಗಳು 'ನಿಜವಾದ ಮುಸ್ಲಿಮರಿಗೆ ಸುಖವೆಂದರೆ

ಸ್ವರ್ಗದಲ್ಲಿ' ಎಂಬಿವೇ ಮೊದಲಾದ ವಿವಿಧ ಬೋಧನೆಗಳನ್ನು ಕೊಡುತ್ತಿದ್ದರು. ಸಮಾಜದ ಅರ್ಧಾಂಶದಷ್ಟು ಸ್ತ್ರೀಯರು ಪರ್ದೆಯೊಳಗಿದ್ದು ನಿರರ್ಥಕ ಜೀವನವನ್ನು ನಡೆಸುತ್ತಿದ್ದರು. ಧಾರ್ಮಿಕ ವಿದ್ಯಾಭ್ಯಾಸವಲ್ಲದೆ ಜಗತ್ತಿಗೆ ಅವಶ್ಯವಿರುವ ವಿದ್ಯೆಯು ಕಡೆಗಣಿಸಲ್ಪಡುತ್ತಿತ್ತು. ತರುಣ ಕಮಾಲನು ಕೊಳೆಯುತ್ತಿದ್ದ ಸಮಾಜದ ದುಷ್ಟ ಪದ್ಧತಿಗಳನ್ನು ಕಂಡು ಕೋಪದಿಂದ ಕಿಡಿಕಿಡಿಯಾಗುತ್ತಿದ್ದನು.

## 'ಯುರೋಪಿನ ರೋಗಿ'

೧೮೭೭ರ ರಷ್ಯೋ-ಟರ್ಕಿಷ್ ಯುದ್ಧದಿಂದ ದಾರಿದ್ರ್ಯವು ಟರ್ಕಿಯಲ್ಲಿ ಮನೆ ಮಾಡಿಕೊಂಡಿತ್ತು. ರಷ್ಯದ ಝಾರನಾದ ಒಂದನೇ ನಿಕೋಲಸನು ಟರ್ಕಿಯನ್ನು "ಯುರೋಪಿನ ರೋಗಿ"ಯೆಂದು ಕರೆದಿರುವುದರಿಂದ ಅಂದಿನ ಟರ್ಕಿಯ ಪರಿಸ್ಥಿತಿಯನ್ನು ಚುಟುಕಾಗಿ ಆತನು ಹೇಳಿರಬೇಕೆಂದು ಸ್ಪಷ್ಟವಾಗುತ್ತದೆ.

## ನವಜಾಗೃತಿಯ ಬೆಳಕು.

ಇದಿಗೋ, ನವಜಾಗೃತಿಯ ಶುಭ್ರ ಕಿರಣಗಳು ಟರ್ಕಿಯ ಮೂಲೆ ಮೂಲೆಗಳಿಂದ ಕಾಣಿಸತೊಡಗಿದವು. ಫ್ರೆಂಚ್ ಕ್ರಾಂತಿಯ ಝುಂಝಾವಾತವು ಟರ್ಕಿಗೂ ಬೀಸುತ್ತಿತ್ತು. ರಾಜತ್ವದ ಅಡಿಗಲ್ಲನ್ನೇ ಕೀಳುವಂತಹ ವಿವಿಧ ಗುಪ್ತಸಂಘಗಳು ಟರ್ಕಿಯ ಎಲ್ಲೆಡೆಗಳಲ್ಲಿಯೂ ತಲೆದೋರಿ ಪ್ರಬಲ ಚಟುವಟಿಕೆಗಳನ್ನು ನಡೆಸಲಾರಂಭಿಸಿದುವು. ಮಹಾಶಕ್ತಿಪೂರ್ಣವಾದ ಸುಧಾರಣೆಯ ಪ್ರವಾಹದ ಹೊಯ್ಲಿನಲ್ಲಿ ತರುಣ ಕಮಾಲನೂ ಸೇರಿಕೊಂಡನು.

## ೨೨ ವರ್ಷದ ವೀರ ಸೈನಿಕ

ಮುಸ್ತಾಫಾ ಕಮಾಲನು ವಿವಿಧ ಸೈನಿಕ ಶಾಲೆಗಳಲ್ಲಿ ಎಲ್ಲಾ ವಿಧದ ಶಿಕ್ಷಣವನ್ನು ಪಡೆದ ೨೨ ವರುಷದ ನವತರುಣನಾಗಿದ. 'ಪ್ರಗತಿಯ ಸಮಾಜ'ವೆಂಬ ಪ್ರಭಾವಮಯ ಗುಪ್ತ ಸಂಘಕ್ಕೆ ಅವನು ಸೇರಿಕೊಂಡ. ಎಲ್ಲಾ ಸದಸ್ಯರಿಂದ ಕಮಾಲನು ಈ ಸಂಘದಲ್ಲಿ ವಿಶೇಷ ಕೆಲಸ ಮಾಡಿ ಅದರ ಧುರೀಣನೆನಿಸಿಕೊಂಡ.



ಮುಸ್ತಾಫಾ ಕಮಾಲರ ಒಂದು ರೇಖಾ ಚಿತ್ರ.

## ಪತ್ರಿಕೋದ್ಯಮಿ ಕಮಾಲ್

ಸುಧಾರಣೆಯ ಉತ್ಸಾಹಪೂರಿತ ರಕ್ತವು ನಾಳಗಳಲ್ಲಿ ಸಂಚರಿಸುತ್ತಿದ್ದಾಗ ಕಮಾಲನಿಗೆ "ವಾತನ್" ಅಥವಾ "ಪಿತೃಭೂಮಿ"ಯೆಂಬೊಂದು ಕ್ರಾಂತಿಕಾರಕ ಪುಸ್ತಕವು ದೊರಕಿತು. ಈ ಪುಸ್ತಕವನ್ನು ಸುಲ್ತಾನನು ಮೊದಲೇ ನಿಷೇಧಿಸಿದ್ದನು. ಕ್ರಾಂತಿಕಾರೀ ಕಮಾಲನಿಗೆ ಇದನ್ನೋದಿದ ಬಳಿಕ ಮತ್ತಷ್ಟು ಸ್ಫೂರ್ತಿ ಹೆಚ್ಚಿತು. ಎಲ್ಲೆಲ್ಲಿಯೂ ಈ ಪುಸ್ತಕದ ಕುರಿತು ಅವನು ಭಾಷಣ ಮಾಡಿದ. ಮಾತ್ರವಲ್ಲ, ೧೯೦೩ರಲ್ಲಿ ಒಂದು ಕ್ರಾಂತಿಕಾರಕ ಪತ್ರಿಕೆಯನ್ನು ಹೊರಡಿಸಿ ಬಹಿರಂಗವಾಗಿ ಸುಲ್ತಾನರನ್ನು ಖಂಡಿಸಲಾರಂಭಿಸಿದ. ಆಗ ಕ್ರಾಂತಿಕಾರೀ ಮನೋವೃತ್ತಿಯ ತರುಣ ತಂಡಕ್ಕೆ ಕಮಾಲನು ಆದರ್ಶ ಮುಂದಾಳುವಾಗಿದ್ದ.


## ಸೆರೆಮನೆಯೊಳಗಿನ ಬೆಂಕಿ.

ಜನವರಿ ೧೧, ೧೯೦೫ರಂದು ಕಮಾಲನನ್ನು ಸೈನಾಧಿಪತಿಯನ್ನಾಗಿ ಮಾಡುವ ಬದಲು ಸೆರೆಮನೆಗೆ ಕರೆಯುವ ಆಹ್ವಾನವೊಂದು ಅವನಿಗೆ ಬಂತು. ಮೂರು ತಿಂಗಳುಗಳ ತನಕ ಜೈಲಿನಲ್ಲಿ ಸುಲ್ತಾನನ ನೆಂಟನಾದ ಬಳಿಕ ಡೆಮಾಸ್ಕಸಿನಲ್ಲಿ ಅವನಿಗೆ ಸಾಮಾನ್ಯ ಸೈನಿಕನ ಕೆಲಸವು ದೊರಕಿತು. ಕಮಾಲನ ಕ್ರಾಂತಿಕಾರೀ ಮನೋವೃತ್ತಿಗೆ ಇದು ಸರಿಬೀಳಲಿಲ್ಲ. ಅವರ ಗುಪ್ತಚಟುವಟಿಕೆಗಳು ಹೆಚ್ಚುತ್ತಿದ್ದುದರಿಂದ ಅವನನ್ನು ಯೆಹೂದೀ ನಗರವಾದ ಜಾಫಾಕ್ಕೊಯ್ಯಲಾಯಿತು. ಪುಣ್ಯವಶಾತ್ ಅಲ್ಲಿಯ ದಳಪತಿಯ ಸಹಾಯದಿಂದ ಕಮಾಲನು ಸೆಲೊನೀಕಕ್ಕೆ ಓಡಿಹೋದನು. ಆ ಕಾಲದಲ್ಲಿ ಸೆಲೊನೀಕವು ಕ್ರಾಂತಿಕಾರರ ತವರುಮನೆಯಂತಿತ್ತು. ಅಲ್ಲಿ ಅವನನ್ನು ಹುಡುಕುತ್ತಿದ್ದುದರಿಂದ ಮುಸ್ತಾಫನು ಆಕಾಬಾಕ್ಕೆ ಓಡಬೇಕಾದರೂ ಯುದ್ಧಮಂತ್ರಿಮಂಡಲದಲ್ಲಿ ಪ್ರಾಮುಖ್ಯ ಬದಲಾವಣೆಗಳಾದುದರಿಂದ ಆತನಿಗೆ ದಳಪತಿಯಾಗುವ ಒಂದು ಸಂದರ್ಭವು ದೊರಕಿತು.

## ಕ್ರಾಂತಿಕಾರೀ ಪಕ್ಷ.

ಈ ವಿರಾಮಕಾಲದಲ್ಲಿ ಅವನು ಅಸಮಾಧಾನವುಳ್ಳ ಕ್ರಾಂತಿಕಾರರನ್ನು ಒಂದುಗೂಡಿಸಿ 'ಸ್ವಾತಂತ್ರ್ಯ ಸಂಘ' ಮತ್ತು "ಪ್ರಗತಿ ಸಂಘ"

(೩೫ನೇ ಪುಟ ನೋಡಿರಿ.)



# ನಿಮಗೆ ಬೇಸರವಾದಾಗ ನನಗೆ ಬರೆಯಿರಿ.

ಪ್ರಶ್ನೆಗಳನ್ನು ಕೇಳುವವರು ತಮ್ಮ ಸಂಪೂರ್ಣ ವಿಳಾಸವನ್ನು ಕೊಡಬೇಕು. ಪೂರ್ಣ ವಿಳಾಸಗಳನ್ನು ಕೊಡದವರ ಪ್ರಶ್ನೆಗಳು ಉತ್ತರಿಸಲ್ಪಡಲಾರವು. ಪ್ರಶ್ನೆಗಳು ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಡಬೇಕು. ಅಯೋಗ್ಯವೆಂದು ಕಂಡುಬಂದ ಪ್ರಶ್ನೆಗಳಿಗೆ ಉತ್ತರಕೊಡಲಾಗುವುದಿಲ್ಲ. ತಮ್ಮ ಪ್ರಶ್ನೆಗಳು ಹಿಂದೆಕಳುಹಿಸಲ್ಪಡಬೇಕೆಂದು ಬಯಸುವವರು ಅದಕ್ಕಾಗುವ ಅಂಚೆಚೀಟನ್ನು ಕಳುಹಿಸಿಕೊಡಬೇಕು.

## ಶ್ರೀ. ಜಗನ್ನಾಥ ಶೆಟ್ಟಿ, ಕಟಪಾಡಿ.

೧ ಶ್ರೀಮತಿ ಕಮಲಾದೇವಿ, ಶ್ರೀಯುತ ಶ್ರೀನಿವಾಸ ಮಲ್ಯ, ಶ್ರೀಯುತ ಕಾಂತಪ್ಪ ಶೆಟ್ಟಿ ಇವರಲ್ಲಿ ಯಾರು ಹೆಚ್ಚು? ಯಾರು ಕಡಿಮೆ?

ಯಾವುದರಲ್ಲಿ? ಭಾರದಲ್ಲಾದರೆ ಶ್ರೀಮತಿ ಕಮಲಾದೇವಿಯರು.

೦೦೦

೨ ಈ ಮೇಲಿನವರಲ್ಲಿ ಯಾರು ಯಾರು ಯಾವ-ಯಾವ ಪಂಗಡಕ್ಕೆ ಸೇರಿದವರು.

ಶ್ರೀಮತಿ ಕಮಲಾದೇವಿಯವರು ಕಾಂಗ್ರೆಸ್ ಸಮತಾವಾದಿಗಳೆಂದು ತಾನು ಹೇಳುತ್ತಾರೆ. ಇತ್ತೀಚೆಗೆ 'ಬಲ'ಬದಿಗೆ ಸರಿಯುತ್ತಿದ್ದಾರೆಂದು ಯಾವುದೋ ಒಂದು ಪತ್ರಿಕೆಯಲ್ಲಿ ಓದಿದ ನೆನಪು ಬರುತ್ತದೆ.

ಶ್ರೀ ಮಲ್ಯರು ಕಾಂಗ್ರೆಸ್ 'ಬಲ' (?) ಪಕ್ಷದವರಾದರೂ ಎಡಪಕ್ಷದ ಕಡೆಗೆ ಎಡವುವವರು.

ಶ್ರೀ ಶೆಟ್ಟರು ಮೊದಲು ಎಡಪಕ್ಷದ ತೀವ್ರಗಾಮಿಗಳಾಗಿದ್ದರೂ ಈಗ ಬಲ (ವಿಲ್ಲದ) ಪಕ್ಷದ 'ತೀವ್ರಗಾಮಿ' ಗಳಾಗಿದ್ದಾರೆ.

ಚುಟುಕಾಗಿ ಹೇಳುವುದಿದ್ದರೆ ಮೇಲಿನ ಮೂವರಿಗೆ ತಮ್ಮತಮ್ಮದೇ ಪಂಗಡವಿದೆ.

೦೦೦

೩ ಯಾವ ಧ್ಯೇಯ ಸಾಧಕರು?

ದೇಶೋದ್ಧಾರಕರು!

೦೦೦

೪ ಈ ಮೇಲಿನ ಯಾರೊಬ್ಬರಿಂದಾಗಲೀ ನಮ್ಮ ಕಾಂಗ್ರೆಸಿನ ವರ್ಚಸ್ಸು ಹೆಚ್ಚಾಗಿದೆಯೇ? ಹೇಗೆ?

ನಿಮ್ಮ ಕಾಂಗ್ರೆಸಿನ ವರ್ಚಸ್ಸು ಹೆಚ್ಚಾಗಿದೆಯೋ ಇಲ್ಲವೋ ಎಂಬುದು ತಿಳಿದಿಲ್ಲ. ಅವರ ಕಾಂಗ್ರೆಸಿನ ವರ್ಚಸ್ಸು ಹೆಚ್ಚಿರುವುದೆಂದು ಅವರು ಭಾವಿಸಿರಬಹುದು. ಅದು ಹೆಚ್ಚಿರುವುದಕ್ಕೆ ಪತ್ರಿಕೆಗಳೇ ಕಾರಣವಾಗಿರಬಹುದು.

೫ ಪ್ರಯೋಗಾರ್ಥವಾಗಿ ಕನಿಷ್ಟಪಕ್ಷ ಇವರನ್ನು ಐದೈದು ವರ್ಷ ಬೇರೆ ಜಿಲ್ಲೆಗೆ ಕಳುಹಿಸಿದರೆ ನಮ್ಮ ಭವಿಷ್ಯ ಹೇಗೆ? ಮತ್ತು ಅವರು ಹೋದ ಜಿಲ್ಲೆಯಲ್ಲಿ ಯಾವ ಹೊಸ ಮಾರ್ಪಾಟ ಉಂಟಾದೀತು?

ಇಂತಹ ಹಾಸ್ಯಕಾರಕ ಸೂಚನೆಯನ್ನು ಮಾಡಬೇಡಿ. ಅವರೆಲ್ಲರೂ ನಮ್ಮ ಜಿಲ್ಲೆಗೆ ಬೇಕಾಗಿದ್ದಾರೆ. ಅವರಿಲ್ಲದಿದ್ದರೆ ನಮ್ಮ ಜಿಲ್ಲೆಗೆ ಜೀವವೇ ಇಲ್ಲ. ನಮ್ಮ ಜಿಲ್ಲೆಯ ಎಂಟು ವಾರಪತ್ರಿಕೆಗಳ ಪುಟಗಳು ಹೆಚ್ಚಾಗಿ ತುಂಬುತ್ತಿರುವುದು. ಅವರ ವಿವಾದಗಳಿಂದ. ಒಂದು ದಿನಪತ್ರಿಕೆಯು ಅವರ ಮಹಾಭಾರತದ ವಿವರವನ್ನೇ ಪ್ರಕಟಿಸುತ್ತಿದೆ. ಅವರಿಂದ ಇಷ್ಟೆಲ್ಲಾ ಪ್ರಯೋಜನವಾಗುತ್ತಿರುವಾಗ ನೀವು ಇಂತಹ ಸೂಚನೆಯನ್ನು ಮುಂದೆ ತರಬಹುದೆ?

ಒಂದು ವೇಳೆ ಅವರು ಬೇರೆ ಜಿಲ್ಲೆಗಳಿಗೆ ಹೋಗುವಂತಾದರೆ ನಮ್ಮ ಜಿಲ್ಲೆಯ ಭವಿಷ್ಯವು ನೀರಸವಾಗುವುದು.

ಅವರು ಹೋಗಬಹುದಾದ ಜಿಲ್ಲೆಗಳಲ್ಲಿ ಮತ್ತೊಂದು ಮಹಾಭಾರತವು ಪ್ರಾರಂಭವಾಗಬಹುದು. ಜಿಲ್ಲೆಯ ಭವಿಷ್ಯದ ಕುರಿತು ಕೇಳುತ್ತೀರಿ. ಒಬ್ಬ ಜೋಯಿಸರ ಕೂಡೆ "ಶನಿಗ್ರಹವು (Saturn) ಸೂರ್ಯಸಂಸ್ಥಾಯ(Solar System) ದಿಂದ ಹೊರಟುಹೋದರೆ ಭೂಮಿಯ ಪರಿಸ್ಥಿತಿ ಹೇಗಾಗಬಹುದು'

ಎಂದು ಕೇಳಿದರೆ ಅವರೇನಂದಾರು ಪಾಪ!

೦೦೦

೬ ವಿಶ್ವಾಸವಿಲ್ಲದ ದೇವೀ—ಮಲ್ಯರಲ್ಲಿ ವಿಶ್ವಾಸವಿಡಬೇಕೆಂದು ಜಿಲ್ಲೆಯಲ್ಲೆಲ್ಲಾ ಸಾರುತ್ತಾ ಬಂದ ಶೆಟ್ಟರಿಗೇ ಇಂದು—ಅವರಲ್ಲಿ ಅವಿಶ್ವಾಸ ಉಂಟಾದುದರ ಅಂತರಂಗವೇನು ಬಲ್ಲಿರಾ?

'ವಿ-ಶ್ವಾಸ'ದ ಶ್ವಾಸವು ಹೊರಟು ಹೋಗಿರುವುದರಿಂದಾಗಿರಬಹುದು.

೦೦೦

೭ ಮುಂದೆ ನಡೆಯಲಿರುವ ಅವಿಶ್ವಾಸ ಠರಾವಿನ ಗತಿಯು ಏನಾಗಬಹುದೆಂದು ನೀವು ಊಹಿಸಿ ಹೇಳಬಲ್ಲಿರಾ?

ಅಧೋಗತಿ!

೦೦೦

೮ ಠರಾವಿಗೆ ಸಹಿಮಾಡಿದ 34 ಮೆಂಬರರಲ್ಲಿ ಕನಿಷ್ಟ ಎಷ್ಟು ಜನರು ಸಭೆಗೆ ಹಾಜರಾದಾರು?

ಇದು ಸಭೆ ಜರಗುವ ದಿನದ ಹವಾಮಾನದ ಮೇಲೆ ಹೊಂದಿಕೊಂಡಿದೆ.

೦೦೦

೯ ಅವಿಶ್ವಾಸ ಠರಾವು ಪಾಸಾದರೆ ಮುಂದಿನ ಪ್ರೆಸಿಡೆಂಟರಾರು?

ನ್ಯಾಯವಾಗಿ ಶ್ರೀ. ಯಸ್. ಯನ್ ಹೊಳ್ಳರಿಗೆ ಅದು ಸಿಗಬೇಕು!

೦೦೦

೧೦ ಪಾಸಾಗದೆ ಶೆಟ್ಟರ ಮೇಲೆ ಶಿಸ್ತು ಜಾರಿಯಾದರೆ ಜಿಲ್ಲೆಯ ಕಾಂಗ್ರೆಸಿನಲ್ಲಿ ಶೆಟ್ಟರ ಸ್ಥಾನಯಾವುದು?

ಶಿಸ್ತು ಜಾರಿಯಾದ ಮೇಲೂ ಕಾಂಗ್ರೆಸಿನಲ್ಲಿ ಸ್ಥಾನಯಾವುದೆಂದರೆ? ಗೇಟಿನ ಹೊರಗೆ!

೦೦೦

೧೧ ಕಿಲ್ಲೆಯವರೆಂದೊಡನೆ ಮುನಿದು ಬೀಳುತ್ತಿದ್ದ ಶ್ರೀ. ಕೆ. ಕೆ. ಶೆಟ್ಟರು ಇಂದು ಅವರನ್ನು ಕಟ್ಟಿಕೊಂಡು ಪೆಟ್ರೋಲ್ ಸುಡುವುದರ ಒಳಗುಟ್ಟೇನು?

ಶ್ರೀ. ಶೆಟ್ಟರು ಶ್ರೀ ಕಿಲ್ಲೆಯವರನ್ನು ಎಲ್ಲಿಗೆ ಕಟ್ಟಿಕೊಂಡಿದ್ದಾರೆಂದು ನನಗರಿತಿಲ್ಲ. ಪೆಟ್ರೋಲ್ ಸುಡುತ್ತಿರುವುದು ಪ್ರಾಯಶ: ಅವಿಶ್ವಾಸ ಠರಾವಿನ ರಥ ನಡೆಸಲಿಕ್ಕಾಗಿರಬಹುದು.

೦೦೦

೧೨ ಶ್ರೀ. ಕಿಲ್ಲೆಯವರಿಗೂ ಜಿಲ್ಲೆಯಲ್ಲಿ ಒಂದು ಸ್ಥಾನವಿದೆ ಎಂದು ಶೆಟ್ಟರು ಇಂದು ತಿಳಿದ ಬಗೆ ಹೇಗೆ?

ಪ್ರಾಯಶಃ 'ನಾರುವ ಜಿಲ್ಲೆ'ಯ ಇತಿಹಾಸ ಸಂಶೋಧನೆಯ ಕಾಲದಲ್ಲಿರಬಹುದು.

೦೦೦

೧೩ ಶೆಟ್ಟಿ-ಕಿಲ್ಲೆಯವರ ಸಂಧಿಯು ಶಾಶ್ವತವಾಗಿ ಉಳಿದೀತೆ? ಅಥವಾ ದೇವಿ. ಶೆಟ್ಟರಂತೆ ಆದೀತೆ?

ಇವರಿಬ್ಬರ ಸಂಧಿಯು ಸಮರದ ಪರಿಣಾಮದ ಮೇಲೆ ಹೊಂದಿಕೊಂಡಿದೆ.

೦೦೦

೧೪ ಶ್ರೀ ಶೆಟ್ಟರು ಸ್ವಯಂ ನವಯುಗದ ಸಂಪಾದಕರಾಗಿದ್ದು ಕಾಂಗ್ರೆಸ್ ಕಮಿಟಿಯ ಟೀಕೆ ಟಿಪ್ಪಣಿಗಳು (ಅರ್ಥಾತ್ ಬೈದಾಟಗಳು) ಜಿಲ್ಲೆಯ ಉಜ್ವಲ ರಾಷ್ಟ್ರೀಯ ಪತ್ರಿಕೆಯಾದ ರಾಷ್ಟ್ರಬಂಧುವಿನಲ್ಲಿ ಬರಲು ಕಾರಣವೇನು?

'ನವಯುಗ'ವು ರಾಷ್ಟ್ರಬಂಧುವಿನಷ್ಟು ಉಜ್ವಲವಲ್ಲದಿದ್ದುದರಿಂದ.


೦೦೦

೧೫ ನಮ್ಮ ಜಿಲ್ಲೆಯಲ್ಲಿ ನಿಜವಾದ ಕಾಂಗ್ರೆಸ್ ಕೆಲಸಗಾರರಿರುವರೇ?

ಇರಬಹುದು; ಆದರೆ ಎಲ್ಲಿದ್ದಾರೆಂದು ಗೊತ್ತಿಲ್ಲ.

೦೦೦


Regd.




# ಮೇಹಧ್ವಂಸಿನಿ

ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ. ಶರೀರವನ್ನು ಕೃಶಿಸಿ ಮಾನವನ ಜೀವಶ್ರವೆಗೈಯುತ್ತಿರುವ ಬಿಳುಪು, ಕೆಂಪು, ಪರಂಗಿ ಹುಣ್ಣು, ಮೇಹಗಡ್ಡೆ, ಮೇಹಜ್ವರ, ಚರ್ಮವ್ಯಾಧಿ, ಕೀಲುಗಳ ನೋವು, ಅತಿಮೂತ್ರ ವಗೈರೆ ಚಿನ್ಹೆಗಳನ್ನು 'ಮೇಹಧ್ವಂಸಿನಿ'ಯು ಶೀಘ್ರವಾಗಿ ಖಂಡಿಸಿ, ರಕ್ತಶುದ್ಧಿ ಮಾಡಿ ನರಗಳಿಗೆ ಬಲವನ್ನೀಯುವುದು. ಸೇವಿಸುವುದಕೆ ಹಿತಕರ. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತಗುಣವಿದೆ

ದೊಡ್ಡಸೈಜು 4-0-0. ಮಿಡಿಯಂ ಸೈಜು 2-4-0. ಚಿಕ್ಕ 1-2-0

ಹಂಚಿ ಕೊಡುವ ಪ್ರಮುಖರು:- ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು.

ಸಬ್ ಏಜಂಟರು:— ಉಡುಪಿ ಮಿಶ್ಯನ್ ಶೋಪ್, ಸಂತೆಕಟ್ಟೆ, ಉಡುಪಿ.

ವಿ. ವಿ. ಶೆಣೈ, ಕಾರ್ಕಳ. ಭಕ್ತಾ ಬ್ರದರ್ಸ್, ಕಾಸರಗೋಡು.

**ಶ್ರೀ. ಟಿ. ಆರ್ ಭಾಗವತ, ಕರ್ನಾಟಕ, ಕಾಲೇಜ್ ಹಾಸ್ಟೆಲ್, ಧಾರವಾಡ.**

---

**ಕಳೆದ ವಾರದ ‘ಅಂತರಂಗ’ವನ್ನು ನೋಡಿ ಮನಸ್ಸಿಗೆ ಅತೀವ ಬೇಜಾರಾಯಿತು. ‘ಅವನೂ ಪಾಲುಗಾರ’ ಇದೊಂದು ಅಶ್ಲೀಲ ಅಸಂಭವನೀಯ ಕತೆ. ‘ದೊಡ್ಡಮ್ಮನ ದೂರದೃಷ್ಟಿ’ ಇದೊಂದು ಹೊಸ ನಮೂನೆಯ ಎಡ್ವರ್ಟೈಸಮೆಂಟ್ (*Advertisement*) ‘ವೀರನಾರಿ’ ಯಂತೂ ಈ ಮೊದಲು ಎಷ್ಟೋ ಬಾರಿ ಮುದ್ರಿತವಾಗಿದೆ. ಅದೊಂದು ಥರ್ಡ್ ಹೇಂಡ್ (*Third hand*) ಕತೆ ಇಂಥ ಲೇಖನಗಳಿಗೆಲ್ಲಾ ನೀವು ನಿಮ್ಮ ಪತ್ರಿಕೆಯಲ್ಲಿ ಎಡೆಯನ್ನೇಕೆ ಕೊಡುವಿರಿ?**

ನಿಮಗೆ ಬೇಸರವಾದುದಕ್ಕೆ ನನ್ನ ಹಾರ್ದಿಕ ಸಹಾನುಭೂತಿಗಳು. ಅವನೂ ಪಾಲುಗಾರ’ ಎಂಬ ಕತೆ, ಯನ್ನು ಅಸಂಭವನೀಯವೆಂದು ವಿದ್ಯಾರ್ಥಿಯಾಗಿರುವ ನೀವು ಈಗ ಹೇಳುವುದರಲ್ಲಿ ಅರ್ಥವಿದೆ. ನಿಮಗದು ಅಸಂಭವನೀಯವೆಂದು ಕಂಡರೂ ಕತೆಯಲ್ಲಿ ಹೇಳಲ್ಪಟ್ಟಂಥ ಕತೆಗಳು ಎಷ್ಟೋ ಕಡೆಗಳಲ್ಲಿ ಈಗಲೂ ಸಂಭವಿಸುತ್ತಿವೆ. ಕೆಲವು ವರುಷಗಳ ಬಳಿಕ ನೀವು ನಿಮ್ಮ ಅಭಿಪ್ರಾಯವನ್ನು ವ್ಯತ್ಯಾಸಮಾಡಲೂಬಹುದು. ಆ ಕತೆಯು ತೆಲುಗಿನಲ್ಲಿ ಅಶ್ಲೀಲವಾಗಿರಲಿಲ್ಲ. ಹಿಂದಿಯಲ್ಲಿ ‘ಉಗ್ರ’ರ ಇಂಗ್ಲಿಷಿನಲ್ಲಿ ಕಿಪ್ಲಿಂಗರ, ಫ್ರೆಂಚ್‌ನಲ್ಲಿ ಮೋಪಸಾಂತರ, ಇಂಥ ಕತೆಗಳು ಅಶ್ಲೀಲವೆಂದು ಭಾವಿಸಲ್ಪಡುವುದಿಲ್ಲ. ಪ್ರಾಚೀನ ಕಾವ್ಯಗಳಲ್ಲಿ ಅಷ್ಟಾದಶವರ್ಣನೆಗಳಲ್ಲೊಂದಾದ ಸುರತವರ್ಣನೆಯನ್ನೋದಿದರೆ ಅಶ್ಲೀಲವೆಂಬುದೇ ಕನ್ನಡ ಸಾಹಿತ್ಯದಲ್ಲಿ ಇಷ್ಟಿಲ್ಲವೆಂದು ಗೊತ್ತಾಗುತ್ತದೆ. ಕನ್ನಡದ ಕತೆಗಳಲ್ಲಿ ಸುಶ್ಲೀಲವಾದ ‘ಆನಂದ’ರ ‘ನಾವೂ ಹಾಗೆಯೇ’ ಎಂಬ ಕತೆಯಂತಹ ಕತೆಗಳನ್ನು ಓದಿ ಆ ಮೇಲೆ ಇಂಥ ಅಶ್ಲೀಲ ಕತೆಗಳನ್ನು ಓದಿದರೆ ‘ಅಶ್ಲೀಲ’ಕ್ಕಿಂತಲೂ ‘ಸುಶ್ಲೀಲ’ ಕತೆಗಳು ಹೆಚ್ಚು ಭಯಂಕರವಾದುವುಗಳೆಂದು ನಿಮಗೆ ತಿಳಿಯಬಹುದು.

‘ದೊಡ್ಡಮ್ಮನ ದೂರದೃಷ್ಟಿ’ಯ ಹೊಸತನಕ್ಕಾಗಿಯೇ ಅದನ್ನು ಪ್ರಕಟಿಸಲಾಗಿದೆ. “ವೀರನಾರಿ” ಯೆಂಬ ಕತೆಯು ‘ಅಂತರಂಗ’ದಲ್ಲಿ ಮುದ್ರಿತವಾದುದು ಅದೇ ಮೊದಲನೆಯ ಬಾರಿ. ಅದು ನಿಮಗೆ ‘ಥರ್ಡ್ ಹೇಂಡ್’ ಆಗಿದ್ದರೆ ಅನೇಕರಿಗೆ ‘ಫಸ್ಟ್ ಹೇಂಡ್’ ಆಗಿರಬಹುದೆಂದು ಅದಕ್ಕೆ ಎಡೆಕೊಡಲಾಯಿತು.

---


# ಯು. ಆರ್. ಶೆಣೈ ಎಂಡ್ ಸನ್ಸ್.

**ಹೆಡ್ ಆಫೀಸ್:-ರಥಬೀದಿ. ] ಮಂಗಳೂರು. [ ಬ್ರಾಂಚ್:-ಕೊಡಿಯಾಲಬೈಲ್.**

ಎಲ್ಲಾ ತರದ ಶಾಲಾ ಕಾಲೇಜು ಪುಸ್ತಕಗಳು, ಸ್ಟೇಶನೆರಿ, ಕಟ್ಲೆರಿ, ಪ್ರಿಂಟಿಂಗ್ ಶಾಯಿ ಮತ್ತು ಮದುವೆ ಉಪನಯನಾದಿಗಳಿಗೆ ಬೇಕಾದ ಸುಗಂಧ ದ್ರವ್ಯ ಉಡುಗರೆ ವಗೈರೆಗಳು ಮತ್ತು ಪ್ರಿಂಟಿಂಗ್ ಕಾಗದಗಳು ನಮ್ಮಲ್ಲಿ ಸುಲಭ ದರದಲ್ಲಿ ಸಿಗುವುವು.

For all kinds of School and College requisites, Books, Stationary Articles, Printing inks, and students' everyday requisites:-

# U. R. SHENOY & SONS,

*Car Street, Mangalore, Branch at Kodialbail.*

***BINDING IS OUR SPECIALITY.***

# PRESERVE YOUR LIFE INSURANCE:

## FOR IT BEGINS WHERE YOU GIVE UP

When you marry you take a contract on your hands to support and bring up a family. But, who knows you may have to give up that right in the midst of it. So many have had to do.

It is here that the Life Policy Comes in. It is the bond that helps you to fulfil the contract and keep your honour and your family in tact.

**It Begins where you give up:** It goes ahead and supports the Family, comes through the contract honourably and releases you. It also stands behind and protects your business obligations and your good name.

THIS IS LIFE INSURANCE AND IT IS THE ONLY BOND THAT WILL DO IT

**HAVE THAT POLICY BOND**

IN

# THE LAKSHMI INSURANCE COMPANY LIMITED.

**Head Office: LAHORE.**

For Agency Particulars Please apply to:

**THE BRANCH MANAGER.**
334, THAMBUCHETTY ST.
G. T. MADRAS.

OR

**A. B. KRISHNA RAJ,**
ORGANISER
Ramakrishna Bldgs.,
UDIPI.

# ನಗೆ ಡೋಲು!



ಶಾಲೆಯಲ್ಲಿ ಅಧ್ಯಾಪಕರು ವಿನೋದದ ಕುರಿತು ವಿವರಿಸಿ ಒಂದು ಉದಾಹರಣೆಯನ್ನು ಕೊಟ್ಟರು: "ರಾಮು ಶಾಲೆಯಿಂದ ಹೋದೊಡನೆಯೇ ಅವನ ತಾಯಿ ಹೇಳಿದರು, ಕೆಟ್ಟ ಹುಡುಗಾ, ಇವತ್ತು ಕೂಡಾ ಜಗಳವಾಡಿ ನಿನ್ನ ಹಲ್ಲುಗಳನ್ನು ಕಳಕೊಂಡಿದ್ದಿ? ಎಂದು. ರಾಮು ಹೇಳಿದ— ಇಲ್ಲವಮ್ಮಾ. ಎರಡೂ ಹಲ್ಲುಗಳು ನನ್ನ ಜೇಬಿನಲ್ಲಿವೆ."

ಇದನ್ನು ಕೇಳಿ ಕ್ಲಾಸಿನಲ್ಲಿ ಯಾರೂ ನಗಲಿಲ್ಲ. ಮಾಸ್ತರರು ಸಿಟ್ಟಿನಿಂದ ಹೇಳಿದರು-"ಏಕೆ ನಗೋದಿಲ್ವಾ ಹುಡುಗ್ರಾ? ನಾನೀಗ ಹೇಳಿದ್ದೊಂದು ವಿನೋದದ ಮಾತು."

ಕೂಡಲೆ 'ಘೋ' ಎಂದು ಎಲ್ಲರೂ ನಕ್ಕರು.

---

ಹೊಟೆಲಿನ ಮಾಣಿಹೇಳಿದ. "ಈ ಚಾ ಸ್ವಾಮೀ, ನೀಲಗಿರೀದ್ದು ಬಹಳಚೆನ್ನಾಗಿದೆ."

ಕಾಫಿಕುಡಿಯಲಿಕ್ಕೆ ಹೊಟೆಲಿಗೆ ಬಂದಿದ್ದ ರಾಮರಾಯರು ಕೇಳಿದರು: ನೀನು "ಯಾವಾಗ ಅಲ್ಲಿಂದ ಬಂದಿಯೋ ಮಾಣಿ?"

---

ಎರಡೂ ಕೈಗಳಲ್ಲಿ ಲೀಲುವನ್ನು ಆಲಿಂಗಿಸಿ ಹೇಳಿದ ಮೋಹನ. "ಲೀಲೂ, ನಾನೀಗ ನಿನ್ನನ್ನು ಚುಂಬಿಸಿದರೆ ನೀನೇನು ಮಾಡುವೆ?

"ನಾನು ಅಪ್ಪನನ್ನು ಕರೆಯುತ್ತೇನೆ." ಮೋಹನ ಹೆದರಿ ಅವಳ ಬಳಿಯಿಂದ ದೂರಸರಿದು ಆಶ್ಚರ್ಯದಿಂದ ಕೇಳಿದ-"ನಿನ್ನಪ್ಪ ಧಾರವಾಡಕ್ಕೆ ಹೋಗಲಿಲ್ವೇ? "ಹೋಗಿದ್ದಾರೆ. ಹೋದ್ರೆ ಕರೆಯಬಾರ್ದೂಂತ ಕಾನೂನುಂಟೇ?" ಎಂದಳಾಕೆ.

---

"ನೀನು ಮುಖಕ್ಕೆ ಪೌಡರ್ ಹಾಕುವುದೇಕಕ್ಕಾ?" ಎಂದು ಕೇಳಿದ ತಮ್ಮ.

"ಚಂದವಾಗಲಿಕ್ಕೆ ಶ್ಯಾಮ" ಎಂದಳಾಕೆ.

"ಬಹುಶಃ ಅದು ಚಂದಮಾಡುವ ಪೌಡರಲ್ಲಕ್ಕಾ" ಎಂದು ಆಕೆಯ ಮುಖವನ್ನು ನೋಡಿ ಹೇಳಿದ ಶ್ಯಾಮು!

---

"ರೇ,- ಹುಡುಗಾ, ಕಷಾಯ ಕೇಳಿದ್ದಕ್ಕೆ ನೀರೇಕೆ ತಂದಿಟ್ಟಿದ್ದಿಯೋ?" ಎಂದರು ಕಾಫಿಕುಡಿಯಲು ಹೋದ ರಾಮರಾಯರು.

"ನೀರಲ್ಲ ಸ್ವಾಮೀ, ಅದು ಹಾಲು" ಎಂದುತ್ತರವಿತ್ತ ಮಾಣಿ!

---

"ನನ್ನ ಯೌವ್ವನದಲ್ಲಿ ನಿಮಗೆ ಕೊಟ್ಟ ಸುಖವನ್ನಾದರೂ ನೀವು ಭಾವಿಸಬೇಡವೆ?" ಎಂದಳು ಅವರ ಹೆಂಡತಿ.

"ಬೆಪ್ಪೇ, ನಿನ್ನ ಯೌವ್ವನವನ್ನು ಸುಖಮಯವನ್ನಾಗಿ ಮಾಡಿದವ ನಾನೆಂದು ನೀನು ಭಾವಿಸಬೇಡ್ವೆನೇ? ನಡಿ, ನನ್ನ ಮನೆಗೆ ನೀ ಬೇಕಾಗಿಲ್ಲ"ವೆಂದ ಆಕೆಯ ಗಂಡ.

---

ಕೋರ್ಟಿನಲ್ಲಿ ಕೋಳಿ ಕಳವಾದ ಬಗ್ಗೆ ಒಂದು ವ್ಯವಹರಣೆ ನಡೆಯುತ್ತಿತ್ತು. ಎದ್ರಿಯ ಪರವಾಗಿ ವಕೀಲರು ಹೀಗೆ ಪ್ರತಿಪಾದಿಸಿದರು: "ನಿನ್ನ ಎದ್ರಿಯ ಮನೆಯಲ್ಲಿರುವ ಕೋಳಿಯನ್ನು ನಿಮ್ಮದೆಂದು ಹೇಳಲಾಗುವುದಿಲ್ಲ. ಕಾರಣ ಕೋಳಿಗಳಂತೆ ಕೋಳಿಗಳಿರುತ್ತವೆ. ಉದಾಹರಣೆಗಾಗಿ ಕಳವಾದ ನಿಮ್ಮ ಕೋಳಿಯಂಥವುಗಳು ನನ್ನಲ್ಲೂ ಇವೆ."

ಕೂಡಲೆ ಕೋಳಿಗಾಗಿ ಕೇಸು ಮಾಡಿದವ ಹೇಳಿದ. "ಎದ್ರಿಯ ಮನೆಯಲ್ಲಿರುವುದು ಮಾತ್ರವಲ್ಲ, ನನ್ನಲ್ಲಿಂದ ಇನ್ನೂ ಅನೇಕ ಕೋಳಿಗಳು ಕಾಣೆಯಾಗಿವೆ ಸ್ವಾಮೀ!"

---

ಆದಿತ್ಯವಾರ ದಿವಸ ಕೆಲಸ ಮಾಡಿದರೆ ಪಾಪಬರುತ್ತದೆಂತ ಹೆಲೆನ್ ತನ್ನ ತಮ್ಮನಿಗೆ ವಿವರಿಸುತ್ತಿದ್ದಳು.

"ಅಕ್ಕಾ, ಪೋಲೀಸಿನವರು ಆದಿತ್ಯವಾರ ಕೂಡಾ ಕೆಲಸಮಾಡುತ್ತಾರಲ್ಲಾ. ಅವರು ಸ್ವರ್ಗಕ್ಕೆ ಹೋಗುವುದಿಲ್ಲವೆ?" ಎಂದು ಕೇಳಿದನವಳ ತಮ್ಮ.

"ಇಲ್ಲಪ್ಪಾ ಪೋಲೀಸಿನವರು ಸ್ವರ್ಗಕ್ಕೆ ಬೇಕಾಗಿಲ್ಲ!"

---

ಗೆಳೆಯರ ತಂಡದ ಸದಸ್ಯರಾಗಿ ಅಖಿಲ ಕರ್ನಾಟಕದ ಗೆಳೆಯರೊಡನೆ ಸಂಬಂಧ ಬೆಳೆಸಿರಿ.

# ಗೆಳೆಯರ ತಂಡ

ಗೆಳೆಯರ ತಂಡದ ಚಟುವಟಿಕೆಗಳಲ್ಲಿ ಭಾಗವಹಿಸಿ ನಿಮ್ಮ ಲೋಕಜ್ಞಾನವನ್ನು ಹೆಚ್ಚಿಸಿರಿ.

ಗೆಳೆಯರ ತಂಡಕ್ಕೆ ಬರೆಯುವಾಗ **"ಗೆಳೆಯರ ತಂಡ", C/o ಅಂತರಂಗ, ಉಡುಪಿ,** ಎಂದು ಬರೆಯಿರಿ.

ಗೆಳೆಯರೆ,

ಕಳೆದ ಬಾರಿ ನಾವು ಪ್ರಾರಂಭಿಸಿರುವ 'ವಿನೋದ ಸಮಸ್ಯೆ'ಯನ್ನು ಹೆಚ್ಚಿನವರು ಮೆಚ್ಚಿರುವರೆಂದು ಅದಕ್ಕೆ ಬಂದಿರುವ ಅನೇಕ ಉತ್ತರಗಳಿಂದಲೆ ಸ್ಪಷ್ಟವಾಗುತ್ತದೆ. ಆದರೆ ನನ್ನ ಕೈ ಸೇರಿದ ಉತ್ತರಗಳಲ್ಲಿ 'ಇವತ್ತು ಶನಿವಾರವಲ್ಲವೆ ಸ್ವಾಮಿ?' ಎಂಬುದನ್ನು ಯಾರೂ ವಿವರಿಸಲಿಲ್ಲ.


ಗೆಳೆಯರ ತಂಡಕ್ಕೆ ಸೇರುವವರು ೨೫ ವರುಷಕ್ಕೆ ಮೀರದವರಾಗಬೇಕೆಂಬ ನಿಯಮವನ್ನು ತೆಗೆದುಹಾಕಿ ಎಲ್ಲರಿಗೂ ಸೇರಲೆಡೆಗೊಡಬೇಕೆಂದು ಅನೇಕರು ಬಿನ್ನವಿಸಿಕೊಂಡಿದ್ದಾರೆ. ಉದಾಹರಣೆಗಾಗಿ ಶ್ರೀ. ಯಸ್. ವಿ. ಕಾಮತ್ ಎಂಬವರು ಈ ಕುರಿತು ಕೆಳಗಿನಂತೆ ಪ್ರಶ್ನೆ ಕೇಳಿದ್ದಾರೆಃ—

೧. '೨೫ ವರುಷಕ್ಕೆ ಮಿಕ್ಕಿದ **ತರುಣ ತರುಣಿಯರು ಗೆಳೆಯರಾಗಲಿಕ್ಕೆ ಯೋಗ್ಯರಲ್ಲವೆ? ಅಥವಾ ಅವರು ಅಖಿಲಕರ್ನಾಟಕದ ಗೆಳೆಯರೊಡನೆ ಸಂಬಂಧ ಬೆಳೆಸಲು ಅಯೋಗ್ಯರೇ?'**

೨. 'ಒಬ್ಬ ೨೪ ವರುಷದ ತರುಣನು ಗೆಳೆಯರ ತಂಡದ ಮೆಂಬರನಾದರೆ ಆತನಿಗೆ ೧ ವರುಷದ ನಂತರ ೨೫ ವರುಷ ದಾಟಿದಲ್ಲಿ ಆ ಮೆಂಬರಿಕೆ ರದ್ದಾಗುತ್ತದೋ?'

ಇವರ ಮೊದನೆಯ ಪ್ರಶ್ನೆಯು ಯೋಗ್ಯವಾಗದೆಯೆಂದು ಹೇಳಬೇಕಾಗಿಲ್ಲ. ೨೫ ವರುಷಕ್ಕಿಂತ ಮಿಕ್ಕಿದವರಿಗೆ ಇಂಥವುಗಳಲ್ಲಿ ವಿಶೇಷ ಉತ್ಸಾಹವಿಲ್ಲದಿರುವುದರಿಂದ ಈ ನಿಯಮವನ್ನು ಮಾಡಿರುವುದಲ್ಲದೆ ೨೫ ವರುಷಕ್ಕಿಂತ ಮಿಕ್ಕಿದವರು ಗೆಳೆಯರ ತಂಡಕ್ಕೆ ಸೇರಬಾರದೆಂಬ ಅಭಿಪ್ರಾಯದಿಂದಲ್ಲ. ಆದುದರಿಂದ ಅನೇಕ ಮಹನೀಯರ ಸದಭಿಪ್ರಾಯಕ್ಕನುಸಾರವಾಗಿ ನಾನು ಈ ನಿಯಮವನ್ನು ರದ್ದುಪಡಿಸಿ, ಗೆಳೆಯರ ತಂಡದ ಕ್ಷೇತ್ರವನ್ನು ಇನ್ನಷ್ಟು ವಿಶಾಲಗೊಳಿಸಿರುವುದಕ್ಕೆ ಗೆಳೆಯರು ಆಕ್ಷೇಪಿಸಲಾರರೆಂದು ನಮ್ಬಿಹೆ.

**ಒಂದೇ ಕಡ್ಡಿಯಿಂದ ಹದಿನಾರು ಕಡ್ಡಿಗಳನ್ನೆತ್ತಿರಿ!**



ಮೊದಲು ನೋಡುವಾಗ ಸ್ವಲ್ಪ ಆಶ್ಚರ್ಯವೆನಿಸುವುದಿಲ್ಲವೆ? ಆದರೆ ಇದರಷ್ಟು ಸುಲಭವಾದೊಂದು ಉಪಾಯವು ಬೇರೊಂದಿಲ್ಲ. ನಿಮ್ಮ ಕಿರಿಯ ಮಿತ್ರರು ಈ ಉಪಾಯವನ್ನು ಕಂಡು ತುಂಬಾ ಆಶ್ಚರ್ಯಪಡಬಹುದು. ಇದ್ದರ ರಹಸ್ಯವನ್ನು ಚಿತ್ರದಿಂದಲೇ ತಿಳಿದುಕೊಳ್ಳಿರಿ.

**ಗೆಳೆಯರ ಭಾವಚಿತ್ರಗಳು:—**

ಸದ್ಯದಲ್ಲಿಯೆ ಅಂದರೆ ೫೦ ಸದಸ್ಯರಾದೊಡನೆಯೆ ಗೆಳೆಯರ ಭಾವಚಿತ್ರ (Photographs) ಗಳನ್ನು ಅತಂರಂಗದಲ್ಲಿ ಪ್ರಕಟಿಸಬೇಕೆಂದಿದ್ದೇನೆ. **ಈಗಾಗಲೆ ಕೆಲವರು ತಮ್ಮ ಭಾವಚಿತ್ರಗಳನ್ನೂ ಅದಕ್ಕೆ ತಗಲುವ ಖರ್ಚನ್ನೂ ಕಳುಹಿದ್ದಾರೆ. ಇನ್ನು ಕೆಲವರು ತಮ್ಮ ಭಾವಚಿತ್ರದ ಪಡಿಯಚ್ಚುಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ನನ್ನ ಕೈ ಸೇರುವ ಪ್ರತಿಯೊಬ್ಬರ ಭಾವಚಿತ್ರ**

ವೂ ೫೦ ಸದಸ್ಯರಾದೊಡನೆ ಈ ವಿಭಾಗದಲ್ಲಿ ಕ್ರಮವಾಗಿ ಪ್ರಕಟಿಸಲ್ಪಡುವದು. ಇನ್ನೊಂದು ವಿಚಾರ. ಗೆಳೆಯರು ಭಾವಚಿತ್ರಗಳನ್ನು ನನಗೆ ಕಳುಹಿಸಿಕೊಡುವಾಗ ಅವರಿಗೆ ವಿಶೇಷ ಅಭಿರುಚಿಯಿರುವ ಅಡ್ಡ ಕಸಬಿನ ಹೆಸರು, ಮತ್ತು ಅವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಕಳುಹಿಸಿಕೊಟ್ಟರೆ ಬೇಕಾದವುಗಳನ್ನು ಆರಿಸಿ ಪ್ರಕಟಿಸಲಾಗುವುದು.

**ತಂಡದ ಸದಸ್ಯತನ:-**

ನಮ್ಮ ತಂಡದ ಮೊದಲನೆಯ ಸದಸ್ಯರಾದ ಶ್ರೀ. ಗೋಪಾಲ ಪೈಗಳು ತಂಡಕ್ಕೆ ಅದಷ್ಟು ಸದಸ್ಯರನ್ನು ಸೇರಿಸಲು ಯತ್ನಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಇವರಂತೆಯೇ ಈಗಾಗಲೆ ಸದಸ್ಯರಾಗಿರುವವರೆಲ್ಲರೂ ಪ್ರಯತ್ನಿಸಿದರೆ ತಂಡದ ಸದಸ್ಯತನವು ಹೆಚ್ಚುವುದೆಂಬುದರಲ್ಲಿ ನಿರ್ವಿವಾದ. ತಂಡದ ೨ನೆ ಸದಸ್ಯರು ಕುಮಟಾ ಜಿಲ್ಲೆಯಿಂದಲೂ, ೩ನೆ ಸದಸ್ಯರು ಮುಂಬಯಿಯಿಂದಲೂ, ನಾಲ್ಕನೆ ಸದಸ್ಯರು ಬೆಂಗಳೂರಿನಿಂದಲೂ, ೫, ೬ ಮತ್ತು ೯ನೆ ಸದಸ್ಯರು ಬಾಗಲಕೋಟೆಯಿಂದಲೂ ೭ನೆ ಸದಸ್ಯರು ಸಕಲೇಶಪುರದಿಂದಲೂ, ೮ನೆ ಸದಸ್ಯರು ಧಾರವಾಡದಿಂದಲೂ ತಂಡಕ್ಕೆ ಸದಸ್ಯರನ್ನು ಸೇರಿಸಿಕೊಟ್ಟರೆ ಚೆನ್ನಾಗಬಹುದು.

ಇತಿ ನಿಮ್ಮ, **'ಗೆಳೆಯ'**

**ತಂಡದ ಹೊಸ ಸದಸ್ಯರು.**

೧೦. ಶ್ರೀ. ಯನ್. ರಾಮಕೃಷ್ಣ ಹೆಬ್ಬಾರ್, ಮೆನೇಜಿಂಗ್ ಪ್ರಾಪ್ರೈಕ್ಟರ್, ನೇಶನಲ್ ವೀವಿಂಗ್ ಇಂಡಸ್ಟ್ರಿಯಲ್ ವರ್ಕ್ಸ್, ಸೋಮೇಶ್ವರ.

ನಿಮ್ಮ ಸದಸ್ಯತನದ ನಂಬರು ೧೦

**ANTARANGA ORGANISERS FOR MYSORE STATE**

**Messers. Venkateshayya Brothers, SHIMOGA.**

**Manager, ANTARANGA.**

## ಇದು ಯಾರು ಗೊತ್ತೇ?

ನಿಮ್ಮ ಶರೀರದಷ್ಟು ಸ್ವಾರಸ್ಯಮಯ ಯಂತ್ರವು ಬೇರೊಂದಿಲ್ಲ. ಈ ಯಂತ್ರವು ವಿಚಿತ್ರವಾಗಿದ್ದರೂ ಅದು ವಿಶೇಷ ತೊಂದರೆ ಕೊಡುವುದಿಲ್ಲ. ಅದರಲ್ಲಿ ೨,೫೦೦,೦೦೦ ರೋಮಕೂಪಗಳಿವೆ. ಅಸ್ಥಿಪಂಜರದಲ್ಲಿ ೨೦೦ಕ್ಕಿಂತ ಹೆಚ್ಚು ಎಲುಬುಗಳಿವೆ. ನಿಮ್ಮ ದೇಹದ ರಕ್ತವು ಪ್ರತಿ ನಿಮಿಷ ಎದೆಗುಂಡಿಯಿಂದ ವಿವಿಧ ಭಾಗಗಳಿಗೆ ಕಳುಹಿಸಲ್ಪಡುತ್ತದೆ. ನಿಮ್ಮ ಹೃದಯ ಕಮಲವು ನಿಮಿಷಕ್ಕೆ ೭೦ ಬಾರಿ ಬಡಿಯುತ್ತದೆ. ಪ್ರತಿ ದಿನ ಅದು ೧೦೦,೮೦೦ ಬಾರಿ ಬಡೆಯುತ್ತದೆ! ಸಾಮಾನ್ಯ ಮನುಷ್ಯನು ತನ್ನ ಶ್ವಾಸಕೋಶಗಳಲ್ಲಿ ೨೦೦ ಘನ ಇಂಚಿನಷ್ಟು ಗಾಳಿಯನ್ನು ತುಂಬಿಕೊಳ್ಳಬಲ್ಲನು. ಉಚ್ಛ್ವಾಸ ನಿಶ್ವಾಸ ಕಾಲಗಳಲ್ಲಿ ೨೫ರಿಂದ ೩೦ ಘನ ಅಡಿಯಷ್ಟು ಗಾಳಿ ಹೊರಗೂ ಒಳಗೂ ಹೋಗುತ್ತದೆ. ಪುರುಷರು ನಿಮಿಷವೊಂದರ ೧೮ ಬಾರಿ ಶ್ವಾಸವೆಳೆಯುತ್ತಾರೆ. ಸ್ತ್ರೀಯರು ಇದಕ್ಕಿಂತಲೂ ವೇಗವಾಗಿ ಶ್ವಾಸೋಚ್ಛ್ವಾಸ ಮಾಡುತ್ತಾರೆ.

ನಿಮ್ಮ ಶರೀರದಲ್ಲಿ ೫೦೦ ಸ್ನಾಯುಗಳಿವೆ. ಅಷ್ಟೇ ನರಗಳು, ಅಷ್ಟೇ ರಕ್ತನಾಳಗಳು. ನಿಮ್ಮ ಶರೀರದ ಸಾಮಾನ್ಯ ಶಾಖವೆಂದರೆ ಫ್ಯಾರನ್ ಹೈಟ್ ೯೮.೬ ಡಿಗ್ರಿ. ಪ್ರತಿದಿನ ನಿಮ್ಮ ಶರೀರದಿಂದ ನಾಲ್ಕು ಪಿಂಟ್ ನೀರು ಹೊರಗೆ ಹೋಗುತ್ತದೆ. ಚರ್ಮದಿಂದ ೨೦ ಔನ್ಸು. ಶ್ವಾಸಕೋಶದಿಂದ ೧೦ ಔನ್ಸು, ೫೦ ಔನ್ಸು ಮೂತ್ರರೂಪದಿಂದ. ಇದಲ್ಲದೆ ॥ ಔನ್ಸ್ ನೈಟ್ರೋಜನ್ ೧ ಔನ್ಸ್ ಉಪ್ಪು ಪದಾರ್ಥ, ಮತ್ತು ಎಂಟು ಔನ್ಸ್ ಕಾರ್ಬನ್ ದೇಹದಿಂದ ಹೊರಗೆ ಹೋಗುತ್ತದೆ.

ಈ ನಷ್ಟವನ್ನು ಸರಿ ಸಡಿಸುವುದಕ್ಕಾಗಿ ಸಾಮಾನ್ಯ ಮನುಷ್ಯನು ೫॥ ರಾತಲು ಆಹಾರವನ್ನು ಆಹಾರ ಮತ್ತು ನೀರಿನ ರೂಪದಲ್ಲಿ ತೆಗೆದುಕೊಳ್ಳುತ್ತಾನೆ. ಇದನ್ನು ಲೆಖ್ಖ ಮಾಡಿದರೆ ವರ್ಷವೊಂದಕ್ಕೆ ಮನುಷ್ಯನು ೧ ಟನ್ ಆಹಾರವನ್ನು ಸೇವಿಸುತ್ತಾನೆ.

# ಭಗದತ್ತನ ಬಹಿರಂಗ ಪತ್ರಗಳು



**ಮಂಗಳೂರು ಮ್ಯುನಿಸಿಪಲ್ ಕೌನ್ಸಿಲಿನ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ,**

ಮಹಾಶಯರೆ,

ತಮ್ಮ ಮ್ಯುನಿಸಿಪಾಲಿಟಿಯಲ್ಲಿ ಕರ್ನಾಟಕ ಏಕೀಕರಣದ ಕುರಿತು ಮುಂದೆ ತರಲ್ಪಟ್ಟ ಒಂದು ಠರಾವು ಅನುಮೋದಕರಿಲ್ಲದೆ ಬಿದ್ದು ಹೋಯಿತೆಂದು ವಾರ್ತೆಯನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಬಹುಮತವಿದ್ದರೂ ಈ ಠರಾವಿಗೆ ಬೆಂಬಲ ಕೊಡಬೇಕೆಂಬ ನಿಯಮವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಬಾಯಿಯಲ್ಲಿ ಹೇಳುವದನ್ನು ಕಾರ್ಯದಲ್ಲಿ ಮಾಡಲೇ ಬೇಕೆಂಬ ಕಾನೂನಿಲ್ಲ. ಹೇಳಿದ್ದನ್ನು ಮಾಡದಿರುವುದೇ ಈ ಕಾಲದ ಒಂದು ವೈಶಿಷ್ಟ್ಯವಾಗಿದೆ. ಅದಂತಿರಲಿ. ನಿಮ್ಮಲ್ಲಿ ಕೆಲವು ಧುರೀಣರು ಬೇರೆ ಬೇರೆ ಕಡೆಗಳಿಗೆ ಹೋಗಿ ಏಕೀಕರಣದ ಕುರಿತು ಉದ್ದುದ್ದ ಭಾಷಣಗಳನ್ನು ಕೊಡುತ್ತಿರುವರಲ್ಲವೆ? ಇವರಿಗೆ ಏನನ್ನ ಬೇಕು? ಅಷ್ಟು ಭೀಷಣ ಭಾಷಣಮಾಡುವವರಿಗೆ ಒಂದು ಠರಾವನ್ನು ಅನುಮೋದಿಸಲಾಗುವುದಿಲ್ಲವೆ? ಪ್ರಾಯಶಃ ಇದರಲ್ಲೊಂದು ರಹಸ್ಯವಿರಬಹದು. ಶ್ರೀ. ರಂಗರಾವ್ ತಲಚೇರಿಕರರು ಆ ಠರಾವು ತಂದದ್ದರಿಂದಲೇ ಅದಕ್ಕೆ ಆ ರೀತಿಯ 'ಬೆಂಬಲ' ಸಿಕ್ಕಿರಬಹುದು. ಇದನ್ನು ನೋಡುವಾಗ ಒಂದು ಕತೆಯು ನೆನಪಾಗುತ್ತದೆ:—ಇಬ್ಬರು ಮುಸಲ್ಮಾನರೊಳಗೆ ಪರಸ್ಪರ ವೈಷಮ್ಯವಿತ್ತು. ಒಬ್ಬನು ಏನು ಹೇಳಿದರೂ ಇನ್ನೊಬ್ಬನು ಅದನ್ನು ವಿರೋಧಿಸುವುದು ಆವರ ಧೋರಣೆಯಾಗಿತ್ತು. ಒಂದು ದಿನ ಅವರೊಳಗೆ ಚರ್ಚೆಯಾಗುವಾಗ ಒಬ್ಬನು "ಮಹಮ್ಮದ ಪೈಗಂಬರರೇ ದೇವರ ಪ್ರವಾದಿಯೆಂದು ಹೇಳಿದ" ಇನ್ನೊಬ್ಬ ಮುಸಲ್ಮಾನನು ಸಿಟ್ಟಿನಿಂದ ಕೇವಲ ತನ್ನ ವೈರಿಯನ್ನು ವಿರೋಧಿಸುವುದಕ್ಕಾಗಿ "ಮಹಮ್ಮದ ಪೈಗಂಬರರು ದೇವರ ಪ್ರವಾದಿಯಲ್ಲ" ವೆಂದು ಹೇಳಿ ನಗೆಗೀಡಾದನಂತೆ. ಇದೊಂದು ಉದಾಹರಣೆ. ಇದೇ ಕತೆಯು ನಮ್ಮ ಮಂಗಳೂರು ಮ್ಯುನಿಸಿಪಾಲಿಟಿಗೂ ಅನ್ವಯಿಸುವುದಿಲ್ಲವೆ?

ಇತಿ ತಮ್ಮ,

**ಉಪ್ಪುಪಕ್ಷಿ ಭಗದತ್ತ.**

---

**ಜನಾಂಗಸಭೆಯ ಅಧಿಕಾರಿಗಳಿಗೆ,**

ಮಹಾಶಯರೆ,

ಜನರಲ್ ಸ್ಮಟ್ಸರವರು ಜನಾಂಗಸಭೆಯನ್ನು ಸುಧಾರಿಸಬೇಕೆಂದು ಮಾಡಿರುವ ಸೂಚನೆಯನ್ನು ಕೇಳಿ ನನಗೆ ನಗೆಬರುತ್ತದೆ. ಆದನ್ನು ಸುಧಾರಿಸುವುದೆಂದರೆ ಹಿಟ್ಲರ್-ಮುಸ್ಸೋಲಿನಿಯರನ್ನು ಜನಾಂಗ ಸಭೆಗೆ ಸೇರಿಸಿಕೊಳ್ಳುವುದೆಂದರ್ಥ. ಇವರು ಅದರೊಳಗೆ ಬಂದೊಡನೆಯೇ ರಷ್ಯವು ಹೊರಗೆ ಹೋಗಬೇಕೆಂದು ಹೇಳುವುದರಲ್ಲಿ ಸಂಶಯವಿಲ್ಲ. ಸರ್ವಾಧಿಕಾರಿಗಳು ಅಧಿಕಾರ ನಡೆಸುವ ಜನಾಂಗ ಸಭೆಯನ್ನು ಸುಧಾರಿಸುವ ಬದಲು ಅದಕ್ಕೊಂದು ಸಮಾಧಿಯನ್ನುಮಾಡಿದರೊಳ್ಳಿತೆಂದು ಸೂಚಿಸುವುದು ಸಾಧುವಲ್ಲವೇ?

ಇತಿ,

**ಭಗದತ್ತ.**

---

# ಸರ್ವಾಧಿಕಾರಿಗಳನ್ನು ಅಣಕಿಸುವ ವಿನೋದಗಳು



ಮೆಚ್ಚಿದವರಿಗೆ ವರವೀವ **ಮುಸ್ಸೋಲಿನಿ.**

- ಗೋರಿಂಗನ ನೊಣ ಬೇಟೆ—
- ಮುಸ್ಸೋಲಿನಿಯ ವರದಾನ—
- ಮಳೆಗೆ ಬೆದರಿದ ಸೈನಿಕರು—
- ಯೆಹೂದಿಯರ ಸ್ಮಶಾನ ವಿನೋದ—
- ಜರ್ಮನ್ ಜೈಲಿನ ಸುಖ—
- ಪತ್ರಿಕೆಯಲ್ಲಿ ಹಿಟ್ಲರನ ರಾಷ್ಟ್ರೋದ್ಧಾರ—

## ಸರ್ವಾಧಿಕಾರಿಗಳ ವಿನೋದಗಳು

ಯುರೋಪಿನ ಸರ್ವಾಧಿಕಾರಿಗಳ ಕಠಿನಮನೋವೃತ್ತಿಯ ಹಿಂದೆ ಬಹಳ ಸ್ವಾರಸ್ಯದ ವಿನೋದಗಳಿವೆ ಯೆಂದರೆ ಯಾರಾದರೂ ನಗಬಹುದು. ಆದರೆ ಇಂತಹ ವಿನೋದಗಳು ಅಕ್ಷರಶಃ ನಿಜವಾಗಿವೆ. ಜರ್ಮನಿ ಇಟಲಿಗಳಲ್ಲಿ ಬರಹ ಮತ್ತು ವಾಕ್‌ಸ್ವಾತಂತ್ರ್ಯಗಳಿಲ್ಲದಿದ್ದರೂ ಗುಟ್ಟಿನ ವಿನೋದಗಳು ಧಾರಾಳವಾಗಿವೆ.

## ವಿನೋದಮಾಲೆ

ಜನಾಂಗಸಭೆಯಲ್ಲಿ ವಿನೋದಗಳಿಗೆ ಕಡಿಮೆಯಿಲ್ಲದಿದ್ದರೂ ಸರ್ವಾಧಿಕಾರಿಗಳ ರಾಜ್ಯದ ವಿನೋದಗಳು ತುಂಬಾ ನಗಿಸುವಂಥವುಗಳಾಗಿವೆ. ಯುರೋಪಿನ ರಾಜನೀತಿಯ ಕಬ್ಬಿಣದ ಬೇಲಿಯೆಡೆಗಳಲ್ಲಿ ಕೆಲವೊಮ್ಮೆ ಸುಂದರವಾದ ಹೂಗಳು ಕಾಣುವುದುಂಟು. ಅವುಗಳನ್ನು ಒಂದುಗೂಡಿಸಿ ಇಲ್ಲಿ ಮಾಲೆಯನ್ನಾಗಿ ಮಾಡಲಾಗಿದೆ.

## ಹಲಿಗೆ ತುಂಡು ಹೆಕ್ಕಿ ಸಾರ್ಜೆಂಟನಾದ

ಕಳೆದ ಫೆಬ್ರುವರಿಯಲ್ಲಿ ಮುಸ್ಸೋಲಿನಿ ಎಪೆನ್ನ್ಯಾನ್ ಪರ್ವತಕ್ಕೆ ವಿಹಾರಕ್ಕಾಗಿ ಹೋಗಿದ್ದ. ಕಾಲಡಿಗೆ ಚಕ್ರವಿರುವ ಹಲಗೆಗಳನ್ನು ಕಟ್ಟಿಕೊಂಡು ಇಳಿಜಾರಿನಲ್ಲಿ ಜಾರುವುದು ಅವನಿಗೆ ಪ್ರಿಯವಾದ ಆಟಗಳಲ್ಲೊಂದು. ಎಪೆನ್ನ್ಯಾನ್ ಪರ್ವತದಿಂದ ಕೆಳಗಿಳಿಯುತ್ತಿದ್ದಾಗ ಅವನು ಆಧರಿಸಿಕೊಂಡ ಕೋಲೊಂದು ಕೆಳಗೆ ಬಿದ್ದು ಹೋಯಿತು. ಸಮೀಪದಲ್ಲಿದ್ದೊಬ್ಬ ವ್ಯಕ್ತಿ ಅದನ್ನು ಹೆಕ್ಕಿ ಮುಸ್ಸೋಲಿನಿಗೆ ಕೊಟ್ಟಿದ್ದೇ ತಡ, ಸಂತೋಷದಿಂದ ಮುಸ್ಸೋಲಿನಿ ಕೇಳಿದ:

"ನನ್ನಿಂದ ನಿಮಗೇನಾಗಬೇಕಾಗಿದೆ ಮಿತ್ರರೆ?"

"ದಯವಿಟ್ಟು ನನಗೆ ಸಾರ್ಜೆಂಟ್ ಕೆಲಸ ಕೊಡಿಸುವಂತೆ ಪೋಲೀಸ್ ಅಧ್ಯಕ್ಷರಿಗೆ ಆಜ್ಞೆ ಮಾಡುವಿರಾ?" ಎಂದವನ ಉತ್ತರ.

ಮರುದಿನವೇ ಅವನಿಗೆ ಸಾರ್ಜೆಂಟ್ ಕೆಲಸವು ದೊರಕಿತು.

## ವಿಚಿತ್ರ ಬಯಕೆ!

ಮುಸ್ಸೋಲಿನಿ ಎಡ್ರಿಯಾಟಿಕ್ ಸಮುದ್ರದಲ್ಲಿ ಮೀಯುತ್ತಿದ್ದ. ದೊಡ್ಡ ತೆರೆಯೊಂದು ಅವನನ್ನು ಅಪ್ಪಳಿಸಿಬಿಟ್ಟಿತು. ಇದನ್ನು ದೂರದಿಂದ ನೋಡುತ್ತಿದ್ದ ರೈತನು ಸಮುದ್ರಕ್ಕೆ ಹಾರಿ ಅವನ ದೇಹರಕ್ಷಣೆ ಮಾಡಿದ. ಮುಸ್ಸೋಲಿನಿಗೆ ಸ್ಮೃತಿಬಂದಾಗ—

"ನಿಮ್ಮ ರಾಷ್ಟ್ರಾಧಿಪತಿಯ ಜೀವವನ್ನುಳಿಸಿದಿರೆಂದು ನಿಮಗೆ ಗೊತ್ತೆ? ಈ ಉಪಕಾರಕ್ಕಾಗಿ ನಾನು ನಿಮಗೇನು ಮಾಡಲಿ?"

ರೈತ ಹೆದರಿ ಹೇಳಿದ: ''ಮಹಾಶಯಾ, ಇತರ ರೈತರಿಗೆ ಈ ಸುದ್ದಿಯನ್ನು ಹೇಳಬೇಡಿರಿ,"

### ಹಿಟ್ಲರನ ತಂತಿ!

ಹೆರ್ ಹಿಟ್ಲರನು ಆಸ್ಟ್ರಿಯವನ್ನು ಕೈವಶಪಡಿಸಿಕೊಂಡೊಡನೆ ಮುಸ್ಸೋಲಿನಿಗೆ ಹೀಗೆ ತಂತಿ ಕೊಟ್ಟ ''ನಾನಿದನ್ನು ಮರೆಯಲಾರೆ'' ಇದಕ್ಕೆ ಮುಸ್ಸೋಲಿನಿ ಹೀಗೆ ಉತ್ತರ ಕೊಡಬೇಕಿತ್ತೆಂದು ಸರ್ವಾಧಿಕಾರಿಯ ಹಿಂದೆ ಮಾತಾಡುವವರ ಸೂಚನೆ: ''ನಾನು ಕೂಡಾ ಮರೆಯಲಾರೆ, ಖಂಡಿತ''

### ಗೋರಿಂಗನ ವಿನೋದ!

ಜರ್ಮನಿಯ ಫೀಲ್ಡ್ ಮಾರ್ಶಲ್ ಗೋರಿಂಗನ ಕುರಿತು ಚಲಾವಣೆಯಲ್ಲಿರುವ ತಮಾಷೆಗಳಿಗೆ ಲೆಖ್ಖವೇ ಇಲ್ಲ.

ನಾಝಿ ಅಧಿಕಾರಿಗಳು ಎಲ್ಲಾ ಕಾಲಗಳಲ್ಲಿಯೂ ಸೈನಿಕ ಪೋಷಾಕನ್ನು ಧರಿಸಿಕೊಳ್ಳುವುದು ಅಲ್ಲಿಯ ರೂಢಿ.

ಬಚ್ಚಲಲ್ಲಿ ನೀರಿನ 'ಟಾಂಕಿ' ಒಡೆದು ಹೋಯಿತೆಂದು ಅವನ ಸೇವಕನು ಹೇಳಿದೊಡನೆಯೇ ಗೋರಿಂಗನಂದನಂತೆ:- 'ಎಲ್ಲಿ, ಬೇಗನೆ ನನ್ನ ಪೋಷಾಕು ಕೊಡು'!

### ನೊಣ ಬೇಟೆ

ಒಂದು ದಿನ ಅವನ ಪುಸ್ತಕ ಭಂಡಾರವಿರುವ ಕೋಣೆಯಲ್ಲಿ ದೊಡ್ಡದೊಂದು ನೊಣ ಹಾರುತ್ತಿತ್ತು. ಗೋರಿಂಗನಿಗೆ ಓದಲು ಬಹಳ ತೊಂದರೆಯಾಗಿ- ''ಲೊ, ನನ್ನ ಬೇಟೆ ಪೋಷಾಕು ತಾರೋ'' ಎಂದು ಅಭ್ಯಾಸ ಬಲದಿಂದ ಸೇವಕನಿಗೆ ಹೇಳಿದ.

### ಪೋಪರೊಡನೆ ಮೈತ್ರಿ

ಹೆರ್ ಹಿಟ್ಲರನಿಗೆ ಪೋಪರೊಡನೆ ಸಂಬಂಧವನ್ನು ಸುಧಾರಿಸಿ



ತನ್ನತಾನರಿಯದ ಹಿಟ್ಲರ್.

ಕೊಳ್ಳಬೇಕೆಂಬ ಇಚ್ಛೆಯುಂಟಾಗಿ ತನ್ನ ಅಧೀನಾಧಿಕಾರಿ ಹೆರ್ ಹೆಸ್ ಎಂಬವನನ್ನು ರೋಮಿಗೆ ಕಳುಹಿಸಿದನಂತೆ. ಒಂದು ವಾರದ ಬಳಿಕ ಅವನಿಂದ ಹೀಗೆಂದು ತಂತಿ ಬಂತು:- 'ಪೋಪರನ್ನು ಕಂಡೆ, ಇನ್ನೂ ಸ್ವಲ್ಪ ತಿಳುವಳಿಕೆ ಬೇಕಾಗಿದೆ; ಇಲ್ಲದಿದ್ದರೆ ಸಂಬಂಧದಲ್ಲಿ ಸುಧಾರಣೆಯಾಗುವಂತಿಲ್ಲ' ಹಿಟ್ಲರನಿಗೆ ಇದರಿಂದ ತೃಪ್ತಿಯಾಗದೆ ಗೇಬಲ್ಸ್‌ನನ್ನು ಕಳುಹಿಸಿಕೊಟ್ಟ. ಅದೇ ದಿನ ರೋಮಿನಿಂದೊಂದು ವರದಿ ಬಂತು:-'' ಬ್ರಾಡ್‌ಕಾಸ್ಟಿಂಗ್ ಸ್ಟೇಶನಿನ ಬೆಂಬಲ ಪಡೆದಿದ್ದೇನೆ. ಸೆಮಿನೆರಿಗೆ ಹೊಸ ಪುರೋಹಿತನನ್ನು ನೇಮಿಸಿದ್ದೇನೆ. ಉಳಿದವರನ್ನು ಓಡಿಸಿದ್ದೇನೆ. ಯೇಸುಕ್ರಿಸ್ತರು ಯೆಹೂದಿಯರಲ್ಲವೆಂದು ಪೋಪರು ಒಪ್ಪುತ್ತಾರೆ. ಬೇಗ ಬರುತ್ತೇನೆ.'' ಇದು ಪ್ರಚಾರ ಮಂತ್ರಿ ಗೇಬಲ್ಸನ ಯತ್ನ. ಹಿಟ್ಲರನಿಗೆ ಮತ್ತೂ ಸಮಾಧಾನವಾಗಲಿಲ್ಲ. ಕೊನೆಗೆ ಗೋರಿಂಗನನ್ನು ಕಳುಹಿಸಿದ. ಎರಡು ದಿವಸದ ವರೆಗೆ ಯಾವ ವಾರ್ತೆಯೂ ಇಲ್ಲ. ಆ ಬಳಿಕ ಹೀಗೆಂದು ವಾರ್ತೆ ಬಂತು. ಯುದ್ಧಮಂತ್ರಿಯಾದಿವನು ತನ್ನ ಅಭ್ಯಾಸ ಬಲದಿಂದ ಹೀಗೆ ಬರೆದ:- ''ಕ್ರಾಂತಿ ಪ್ರಾರಂಭಿಸಿದರೂ ನಿಲ್ಲಿಸಲ್ಪಟ್ಟಿತು. ಸ್ವಿಝರ್‌ಲೇಂಡಿನ ಕಾವಲುಗಾರರು ನಾಝಿ ಪಂಥವನ್ನೊಪ್ಪಿದರು. ತಪ್ಪಿಸಿಕೊಳ್ಳುವಾಗ ಪೋಪರಿಗೆ ಗುಂಡೆಸೆಯಲ್ಪಟ್ಟಿತು. ಸೈಂಟ್ ಪೀಟರ್ಸ್ ಚರ್ಚನ್ನೆ ಯೆಹೂದಿಯರು ಗುಂಡೆಸೆದರು'' ಈ ವಿನೋದದಿಂದ ಜರ್ಮನ್ ರಾಜಕಾರಣಿಗಳ ಸ್ವಭಾವವನ್ನು ಜನರು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ.

### ಪೋಷಾಕಿಗಾಗಿ

ಜರ್ಮನ್ ಸೈನ್ಯವು ಆಸ್ಟ್ರಿಯದ ವಿಯೆನ್ನಕ್ಕೆ ಹೋಗುವಾಗ ಮಳೆ ಸುರಿಯಲಾರಂಭಿಸಿತು. ಪೋಷಾಕು ಕೆಟ್ಟು ಹೋಗಬಹುದೆಂದು ಸೈನಿಕರು ಸಮೀಪದ ಮನೆಗೆ ಹೋಗಿ ಮಕ್ಕಳಂತೆ ತಮ್ಮ ಚಲ್ಲಣಗಳನ್ನು ಹಿಂತಿರುಗಿದರಂತೆ!

### ಯೆಹೂದಿಯರ ವಿನೋದ

ಯೆಹೂದಿಯರ ಪಾಡು ಅತ್ಯಂತ

ಕಠಿಣವಾಗಿರುವುದರಿಂದ ಅವರ ವಿನೋದವೂ ಬಹಳ ವಿಶೇಷವಾಗುತ್ತಿದೆ:—

ಮೇ ೧, ೧೯೩೮ರಂದು ವಿಯನ್ನದಲ್ಲಿ ಇಬ್ಬರು ಜೂದರು ಮಾತಾಡುತ್ತಿದ್ದರು.

'ನಾನು ಹೇಗಿದ್ದೇನೆಂದಾದರೂ ನೀನು ಕೇಳಬೇಕಿತ್ತಲ್ಲ?'

'ಅಯ್ಯೋ ತಪ್ಪಾ, ನೀನು ಹೇಗಿದ್ದೀ' ಎಂದು ಇನ್ನೊಬ್ಬನ ಸಿಟ್ಟಿನ ಪ್ರಶ್ನೆ.

"ನನ್ನೊಡನೇಕೆ ಕೇಳುವುದು ಕೇಳಬೇಡ" ಮೊದಲನೆಯವನ ವಿಚಿತ್ರ ಉತ್ತರ.

ಯೆಹೂದಿಯರ ನಿರಾಶಾಜನಕ ಜೀವನವು ಇದರಿಂದ ಸ್ಪಷ್ಟವಾಗುತ್ತದೆ.

## ಮುದ್ದಿನ ಗುಟ್ಟು!

ನಾಝಿ ಸೈನಿಕರು ಜೂದನೊಬ್ಬನ ಮನೆಯನ್ನು ಪುಡಿಮಾಡುತ್ತಿದ್ದರು. ಒಳಗೆ ಜೂದನು ಚಿಕ್ಕ ಪುಸ್ತಕವೊಂದನ್ನು ಮುದ್ದಿಡುತ್ತಿದ್ದ. ಜರ್ಮನ್ ಸೈನಿಕನಿಗೆ ಆಶ್ಚರ್ಯವಾಗಿ ಅವನೊಡನೆ ಕೇಳಿದ: 'ಏ ಬೆಪ್ಪಾ, ನಿನ್ನ ಮನೆ ಮಣ್ಣುಪಾಲಾಗುವಾಗ ನೀನು ಬೈಬಲನ್ನು ಮುದ್ದಿಡುತ್ತಿರುವುದೇಕೆ?'

ಜೂದನಿಗೆ ಕೋಪಬಂದು ಹೇಳಿದ: 'ಬೆಪ್ಪ ನೀನು! ನಾನು ಮುದ್ದಿಡುವುದು ಬೈಬಲನಲ್ಲ. ನನ್ನ ಅಮೇರಿಕನ್ ಪಾಸ್‌ಪೋರ್ಟನ್ನು!'

## ಹಿಟ್ಲರನ ಭಾಷಣದಲ್ಲಿ!

ಹಿಟ್ಲರನು ಭಾಷಣ ಕೊಡುತ್ತಿದ್ದಾಗ ಒಬ್ಬ ಯೆಹೂದಿಯನು ಕೂಡಾ ಸಭೆಯಲ್ಲಿದ್ದನಂತೆ. ಭಾಷಣ ಕೇಳುತ್ತಿದ್ದಂತೆಯೇ ಯೆಹೂದಿಯವನಿಗೆ ತಡೆಯಲಾರದ ನಗುವೊಂದು ಬಂದೇ ಬಿಟ್ಟಿತು. ಹಿಟ್ಲರನು ಅವನನ್ನು ಕರೆದು ನಗಾಡಿದ್ದೇಕೆಂದು ಕೇಳಿದ್ದಕ್ಕೆ ಯೆಹೂದಿಯನು ಹೀಗೆ ಉತ್ತರವಿತ್ತನಂತೆ: –

'ಫರೋಹನು ನಮಗಾಗಿ ಕೆಂಪು



ಹಿಟ್ಲರನ ಪ್ರಚಾರ ಮಂತ್ರಿ
**ಗೇಬಲ್ಸ್.**

ಸಮುದ್ರದಲ್ಲಿ ಮುಳುಗಿದ್ದಕ್ಕೆ ನಾವು ಸಿಹಿ ರೊಟ್ಟಿ ತಿಂದು ಅವನ ಸ್ಮಾರಕವನ್ನಾಚರಿಸುತ್ತೇವೆ. ಗವರ್ನರ್ ಹಮಾನ್ ಯೆಹೂದಿಯರನ್ನು ಪೀಡಿಸಿದ್ದಕ್ಕೆ ದೇವರು ಅವನನ್ನು ಶಿಕ್ಷಿಸಿದ. ಅದಕ್ಕಾಗಿ ಕೂಡಾ ನಾವು ಈಗ ಸಿಹಿ ರೊಟ್ಟಿಯ ಹಬ್ಬವಾಚರಿಸುತ್ತೇವೆ. ನನ್ನ ಮರಿಮಕ್ಕಳು ಹಿಟ್ಲರನ ರೊಟ್ಟಿಯನ್ನು ತಿನ್ನುವ ಕಾಲವೆಂದು ಬಂದೀತೆಂದು ಯೋಚಿಸುವಾಗ ನನಗೆ ನಗೆ ಬಂತು!"

## ಜರ್ಮನ್ ಜೈಲು!

ಒಬ್ಬ ಯೆಹೂದಿಯವನು ಜೈಲಿನಿಂದ ಹೊರಗೆ ಬಂದೊಡನೆಯೇ ತನ್ನ ಮಿತ್ರನನ್ನು ಕಂಡಾಗ ಜೈಲು ಜೀವನ ಹೇಗೆಂದು ಅವನು ಕೇಳಿದ. 'ಭಾರೀ ಸುಖ'ವೆಂದು ಹೊರಗೆ ಬಂದವನು ಹೇಳಿದ. "ಛೆ, ಅಲ್ಲಿ ಬಹಳ ಕಷ್ಟವೆಂದು ನನ್ನ ಅಳಿಯ ಹೇಳುತ್ತಾನೆ". "ಹಾಗೆ ಹೇಳಿದ್ದರಿಂದಲೇ ಅವನನ್ನು ಪುನಃ ಅಲ್ಲಿಗೆ ಕೊಂಡು ಹೋಗಿದ್ದಾರೆ" ಎಂದನವನ ಮಿತ್ರನ ಉತ್ತರ!

## ಹಿಟ್ಲರನ ಮಹಾಕಾರ್ಯ

ಇಬ್ಬರು ಜರ್ಮನರು ಒಂದು ಗುಡ್ಡದ ಮೇಲೆ ನಿಂತು ಸೃಷ್ಟಿ ಸೌಂದರ್ಯವನ್ನು ನೋಡುತ್ತಿದ್ದರು. ಒಬ್ಬ ಹೇಳಿದ:

"ಛೆ ಛೆ: ಹಿಟ್ಲರರು ನಮಗಾಗಿ ಎಂತಹ ಸೌಕರ್ಯಗಳನ್ನೊದಗಿಸಿ ಕೊಟ್ಟಿದ್ದಾರೆ! ನೋಡಲ್ಲಿ, ಉದ್ಯಾನವನಗಳು, ಆಟದ ಬಯಲುಗಳು, ಸರೋವರಗಳು ... ...." ಎಂದು ಹೇಳುವಾಗ ಆಶ್ಚರ್ಯದಿಂದ ಇನ್ನೊಬ್ಬ ಕೇಳಿದ "ಎಲ್ಲಿ, ನಿನಗೇನು ಕನಸು ಬಿದ್ದಿದೆಯೆ? ಎಲ್ಲಿ ನೋಡಿದರೂ ಯುದ್ಧಸಾಧನಗಳ ಕಾರಖಾನೆಗಳ ಹೊಗೆ ಕಾಣಿಸುತ್ತಿದೆ" ಆಗ ಹೇಳಿದನವನ ಮಿತ್ರ. "ಬೆಪ್ಪೇ, ಇಲ್ಲೇನು ನೋಡುತ್ತಿರುವೆ? ಪ್ರಚಾರಮಂತ್ರಿ ಗೇಬಲ್ಸರ ಪತ್ರಿಕೆಯನ್ನು ನನ್ನಂತೆ ಓದಿದರೆ ಇವೆಲ್ಲಾ ನಿನಗೆ ಕಾಣುತ್ತವೆ"

ಧನ್ವಂತರಿ ಮಾತ್ರೆ, ದಶಮೂಲಾರಿಷ್ಟಗಳಿಗೆ- ಶ್ರೀ ಭಾರತ ವಸ್ತು ಮಂದಿರ, ಉಡುಪಿ.

## ಪ್ಯಾರಿಸಿನ ಪಾಪ ಕೂಪಗಳು.

# ನಾಗರಿಕತೆಯು ನೆಲೆವಿ

ಜಗತ್ತಿನಲ್ಲಿ ವ್ಯಭಿಚಾರವನ್ನು ತಡೆಯುವುದಕ್ಕಾಗಿ ಮಹತ್ವದ ಯತ್ನಗಳು ಪುರಾತನ ಕಾಲದಿಂದ ನಡೆಯುತ್ತಾ ಬಂದಿರುವುದಿದ್ದರೂ ಈ ಕಾಲದ ತನಕವೂ ಅದನ್ನು ತಡೆಯಲು ಸಾಧ್ಯವಾಗದಿರುವುದನ್ನು ನೋಡುವಾಗ ಮಾನವ ಜೀವನದ ಸುಖದ ಪ್ರಾಮುಖ್ಯ ಭಾಗವೆನಿಸಿರುವ ಸಂಭೋಗವನ್ನು ಅಳಿಸಿಬಿಡುವುದು ಸುಲಭಸಾಧ್ಯವಾದ ಕೆಲಸವಲ್ಲವೆಂದು ವ್ಯಕ್ತವಾಗುತ್ತದೆ. ವಿವಿಧ ಧರ್ಮಗಳು ಬ್ರಹ್ಮಚರ್ಯವೇ ಮೊದಲಾದ ಹಲವಾರು ಕಠಿನ ನಿಯಮಗಳನ್ನು ಸಮಾಜದಲ್ಲಿ ಜಾರಿಗೆ ತಂದಿರುವುದಿದ್ದರೂ ರಹಸ್ಯದಲ್ಲಿ ನಡೆಯುತ್ತಿರುವ ವಿಟವೃತ್ತಿಯು ಸಂತತವಾಗಿ ನಡೆಯುತ್ತಾ ಬಂದಿದೆ. ಪಾಶ್ಚಾತ್ಯ ನಾಗರಿಕತೆಯ ಹೆಸರಿನಲ್ಲಿ ನಾನಾ ತರದ ಅತ್ಯಾಚಾರಗಳು ನಡೆಯುತ್ತಿವೆ. ಹತೋಟಿಯಿರದಿದ್ದರೆ ಪ್ರತಿಯೊಂದು ವಿಚಾರವು ನಿಯಮಿತ ಮೇರೆಯನ್ನು ಮೀರಿ ಸಮಾಜಕ್ಕೆ ಹಾನಿಯನ್ನುಂಟುಮಾಡುತ್ತದೆ.

### ಪ್ಯಾರಿಸಿನ ಕ್ಯಾಬರೆಟಿನಲ್ಲಿ!

ನ್ಯೂಯಾರ್ಕ್ ನಗರದಿಂದ ಪ್ರಕಟವಾಗುತ್ತಿರುವ "True Romances" ಎಂಬ ಮಾಸ ಪತ್ರಿಕೆಯಲ್ಲಿ ಜ್ಹೋನ್ ಸ್ಟೀವನ್ಸನ್ ಎಂಬವರು ಪ್ಯಾರಿಸಿನ ಪಾಪಕೂಪಗಳ ಕುರಿತು "What I saw in the Red City" ಎಂಬೊಂದು ಲೇಖನದಲ್ಲಿ ಬರೆದುದನ್ನು ಇಲ್ಲಿ ಉದ್ಧರಿಸುತ್ತೇನೆ:—

"ಅಮೇರಿಕದ ಮಿಲಿಯಾಧಿಪತಿಗಳು ಹೆಚ್ಚಿನ ಕಾಲವನ್ನು



ಬೆಳ್ದಿಂಗಳಲ್ಲಿ ತನ್ನ ದೇಹ ಸೌಂದರ್ಯವನ್ನು ಪ್ರದರ್ಶಿಸುತ್ತಿರುವ ನೀರೆಯೊಬ್ಬಳ ಸುಂದರ ಭಂಗಿ.

ಪ್ಯಾರಿಸ್ ನಗರದಲ್ಲಿ ಕಳೆಯುತ್ತಿರುವರೆಂಬುದನ್ನು ನಾನು ಮೊದಲಿಂದಲೇ ಕೇಳಿದ್ದೆ. ಪ್ಯಾರಿಸ್ ನಗರವು ಕಲೆಯ ತವರೂರೆಂದು ಪ್ರಸಿದ್ಧಿ ಹೊಂದಿರುವುದರಿಂದ ಈ ಮಹಾನುಭಾವರು ಪ್ರಾಯಶಃ ಪ್ಯಾರಿಸಿನ ಕಲಾವೈಭವವನ್ನು ಕಣ್ತುಂಬಾ ಕಂಡು ಸಂತೋಷಪಡುತ್ತಿದ್ದಾರೆಂಬ ಭಾವನೆಯು ನನ್ನಲ್ಲಿ ಹುಟ್ಟಿತು. ಎರಡು ವರುಷಗಳ ಹಿಂದೆ ನಾನು ಲೋಕ ಸಂಚಾರಕ್ಕೆಂದು ಹೊರಟಾಗ ಪ್ಯಾರಿಸನ್ನು ಕಂಡು ಅಲ್ಲಿಯ ವಿಶೇಷಗಳನ್ನು ಅರಿಯಬೇಕೆಂಬ ಕುತೂಹಲವು ನನ್ನಲ್ಲಿ ತುಂಬಾ ಇತ್ತು. ಅಮೇರಿಕದ ಎಲ್ಲೆಡೆಗಳಲ್ಲಿಯೂ ಸಿಗುವ ಕಾಮಪ್ರಚೋದಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಪ್ಯಾರಿಸ್ ಇರುಳು ಕಥೆಗಳನ್ನೂ, ಅವುಗಳಲ್ಲಿರುವ ನಾನಾ ತರದ ನಗ್ನ ಚಿತ್ರಗಳನ್ನೂ ನಾನು ಕಂಡಿದ್ದೆ. ನಮ್ಮ ನಾಗರಿಕತೆಯ ಅಧೋಗತಿಯು ಎಷ್ಟರಮಟ್ಟಿಗೆ ಹೊಂದಿದೆಯೆಂದು ನನಗೆ ತಿಳಿಯಬೇಕಾಗಿತ್ತು.

"೧೯೩೭ನೆ ಮಾರ್ಚ್ ತಿಂಗಳ ಅದೊಂದು ಶುಭ್ರ ಸಾಯಂಕಾಲದಲ್ಲಿ ನಾನು ಪ್ಯಾರಿಸ್ ನಗರದ ಸೀನ್ ನದಿಯ ತೀರದಲ್ಲಿ ನಿಂತುಕೊಂಡು ಗಾಳಹಾಕುತ್ತಿರುವ ಮಹನೀಯರನ್ನು ನೋಡುತ್ತಿದ್ದೆ.

ಫ್ರೆ
ಫ್ರೆ

ಕಾರ
ಕೂಡಿ
ನದಿಯ
ಬಿಂಬಿ
ತ್ತಿದ್ದ
ತ್ತಿದ್ದೆ.
ಯಾರಿ
ಹಿಂತಿರ
ತಾವು
ವ್ಯಕ್ತಿ.
'ತಾವಿ
ಕಂಡಿರ
'ಇಲ್ಲ,
ಹೇಳಿದೆ
ಹೋ
ಪ್ರಾಯ
ಒಬ್ಬ
ನಾನು
"
ಸಮು
ಬೀದಿ
ಹೊಸ
ಭವನ
ಬಾಯ
ಎಂದ
ಅವಳ
"
ಬಹು

# ನೀತಿಯ ಸಮಾಧಿ!
# ಶಾಮಂದಿರದಲ್ಲಿ ಅಸಹ್ಯ

**ಈ ಲೇಖಾಂಕದಲ್ಲಿ ನ್ಯೂಯಾರ್ಕಿನ "True Romances" ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಪ್ರಥಮ ಭಾಗವನ್ನು ಕೊಡಲಾಗಿದೆ. ಮುಂದಿನ ಲೇಖಾಂಕಗಳು ಕ್ರಮವಾಗಿ 'ಅಂತರಂಗ'ದಲ್ಲಿ ಪ್ರಕಟಿಸಲ್ಪಡುವವು.**

ಬರೆದವರು: ಶ್ರೀ. "ಕೌಶಿಕ".

●

Beautiful' ಎಂದು ಬೋರ್ಡು ತೂಗ ಹಾಕಿರುವ ಕಟ್ಟಡದೊಳಗೆ ಪ್ರವೇಶಿಸಿದೆವು. ಪ್ರವೇಶಿಸಿದ್ದೇ ತಡ, ಎಲ್ಲಾ ಕಡೆಗಳಿಂದಲೂ ನನಗೆ ಸಂಗೀತವು ಕೇಳಿಸಿತು. ಪ್ರಾಯಶಃ ನೃತ್ಯವಾಗುತ್ತಿರಬಹುದೆಂದು ಭಾವಿಸಿದೆ. ನನ್ನ ಮಿತ್ರ ನನ್ನನ್ನು ಒಂದು ಕೋಣೆಯೊಳಗೆ ಕರೆದುಕೊಂಡು ಹೋದ. ಸೊಗಸಾದ ಕೋಣೆ. ಗೋಡೆಯು ಬಹಳ ಸುಂದರವಾದ ವಸ್ತುಗಳಿಂದ ಅಲಂಕರಿಸಲ್ಪಟ್ಟಿತ್ತು. 'ಅರೆನಿಮಿಷದಲ್ಲಿ ಬರುತ್ತೇನೆ' ಎಂದು ಹೇಳಿ ನನ್ನ ಮಿತ್ರನು ಹೊರ ನಡೆದ. ನಾಲ್ಕೈದು ನಿಮಿಷಗಳ ತನಕ ಕೋಣೆಯಲ್ಲಿ ಯಾರೂ ಇದ್ದಿಲ್ಲ. ನಾನು ಗೋಡೆಯಮೇಲಿನ ಚಿತ್ರಗಳನ್ನು ನೋಡಲಾರಂಭಿಸಿದೆ. ಹಿಂದೆ ಓದಿದ್ದ ಪತ್ರಿಕೆಗಳಲ್ಲಿ ಕಂಡಂತಹ ಕೆಲವು ಚಿತ್ರಗಳು ಅಲ್ಲಿದ್ದುವು. ಎಲ್ಲಾ ನಗ್ನ ಚಿತ್ರಗಳು. ಎಂಥವನನ್ನೂ ಮರಳುಗೊಳಿಸುವತಂಹ ದೃಶ್ಯಗಳು. ಒಂದು ಚಿತ್ರದಲ್ಲಿ ಓರ್ವ ಸುಂದರಿಯ ನಗ್ನ ದೇಹವನ್ನು ಒಬ್ಬ ತರುಣನು ಆಲಿಂಗಿಸಿ ಆಕೆಯನ್ನು ಮುದ್ದಿಡುತ್ತಿದ್ದನು. ಇನ್ನೊಂದರಲ್ಲಿ ಸ್ವರ್ಗದ ಸ್ತ್ರೀಯಂತೆ ಒಬ್ಬಳು ತನ್ನ ನಗ್ನ ದೇಹದ ಸೌಂದರ್ಯವನ್ನು ತೋರಿಸುತ್ತಿದ್ದಳು. ಕೂಡಲೆ ಬಾಗಿಲಿ ಬಳಿಯಿಂದೊಂದು ಸ್ವರ ಕೇಳಿಸಿತು. "ಒಳಗೆ ಬರಬಹುದೇ?" ಎಂದು ಕೂಗಿತೊಂದು ಸ್ತ್ರೀಕೋಗಿಲೆ. ಅಚ್ಚರಿಯಿಂದ ನಾನು ಸುಮ್ಮನಿದ್ದೆ. ಪ್ರಾಯಶಃ ಇದು ಪ್ಯಾರಿಸಿನ ವ್ಯಭಿಚಾರ ಗೃಹವಾಗಿರಬೇಕೆಂದು ನಾನು ಭಾವಿಸಿದೆ. ಕೂಡಲೆ ಬಾಗಿಲು ತೆರೆದು ಆಕೆಯು ಒಳಗೆ ಬಂದಾಯ್ತು. ನಾನು ನಿಂತುಕೊಂಡಿದ್ದೆ. "ನಿಂತುಕೊಂಡಿದ್ದೀರೇಕೆ"ಂದು ಹೇಳಿ ಸಮೀಪದಲ್ಲಿದ್ದ ಸೋಫಕ್ಕೆ ನನ್ನನ್ನು ಆಕೆಯ ಸುಂದರವಾದ ಕೈಗಳಿಂದ ನೂಕಿದಳು. ದೂಡಿದ ಭರಕ್ಕೆ ನಾನು ಸ್ಪ್ರಿಂಗಿನ ಸೋಫದ ಮೇಲೆ ಬಿದ್ದುಬಿಟ್ಟೆ. ನನ್ನನ್ನು ದೂಡಿದ ಆಕೆಯ ಧೈರ್ಯವನ್ನು ಕಂಡು ನಾನು ಬೆರಗಾಗಿ ಆಕೆಯನ್ನೇ ನೋಡುತ್ತಿದ್ದೆ.

"ಆ ಮಾಟಗಾರ್ತಿ ನೋಡಲಿಕ್ಕೆ ಬಹಳ ಸುಂದರಿಯಾಗಿದ್ದಳು. ಸ್ವರ್ಣ ವರ್ಣದ ಕೂದಲನ್ನು ಬಾಚಿದ ರೀತಿ, ಬಣ್ಣದಿಂದ ಚಿತ್ರಿಸಿದ ಆ ಹುಬ್ಬುಗಳು, ಕೆಂಪು ತುಟಿ ಮತ್ತು ಕೋಮಲಿನ ಕೊಂಕು ಎಂಥವನ ಹೃದಯವನ್ನೂ ಸೂರೆಗೊಳಿಸುವಂಥವುಗಳು. ಆಕೆ ಬಹಳ ತೆಳ್ಳಗಾದ ಬಟ್ಟೆಯನ್ನು ಧರಿಸಿದ್ದಳು. "ಇಲ್ಲಿಗೀಗ ಬಂದವರು ಎಲ್ಲಿ?" ಎಂದು ಕೇಳಿದೆ. "ಅವರು ಜರೂರು ಕೆಲಸದ ಮೇಲೆ ಹೋದರು. ಸುಮಾರು ೧೧ ತಾಸಿಗೆ ಬರುತ್ತಾರೆಂದಳಾಕೆ. ಕೂಡಲೆ ಹಸುರು ಬೆಳಕೊಂದು ಕೋಣೆಯನ್ನು ಹಬ್ಬಿತು. ಅಪೂರ್ವವಾದೊಂದು ಪರಿಮಳವು ಅಲ್ಲಿ ಪಸರಿಸಿತು. ನನ್ನೆದುರು ನಿಂತಿದ್ದ ಆ ತರುಣಿ ತನ್ನ ವಸನವನ್ನು ಒಮ್ಮೆಗೇ ಬಿಚ್ಚಿಬಿಟ್ಟಳು. ನನಗೆ ಬೇಸರವೆನಿಸಿತು. ಆಕೆ ನಗಬಹುದೆಂದು ನಾನು ಸುಮ್ಮಗಾದೆ. ನನ್ನ ಮೌನವನ್ನು ಆಕೆಯು ಸಮ್ಮತಿಯೆಂದು ಭಾವಿಸಿದಳೆಂದು ತೋರುತ್ತದೆ. ಅರೆನಿಮಿಷದಲ್ಲಿ ಆಕೆಯ ಎರಡೂ ನಳಿತೋಳ್ಗಳು ನನ್ನ ಕಂಠವನ್ನಾವರಿಸಿದ್ದುವು. ಆಕೆಯು ನನ್ನನ್ನು ಅಪ್ಪಿ ಹಿಡಿದು ಮುದ್ದಿಸಿ ಬಿಟ್ಟಳು . . . .

"ಅದಾದೊಡನೆಯೇ ಹತ್ತು ಫ್ರಾಂಕ್ ಕೊಡಿರೆಂದು ಕೇಳಿದಳವಳು. ಆಕೆಗೆ ಇಂಗ್ಲಿಷ್ ಚೆನ್ನಾಗಿ ಬರುತ್ತಿತ್ತು. 'ನೀನು ಎಲ್ಲಿಯವಳು?' ಎಂದು ಕೇಳಿದೆ. 'ನನ್ನ ಹುಟ್ಟೂರು ಯುನೈಟೆಡ್ ಸ್ಟೇಟ್ಸ್. ಮೆಸೆಚುಸೆಟ್ಸಿನಲ್ಲಿ ನಾನು ಹುಟ್ಟಿದ್ದೆಂದು ನನ್ನ ತಾಯಿ ಹೇಳಿದ್ದಳು. ನಾನು ಮೆಸೆಚುಸೆಟ್ಸ್ ಶಾಲೆಗೆ

ಹೋಗುತ್ತಿದ್ದೆ. ಆದೊಂದು ಸಂಜೆ ಒಬ್ಬ ಯುವಕನು ನನ್ನನು 'Free Ride'ಗೆಂದು ಮೋಟಾರಿನಲ್ಲಿ ಕರೆದುಕೊಂಡು ಹೋದ. ಬಹಳ ದೂರದಲ್ಲಿದ್ದ ಒಂದು ಕಟ್ಟಡಕ್ಕೆ ನನ್ನನ್ನು ಅವನು ಕರೆದುಕೊಂಡು ಹೋದ. ಆ ದಿನ ರಾತ್ರಿ ಅವನು ನನ್ನೊಡನೆ ಸುಖಹೊಂದಿದ. ರಾಬರ್ಟ್ ಜೋನ್ಸ್ ಎಂದವನ ಹೆಸರಂತೆ. ಅಲ್ಲಿಂದ ಕಳೆದ ವರುಷ ನನ್ನನ್ನೀ ಕ್ಯಾಬರೆಟಿಗೆ ತಂದರು. ಇದನ್ನು ನಡೆಸುವವನು ಒಬ್ಬ ಇಂಗ್ಲಿಷ್ ವ್ಯಕ್ತಿ. ಇಲ್ಲಿಗೆ ಅಮೇರಿಕಾ ಇಂಗ್ಲೆಂಡುಗಳಿಂದ ಹಲವು ಮಿಲಿಯಾಧಿಪತಿಗಳು ಬರುತ್ತಾರೆ. ಪ್ರತಿದಿನವೆಂಬಂತೆ ಇದರ ಯಜಮಾನನು ಸುಂದರಿಯರನ್ನು ಕೊಂಡುಕೊಳ್ಳುತ್ತಾನೆ. ನನ್ನನ್ನು ಬಿಟ್ಟುಬಿಡಿರೆಂದು ನಾನು ವಿಧ ವಿಧದಿಂದ ಕೇಳಿದರೂ ಅವರೊಪ್ಪುವುದಿಲ್ಲ. ನನ್ನ ಜವ್ವನ ಹುತ್ತು ಸೌಂದರ್ಯವು ನನ್ನ ಪಾಲಿನ ತೊಂದರೆಯಾಗಿದೆ" ಎಂದು ಅಳಲಾರಂಭಿಸಿದಳಾಕೆ.

"ಬೇಸರಿಸಬೇಡ''ವೆಂದು ಹೇಳಿ ಆಕೆಯನ್ನು ಸಮಾಧಾನಿಸಿದೆ. ಅವಳ ಕಣ್ಣುಗಳು ನೀರಿನಿಂದ ತುಂಬಿದ್ದುವು. ಒಂದು ಗೇಣು ಹೊಟ್ಟೆಯನ್ನು ಹೊರೆಯುವುದಕ್ಕಾಗಿ ಇಂತಹ ನಿಕೃಷ್ಟ ಜೀವನವನ್ನು ನಡೆಸುವ ಆಕೆಯ ಅವಸ್ಥೆಯನ್ನು ಕಂಡು ನನಗೆ ಕನಿಕರವಾಯಿತು. ಒಂದೆರಡು ಬಾರಿ ಮುದ್ದಿಟ್ಟು ಹೇಳಿದಳಾಕೆ: 'ಹದಿನೆರಡು ತಾಸಿಗೆ ನನ್ನ ಕೆಲಸವು ಮುಗಿಯುತ್ತದೆ. ನೀವು ಇಲ್ಲಿಯೇ ವಿಶ್ರಮಿಸಿ ಕೊಂಡಿರಿ. ಇನ್ನು ಹತ್ತು ಫ್ರಾಂಕ್ ಕೊಟ್ಟರೆ ನಾಳೆ ರಾತ್ರಿಯಾಗುವ ತನಕ ಇಲ್ಲಿರಬಹುದಾಗಿದೆ.' ಎಂದು ಹೇಳಿ ಹೊರಟು ಹೋದಳಾಕೆ. ನಾಲ್ಕೈದು ನಿಮಿಷಗಳಲ್ಲಿ ೨೦ ಫ್ರಾಂಕ್‌ಗಳಿಗೊಂದು ಟಿಕೇಟನ್ನು ತಂದನೊಬ್ಬ ಹುಡುಗ.

"ಪ್ಯಾರಿಸಿನ ಈ ಕ್ಯಾಬರೆಟಿನ ರಹಸ್ಯವನ್ನು ಸುಲಭವಾಗಿ ತಿಳಿಯಬಹುದೆಂದು ಭಾವಿಸಿ ಹದಿನೆರಡು ತಾಸಾಗುವ ವರೆಗೆ ಕಾಯುತ್ತಿದ್ದೆ. ಹನ್ನೆರಡೂವರೆ ತಾಸಿಗೆ ಆಕೆ ನನ್ನ ಕೋಣೆಗೆ ಬಂದಳು. ಸೋಫದಲ್ಲಿ ನನ್ನನ್ನೊತ್ತಿ ಕುಳಿತು ಪುನಃ ಮುದ್ದಿಸಲಾರಂಭಿಸಿದಳು. 'ನಿಮಗೆ ಈ ಕ್ಯಾಬರೆಟಿನ ರಹಸ್ಯಗಳನ್ನು ತಿಳಿಯಬೇಕೆಂದಿದ್ದರೆ ನನ್ನೊಂದಿಗೆ ಬನ್ನಿರಿ' ಎಂದು ಕರೆದುಕೊಂಡು ಹೋದಳು.

"ಅವನೊಬ್ಬ ಮಿಲಿಯಾಧಿಪತಿಯಂತೆ. ಚಿಕ್ಕ ಕಿಟಿಕಿಯೊಂದರಿಂದ ಅವನಿದ್ದ ಕೋಣೆಯಲ್ಲಾಗುತ್ತಿದ್ದ ಅನಾಚಾರವನ್ನು ನನಗೆ ತೋರಿಸಿದಳಾಕೆ. ಎಂಟು ಸ್ತ್ರೀಯರು ಆ ಕೋಣೆಯಲ್ಲಿದ್ದರು. ಎಲ್ಲರೂ ತರುಣಿಯರು. ನೋಡುವಾಗ ವಿವಿಧ ದೇಶಗಳವರಂತೆ ಕಾಣುತ್ತಿತ್ತು. ಅವರ ನಗ್ನದೇಹವನ್ನು ಕಾಮದೃಷ್ಟಿಯಿಂದ ಆ ಮುದುಕ ನೋಡುತ್ತಿದ್ದ. ಮೇಜಿನ ಮೇಲೆ ಹತ್ತಾರು ವಿಧದ ಮದಿರೆಗಳಿದ್ದುವು. ಪ್ರಾಯಶಃ ಎಲ್ಲರೂ ಕುಡಿದು ಮತ್ತರಾಗಿರಬೇಕು. ನಾನು ಕಂಡ ದೃಶ್ಯವನ್ನು ವರ್ಣಿಸಿ ಬರೆಹದ ಮೀರೆ ಮೀರಲು ನನಗಿಚ್ಛೆಯಿಲ್ಲ. ಪ್ರಾಯಶಃ ಆ ಮುದುಕನು ಅವರ ದೇಹಗಳ ಯಾವ ಭಾಗವನ್ನೂ ಉಪಯೋಗಿಸದೆ ಬಿಟ್ಟಿರಲಿಕ್ಕಿಲ್ಲ. ಎಂಟು ಮಂದಿಯೂ ಅವನ ಸುತ್ತಲೂ ನಿಂತು ತಮ್ಮ ದೇಹಸುಖವನ್ನು ಅವನಿಗೆ ಕೊಡುತ್ತಿದ್ದರು. ಸಾಕೆಂದೆಣಿಸಿ ನಾವು ಇನ್ನೊಂದು ಕೋಣೆಯ ಸಮೀಪಕ್ಕೆ ಹೋದೆವು.

"ನನ್ನೊಡನಿದ್ದ ತರುಣಿ ಹೇಳಿದಳು. 'ಈಕೆಯೊಬ್ಬ ಸ್ತ್ರೀ. ತನ್ನ ಗಂಡನನ್ನು ಮೆಚ್ಚದೆ ತಿಂಗಳಿಗೊಮ್ಮೆ ಇಲ್ಲಿ ಬರುತ್ತಿದ್ದಾಳೆ. ವಿವಿಧ ದೇಶಗಳಿಂದ ಬಂದ ಪುರುಷರಿಂದ ಭೋಗ ಸುಖವನ್ನು ಪಡೆಯುತ್ತಿದ್ದಾಳೆ.' ನಾವು ಮುನ್ನಡೆದೆವು.

"ಅಲ್ಲೊಂದು ನ್ಯಗ್ನ ನತ್ಯವಾಗುವಾಗುತ್ತಿತ್ತು. ತರುಣರೂ ತರುಣಿಯರೂ ಮದಿರೋನ್ಮತ್ತರಾಗಿ ಡಾನ್ಸ್ ಮಾಡುತ್ತಿದ್ದರು. ಕೆಲವರು ಸ್ಮೃತಿಯಿಲ್ಲದೆ ಬಿದ್ದಿದ್ದರು. ಮಿಕ್ಕುಳಿದವರು ವಿವಿಧ ಕಾಮಚೇಷ್ಟೆಗಳನ್ನು ಮಾಡಿ ನಲಿಯುತ್ತಿದ್ದರು. ಮೂಲೆಯಲ್ಲೊಬ್ಬನು ಹಾಡುತಿದ್ದ.

"ನಾವು ನೋಡಿದ ಇನ್ನೊಂದು ದೃಶ್ಯವು ಕರುಣಾಜನಕವಾಗಿದೆ. ಪ್ರತಿಯೊಂದು ಕೋಣೆಗೆ ರಹಸ್ಯದ ದೃಶ್ಯಕವಾಟಗಳಿರುವುದರಿಂದ ನಮಗದನ್ನು ನೋಡಲು ಸಾಧ್ಯವಾಯಿತು. ನನ್ನೊಡನಿದ್ದವಳು ಹೇಳಿದಳು: "ಈಕೆಯೊಬ್ಬ ಚೀನೀ ತರುಣಿ. ಜಪಾನಿಯರು ಸೆರೆಹಿಡಿದು ಆ ಮೂಲಕ ಹಣಸಂಪಾದನೆ ಮಾಡುತ್ತಿದ್ದರಂತೆ. ಕ್ಯಾಬರೆಟಿಗೆ ಈಕೆ ನಿನ್ನೆ ಬಂದಳು. ಈಕೆಗೆ ನಮ್ಮ ಯಜಮಾನನು ೫೦೦ ಫ್ರಾಂಕುಗಳನ್ನು ಕೊಟ್ಟಿದ್ದಾನೆಂದು ನಮ್ಮ ದೊಡ್ಡಕ್ಕ ಹೇಳಿದಳು. (ದೊಡ್ಡಕ್ಕನೆಂದರೆ ಅಲ್ಲಿಯ ಪ್ರಮುಖ ಸ್ತ್ರೀಯಂತೆ) ಇವಳೊಡನೆ ಸುಖಿಸುತ್ತಿರುವವನು ಒಂದು ದಿನಕ್ಕೆ ೧೦೦ ಫ್ರಾಂಕುಗಳನ್ನು

(೩೧ನೆ ಪುಟ ನೋಡಿರಿ)



ಒಂದು ಕಿರುಗತೆ.

# "ನನ್ನ ಉಡ್ಡಾಣ ಮರ್ಯಾದೆ!"

ಬರೆದವರು:
ಪಂ. ಲಕ್ಷ್ಮೀನಂದ.

ಕಾಲೇಜಿನ ಸ್ಯಾಕಲ್ ಸ್ಪರ್ಧೆಯಲ್ಲಿ ನಾನು ವೇಗವಾಗಿ ಸ್ಯಾಕಲ್ ಓಡಿಸುತ್ತಿದ್ದುದು ನೆನಪಾಯಿತು.

ಸಾಯಂಕಾಲವಾಗಿದ್ದಿತು. ಸುಮಾರು ಏಳು ಗಂಟೆಯಾಗಿರಬಹುದು. ಡಾ| ನರೇಶರ ಬೂಟಿನ ಖಟ್ ಖಟ್ ಎಂಬ ಶಬ್ದದೊಡನೆ "*All O. K.* ನಡೆಯಿರಿ" ಎಂಬ ಕೂಗು ಕೇಳಿಸಿತು. ನಾನು ಎದ್ದೆ. ಸರ್ವಸಿದ್ಧತೆಯಾಗಿದ್ದಿತು. ಡಾ| ನರೇಶ, ಕಪ್ತಾನ ಧೀರೇಂದ್ರ ಮತ್ತು ಅಸಿಸ್ಟೆಂಟ್ ಮಿ| ವಿಮಲೇಶ ಇವರೆಲ್ಲರೂ ಆದೇ ಹೊಸದಾಗಿ "ಭಾರತಯಾನ ಸಂಸ್ಥೆ"ಯವರು ತಯಾರಿಸಿದ "ಜವಾಹರ" ಎಂಬ ಯಾನದ ಸುತ್ತಲು ನೆರೆದಿದ್ದರು. ಎಲ್ಲರ ಮುಖದ ಮೇಲೆ ಅದೊಂದು ಬಗೆಯ ಸಾತ್ವಿಕ ತೇಜವು ಪ್ರಕಾಶಿಸುತ್ತಿದ್ದಿತು. ಕಪ್ತಾನ ಧೀರೇಂದ್ರರಂತೂ ಅತೀವ ಉತ್ಸುಕತೆಯಿಂದ "ನಡೆಯಿರಿ ಬೇಗ; ಹೀಗೇನು ಮಂದಗಮನೆಯರಂತೆ ಬರುತ್ತೀರಿ" ಎಂದು ನನ್ನನ್ನು ಕರೆದರು.

ನಾನು ಜವಾಹರದ ಬಳಿಗೆ ಹೋದೆ. ಎಷ್ಟು ಸುಂದರವಾಗಿದ್ದಿತದು. ನಾವು ಭಾರತೀಯರು ಯಾವ ವಿಷಯದಲ್ಲಿಯೂ ಹಿಂದಲ್ಲವೆಂಬುದರ ದ್ಯೋತಕವಾಗಿದ್ದಿತದು. ಇಷ್ಟೇ ಅಲ್ಲ! ನಾವು ಬುದ್ಧಿಯಲ್ಲಿ ಚತುರರಿರುವಂತೆ ಧೈರ್ಯ, ಸಾಹಸ ಮೊದಲಾದವುಗಳಲ್ಲಿಯೂ ಪಾಶ್ಚಾತ್ಯರಿಗೆ ಆದರ್ಶಪ್ರಾಯರಿರುವೆವೆಂಬುದನ್ನು ತೋರಿಸುವ ಸಾಧನವಾಗಿದ್ದಿತದು ಅಂದು!! ಅಂದು ನಾವು ಜಗತ್ತಿನ ವಿಮಾನ-ಉಡ್ಡಾಣ ಮರ್ಯಾದೆಯನ್ನು ಭಂಗಿಸಲು— ಜಗತ್ತಿನ ಎಲ್ಲ ವೈಮಾನಿಕರಿಗಿಂತಲೂ ಆಕಾಶದಲ್ಲಿ ಬಹಳ ಎತ್ತರದವರೆಗೆ ಹೋಗಲು ನಿಶ್ಚಯಿಸಿದ್ದೆವು.

ನಾವು ವಿಮಾನದಲ್ಲಿ ಕುಳಿತುಕೊಂಡೆವು. ನಮ್ಮ ಮಿತ್ರರೂ ನೆರೆದವರೂ ನಮಗೆ ಶುಭಚಿಂತನೆಯೊಡನೆ ಬೀಳ್ಕೊಟ್ಟರು. ಬೇರೆ ಬೇರೆ ದೇಶಗಳಿಂದ ಬಂದಂತಹ ಸಜ್ಜನರು, ನಿಷ್ಣಾತಯಾನವಾಹಕರು, ಮತ್ತು ಶ್ರೀಮಂತರು ನಮ್ಮನ್ನು ದೂರದಲ್ಲಿಂದಲೇ ನೋಡಬೇಕೆಂದು ಬಯಸಿ "ಸರ್ಚುಲಾಯಿಟು"ಗಳನ್ನು ಸಿದ್ಧಗೊಳಿಸಿದರು. ಆಯಿತು, ಫುರ್ರ್ ಎಂಬ ಸಪ್ಪಳದೊಡನೆ ನಮ್ಮ ಯಾನವು ನಗರವನ್ನು ಸುತ್ತತೊಡಗಿತು. ಕೆಲವೇಳೆಯ ಮೇಲೆ ನಾನು "ಬ್ಯಾರೋಮಿಟರ್" (ಹವೆಯ ಭಾರಮಾಪನ ಯಂತ್ರ) ನೋಡಿದೆ. ನನಗೆ ತಿಳಿಯದಲೆ "ಶಹಬಾಶ್! ಬೇಶ್ ಬೇಶ್" ಎಂಬ ಉದ್ಗಾರವು ಹೊರಹೊಮ್ಮಿದವು. ನಾವು ತುಸುವೇಳೆಯಲ್ಲಿಯೇ ೧೫ ಮೈಲಿನಮೇಲೆ ಬಂದಿದ್ದೆವು. ಸೂರ್ಯನು ಪುನಃ ಗೋಚರನಾದನು. ಅವನ ಕಿರಣಗಳಲ್ಲಿ ಆ ಪ್ರಖರತೆ, ಆ ತೀಕ್ಷ್ಣತೆ ಇಲ್ಲದಿದ್ದರೂ ನಾವು ನಮ್ಮ ಯಾನದಲ್ಲಿಯ ದೀಪಗಳನ್ನು ಆರಿಸಿದೆವು ಮತ್ತು ಉತ್ಸುಕತೆಯಿಂದ ಕೆಳಗೆ ನೋಡಿದೆವು. ವಿಮಾನವು ಸುತ್ತುತ್ತಲಿತ್ತು.

ನಾವು ಕೆಳಗೆ ನೋಡಿದೆವು. ದೂರದರ್ಶಕ ಯಂತ್ರದ ಸಹಾಯದಿಂದ ನಮಗೆಲ್ಲವೂ ಗೋಚರವಾದರೂ ಬೋಧೆಯಾಗುತ್ತಿರಲಿಲ್ಲ. ನಾನು ಮತ್ತೆ ಬ್ಯಾರೋಮಿಟರ್ ನೋಡಿದೆ. ನಾವು ಪ್ರಥ್ವಿಯಿಂದ ಸುಮಾರು ೭೦ ಮೈಲು ಎತ್ತರದಲ್ಲಿರುವೆವೆಂದು ತಿಳಿಯಿತು. ನಮ್ಮ ವಿಮಾನದ "ಸ್ಪೀಡಾಮಿಟರ್" ನೋಡಿದೆ. ನಮ್ಮ ಯಾನವು ತಾಸಿಗೆ ೫೭೦ ಮೈಲಿನ ವೇಗದಿಂದ ಓಡುತ್ತಿತ್ತು. ಕಪ್ತಾನ ಧೀರೇಂದ್ರರಂತೂ ದೇಹಭಾನವಿಲ್ಲದೆ ಯಂತ್ರವನ್ನು ನಡೆಸುತ್ತಿದ್ದರು. ನಾನು ಡಾ| ನರೇಶರನ್ನು ಕರೆದು ಅವರಿಗೆ

ನಮ್ಮ ಯಾನದ ವೇಗದ ಬಗ್ಗೆ ಆದೆಷ್ಟೊ ಸಲ ಹೇಳಿದೆ. ಅಂದು ನಾವು ವೇಗದಲ್ಲಿಯೂ ಎಲ್ಲರನ್ನು ಹಿಮ್ಮೆಟ್ಟಿಸಿದ್ದೆವು. ಭಾರತೀಯರನ್ನು ಪುಕ್ಕರು "ಮನುಷ್ಯ ಪ್ರಾಣಿಗ ಳೆಂದು" ಕರೆಯುವ ಇತರ ಸುಧಾರಿಸಿದ ದೇಶಗಳ ಹೆಮ್ಮೆಯಡಗಿತೆಂದು ನಮಗೆಷ್ಟೋ ಆನಂದವಾಯಿತು.

ನಾವು ಪುನಃ ಕೆಳಗೆ ನೋಡಿದೆವು. ಆದರೆ ಕೆಳಗೇನಿದೆ? ಎಲ್ಲೆಡೆಯಲ್ಲಿಯೂ ಅಂಧಕಾರ. ಚಂದ್ರನ ಕಿರಣಗಳಿಂದ ಬೆಳಗಿದ ಪೃಥ್ವಿಯು ನಮಗೆ ಅತೀವ ಮಸಕಾಗಿದ್ದಿತು. ಅಲ್ಲಲ್ಲಿ ತಾರಕೆಗಳಂತೆ ಕಾಣುತ್ತಿರುವ ಸರ್ಚ್‌ಲಾಯಿಟುಗಳು. ಇಷ್ಟೇ! ಮತ್ತೇನೂ ಕಾಣಿಸುವ ಹಾಗಿಲ್ಲ. ಆಯಿತು. ನಾವು ಎಲ್ಲರನ್ನೂ ಮೀರಿ ಮೇಲಕ್ಕೆ ಬಂದ ದ್ದಾಯಿತು. ಆಗಿನ ನಮ್ಮ ಆನಂದವು ವರ್ಣಿಸುವದಶಕ್ಯ. ನಾವು ಸ್ಥಾಪಿಸಿದ ಈ ಉಡ್ಡಾಣ ಮರ್ಯಾದೆಯು ಯಾರಿಂದಲೂ ಭಂಗಿಸಲು ಶಕ್ಯವಿಲ್ಲೆಂಬ ಹೆಮ್ಮೆಯಿಂದ ನಾವು ನಿಲದಾಡಿದೆವು. ಸಂತೋಷದ ಕ್ಷೀರಸಮುದ್ರದಲ್ಲಿ ತೇಲಾಡಿದೆವು. ದೂರದರ್ಶಕ ಯಂತ್ರದ ಸಹಾಯದಿಂದ ನಿರೀಕ್ಷಿಸಲು "ಟಾವರ"ದ ಗಡಿಯಾರವು ಕಾಣಿಸಿತು. ದಿಟ್ಟನೆ ನೋಡಲು ೯ ಗಂಟೆಯಾಗಿರುವದು ತಿಳಿಯಿತು. ನಾವು ನಮ್ಮ ಗಡಿಯಾರಗಳನ್ನು ನೋಡಿದೆವು.

"ಯಂತ್ರವನ್ನು ನೋಡಿ. ನಾವು ಎಷ್ಟು ಮೇಲೆ ಬಂದಿರುವೆವು" ಎಂಬ ಶಬ್ದಗಳು ನಮ್ಮನ್ನು ಎಚ್ಚರಗೊಳಿಸಿದವು. ನಾನು ದೂರದರ್ಶಕ ಯಂತ್ರವನ್ನು ಅದರ ಸ್ಥಳದಲ್ಲಿರಿಸಿ ಬ್ಯಾರೋಮೀಟರ್ ನೋಡಿದೆ...... ಆದರೆ ಅದನ್ನು ನೋಡುತ್ತಲೆ ನನ್ನ ಹರಣವೇ ಹಾರಿತು. ನನ್ನ ಎದೆಯು ಅಂಜಿಕೆಯಿಂದ ಒತ್ತರದಿಂದ ಹಾರತೊಡಗಿತು ಧೈರ್ಯವೆಲ್ಲ ಮಾಯವಾಯಿತು. ಕೈಕಾಲುಗಳು ನಡುಗತೊಡಗಿದವು. ಬಾಯಿಯಿಂದ ಮಾತುಗಳು ಹೊರಡದಾದವು. ನನ್ನ ಈ ಸ್ಥಿತಿನೋಡಿ ಡಾಕ್ಟರರು "ಏಕೆ ಏನಾಗಿದೆ" ಎಂದು ಕೇಳಿದರು. ನಾನು ನಿವಾರಿಸಿಕೊಂಡು ಉತ್ತರವೀಯಲಿಕ್ಕೆ ೫-೬ ಮಿನಿಟುಗಳಾದರೂ ಹಿಡಿದಿರಬಹುದು. ನಾನು ಮೆಲ್ಲನೆ ಹೇಳಿದೆ. "ವಿಮಾನವನ್ನು ಕೆಳಗಿಳಿಸ ಹೇಳಿ ಇಲ್ಲದಿದ್ದರೆ ಈ ಯಾನವೇ ನಮ್ಮ ವಿಮಾನವಾಗಬಹುದು." ನಾನು ಇದನ್ನು ಹೇಳುತ್ತ ಹೇಳುತ್ತ ನಮಗಾಗಿ ಉಸಿರಾಡಿಸಲಿಕ್ಕೊಂದು ತುಂಬಿ ತಂದ ಹವೆಯ ಸಿಲಿಂಡರುಗಳನ್ನು ನೋಡಿದೆ. ಅವುಗಳ ಶಕ್ತಿ ಪರೀಕ್ಷೆಯೇ ನಡೆದಿದ್ದಿತು. ಅವು ಒಳಗಿನ ಒತ್ತುವಿಕೆಯಿಂದ ನಿಮಿಷ ನಿಮಿಷಗಳಲ್ಲಿ ಸಿಡಿದು ಹೋಗುವದು ಖಂಡಿತವೆಂದೆನಿಸಿತು

ನಮ್ಮ ಅಂತ್ಯಕಾಲವು ಸಮೀಪಿಸಿತೆಂದು ನಾನು ತಿಳಿದೆ. ನನ್ನ ತಲೆ ಸುತ್ತತೊಡಗಿತು. ನಾನು ಕಣ್ಣು ಮುಚ್ಚಿಕೊಂಡು ಇದ್ದಕ್ಕಿದ್ದಂತೆ ಸೀಟಿನಲ್ಲಿ ಕುಳಿತುಕೊಂಡುಬಿಟ್ಟೆ. ......ಕೆಲ ಅವಧಿಯ ಮೇಲೆ ಕಿವಿಗಳು ಗಡಚಿಕ್ಕುವಂತಾದ ಸಿಲಿಂಡರುಗಳ ಸ್ಫೋಟನ ಸಪ್ಪಳದಿಂದ ನನಗೆ ಎಚ್ಚರವಾಯಿತು. ನನ್ನ ದೇಹವೆಲ್ಲ ನಡುಗುತ್ತಿತ್ತು. ಬೆವರು ಸುರಿಯುತ್ತಿತ್ತು. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡೆ.

× × × ×

ನನ್ನ ತಲೆಯನ್ನು ಯಾರೋ ಮೆಲ್ಲನೆ ಒತ್ತುತ್ತಿದ್ದರು. ನಾನು ಸಾವಕಾಶವಾಗಿ ಮೇಲೆ ನೋಡಿದೆ "ಏಕೆ. ಏನಾಯಿತು. ಹೀಗೇಕೆ ನಡುಗುವಿರಿ" ಎಂಬ ಮಂಜುಳ ಸ್ವರವು ಕಿವಿಗೆ ಬಿದ್ದಿತು. ಆದರೊಡನೆ ನನಗೆ ಎಲ್ಲವೂ ನೆನಪಾಯಿತು ಕಾಲೇಜಿನ ಸ್ಯಾಕಲ್ ಸ್ಪರ್ಧೆಯಲ್ಲಿ ನಾನು ವೇಗವಾಗಿ ಸ್ಯಾಕಲ್ ಓಡಿಸುತ್ತಿದ್ದುದೂ, ಬದಿಯ ಬೀದಿಯಿಂದ ಮೋಟಾರೊಂದು ವೇಗವಾಗಿ ಬಂದುದೂ, ಅವುಗಳ ತಿಕ್ಕಾಟವೂ ಮತ್ತು ನಾನು ಸ್ಯಾಕಲ್ ಮೇಲಿನಿಂದ ಆಕಾಶದಲ್ಲಿ ತೂರಲ್ಪಟ್ಟರೂ-ಎಲ್ಲವೂ ಜ್ಞಾಪಕಕ್ಕೆ ಬಂದಿತು. ನಾನು ಸಾವಕಾಶವಾಗಿ ಎದ್ದು ಕುಳಿತೆ. ನನ್ನ ತಲೆಯೊತ್ತುತ್ತಿದ್ದ ಇಂದುಮತಿಯು ಕೈಗಳೆರಡನ್ನು ನನ್ನ ಕೈಗಳಲ್ಲಿ ತೆಗೆದುಕೊಂಡು "ಇಂದೂ! ಅಂದು ಸ್ಯಾಕಲನ್ನು ಅಂಕೆಯಲ್ಲಿರಿಸದೆ ನಿಮ್ಮ ಮೋಟಾರಿನ ಜೊತೆಗೆ ತಾಗಿಸಿದೆ. ಈಗ ಯಾನ ಉಡ್ಡಾಣ ಮರ್ಯಾದೆಯನ್ನು ಸ್ಥಾಪಿಸಲು ಹೋಗಿದ್ದೆ. ಆದರೆ ಇದ್ದಕ್ಕಿದ್ದಂತೆ ಕೆಳಗೆ ಬಿದ್ದೆ" ಎಂದೆ. ನನಗೆ ನಗು ಬಂದಿತು. ಆದರೆ ಕಣ್ಣುಗಳಲ್ಲಿ ಅಶ್ರುಗಳು ಬಂದವು. ನನ್ನ ಮುಖಕ್ಕೆ ಬಲವಾದ ಪೆಟ್ಟು ತಾಗಿದ್ದರಿಂದ ನನಗೆ ನಗುವದು ಸಾಧ್ಯವಿರಲಿಲ್ಲ-ಮು... ..ನಾನು ಮುಖವೆತ್ತಿ ನೋಡಿದೆ. ಇಂದುವಿನ ಕಣ್ಣುಗಳು ಅಶ್ರುಗಳಿಂದ ತುಂಬಿದ್ದವು. ನನ್ನ ಈ ಅವಸ್ಥೆಯನ್ನು ನೋಡಿ-ನನಗಾಗಿ..........

———

## ವೀರ ರಾಣಿ ಗ್ವಿಡೆಲ್ಲೋ

ಪಂಡಿತ ಜವಾಹರಲಾಲ ನೆಹರು ರವರು ಅಸ್ಸಾಮ್ ಪ್ರಾಂತ್ಯದ ನಾಗರಾಣಿ ಗ್ವಿಡಲ್ಲೋರವರು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸೆರೆಮನೆ ವಾಸವನ್ನನುಭವಿಸುತ್ತಿರುವ ಕುರಿತು ಸ್ವಲ್ಪ ಸಮಯದ ಹಿಂದೆ ಹೇಳಿದ್ದಾರೆ.

ಈ ವೀರ ರಮಣಿಯು ಈಗ ಶಿಲ್ಲೊಂಗ್ ಸೆರೆಮನೆಯಲ್ಲಿದ್ದಾಳೆ. ಈಕೆಯನ್ನು ಮಣಿಪುರ ಸೆರೆಮನೆಗೆ ಕೊಂಡೊಯ್ಯುವ ಯೋಚನೆ ನಡೆಯುತ್ತಿರುವುದಿದ್ದರೂ ತನ್ನನ್ನು ಬಂಧ ವಿಮೋಚನೆಗೊಳಿಸದಿದ್ದರೆ ತಾನು ಶಿಲ್ಲೊಂಗ್ ಸೆರೆಮನೆಯಲ್ಲಿಯೇ ಇರಲಿಚ್ಛಿಸುತ್ತೇನೆಂದು ಈಕೆ ಹೇಳಿರುತ್ತಾಳೆ. ರಾಷ್ಟ್ರಪತಿ ಸುಭಾಷ ಬೋಸರು ಈಕೆಯನ್ನು ಬಿಡಿಸುವ ಕುರಿತು ಮಣಿಪುರ ಸಂಸ್ಥಾನಾಧಿಕಾರಿಗಳೊಡನೆ ಮಾತುಕತೆಗಳನ್ನು ನಡೆಸುತ್ತಿದ್ದಾರೆ.

---

## ಹಿಚ್‌ಕಾಕ್ ಸ್ಮಾರಕಕ್ಕಾಗಿ ಸತ್ಯಾಗ್ರಹ.

ಕಲ್ಲಿಕೋಟೆಯ ಹಿಚ್‌ಕಾಕ್ ಸ್ಮಾರಕವನ್ನು ತೆಗೆಸದಿದ್ದರೆ ಸತ್ಯಾಗ್ರಹ ಹೂಡುವುದು ಖಂಡಿತವೆಂದು ಏರ್ನಾಡಿನ ಕಾಂಗ್ರೆಸ್ ಕೆಲಸಗಾರರು ಮದ್ರಾಸಿನ ಪ್ರಧಾನರಿಗೆ ತಿಳಿಸಿದ್ದಾರೆ. ರಾಜಾಜಿಯವರು ಇದನ್ನು ತೆಗೆಯಲು ಸಾಧ್ಯವಿಲ್ಲವೆಂದು ಉತ್ತರವಿತ್ತುದಕ್ಕೆ ನವಂಬರ ೧೯ರೊಳಗೆ ಅದನ್ನು ತೆಗೆಸದಿದ್ದರೆ ಸತ್ಯಾಗ್ರಹ ಪ್ರಾರಂಭಿಸುವೆವೆಂದು ಕಾಂಗ್ರೆಸ್ ಕೆಲಸಗಾರರು ಎಚ್ಚರಿಕೆಯಿತ್ತಿದ್ದಾರೆ.

---

## ಪಂಜಾಬಿನಲ್ಲಿ ಸ್ತ್ರೀ ವಿಕ್ರಯ

ಪಂಜಾಬ್ ಪ್ರಾಂತ್ಯದ ಹಲವು ಪೋಲೀಸ್ ಸುಪರಿಂಟೆಂಡೆಂಟರ ಹೇಳಿಕೆಯಂತೆ ಪಂಜಾಬಿನಲ್ಲಿ ಸ್ತ್ರೀ ವಿಕ್ರಯವು ವಿಶೇಷವಾಗಿ ನಡೆಯುತ್ತಿದೆಯೆಂದು ಸ್ಪಷ್ಟವಾಗಿದೆ. ಸಂಯುಕ್ತ ಪ್ರಾಂತ್ಯದ ಕಾಂಗ್ರಾ ಜಿಲ್ಲೆಯಿಂದ ಸುಂದರಿಯರಾದ ತರುಣಿಯರನ್ನು ಸಿಖ್ಖ ಮತ್ತು ಜಾತರೇ ಮೊದಲಾದವರಿಗೆ ಮಾರಲಾಗಿದೆ. ಮುಲ್ತಾನ್ ಮತ್ತು ಮುಝಾಫರ್ ನಗರಗಳಲ್ಲಿ ಸ್ತ್ರೀಯರನ್ನು ಕೊಂಡುಕೊಳ್ಳುವ ಹಲವು ವರ್ತಕರಿರುವರಂತೆ.

ಹೀಗೆ ವಿಕ್ರಯಿಸಲ್ಪಡುವ ಸ್ತ್ರೀಯರು ಮದುವೆಗಾಗಿ ಮಾರಲ್ಪಡುವುದರಿಂದ ಯಾವ ಹಾನಿಯೂ ಇಲ್ಲವೆಂದು ಫಿರೋಝ್‌ಪುರದ ಡಿಪ್ಯುಟಿ ಕಮಿಷನರರು ಅಭಿಪ್ರಾಯಪಟ್ಟಿದ್ದಾರೆ. ಲಾಹೋರಿನಲ್ಲಿ ಈ ವ್ಯಾಪಾರವು ಕೇವಲ ವ್ಯಭಿಚಾರಕ್ಕಾಗಿ ನಡೆಯುತ್ತಿದೆಯೆಂಬುದರಲ್ಲಿ ನಿರ್ವಿವಾದವೆಂದು ಅವರಭಿಪ್ರಾಯ. ಭಾರತದ ವಿವಿಧ ಭಾಗಗಳಿಂದ ತರಿಸಲ್ಪಡುವ ಸ್ತ್ರೀಯರಿಂದ ವ್ಯಭಿಚಾರ ಮಾಡಿಸುವುದು ಲಾಹೋರಿನ ದೊಡ್ಡ ಉದ್ಯೋಗಗಳಲ್ಲೊಂದಾಗಿದೆ!

---

## ಮಾರ್ಷಲ್ ಬ್ಲೂಷರ್ ಸಾಯಲಿಲ್ಲ

ಕೆಲವು ವಾರಗಳ ಹಿಂದೆ ರಷ್ಯದ ನಿಗೂಢ ಪುರುಷ ಮಾರ್ಷಲ್ ಬ್ಲೂಷರನ ಕುರಿತು ಒಂದು ಲೇಖನವು ಪ್ರಕಟವಾಗಿತ್ತು. ಸ್ವಲ್ಪ ಸಮಯದ ಹಿಂದೆ ಈ ವ್ಯಕ್ತಿಯು ಆತ್ಮಹತ್ಯೆಮಾಡಿಕೊಂಡನೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆದರೆ ಮಾರ್ಷಲ್ ವಸ್ಸೀಲಿ ಬ್ಲೂಷರ್‌ನನ್ನು ರಷ್ಯ ಸರಕಾರವು ಚೀನಕ್ಕೆ ಬೆಂಬಲವೀಯಲಿಕ್ಕಾಗಿ ಕಳುಹಿಸಿದೆಯಂತೆ. ಅವನು ಈಗ ಹುನಾನಿನಲ್ಲಿ ಜನರಲ್ ಚೂ ಟೆಯೊಂದಿದ್ದಾನೆ. ೧೯೨೪-೨೭ರಲ್ಲಿ ಇವನು ಜನರಲ್ ಗಾಲೆನ್ಸ್ ಎಂಬ ಹೆಸರಿನಿಂದ ಚೀನಕ್ಕೆ ಬೆಂಬಲವಿತ್ತಿದ್ದನು!


---

(೩೮ನೆ ಪುಟದಿಂದ)

ಕೊಟ್ಟಿರುತ್ತಾನೆ. ನೆರೆಯದಿದ್ದ ಹುಡುಗಿಯ ನರಕಯಾತನೆಯನ್ನು ಕಂಡು ದೇಹವನ್ನು ಮಾರಿ ಕೊಳ್ಳುತ್ತಿರುವ ನಾವೆಲ್ಲರೂ ಮರುಗಿ ನಮ್ಮ ಪಾಡಿಗಾಗಿ ದುಃಖಿಸಿತ್ತಿದ್ದೇವೆ. ಉಪಾಯವಿಲ್ಲದೆ ಆಕೆಯು ಹೀಗಿದ್ದಾಳೆ.

ಅಲ್ಲಿಂದ ನಾವು ಕ್ಯಾಬರೆಟಿನ ಉದ್ಯಾನಕ್ಕೆ ಹೋದೆವು. ಬೆಳದಿಂಗಳಿನಲ್ಲಿ ಹಲವು ಸುಂದರಿಯರು ನಗ್ನರಾಗಿದ್ದು ಕೆಲವು ಪುರುಷರೊಡನೆ ವಿಹರಿಸುತ್ತಿದ್ದುದನ್ನು ಆಕೆ ನನಗೆ ತೋರಿಸಿದಳು. ಇಲ್ಲಿಗೆ ಹೋಗುವವರು ಹೆಚ್ಚಾಗಿ ಮುದುಕರೆಂದು ಆಕೆ ನನ್ನೊಡನೆ ಹೇಳಿದಳು. ಬಹಳ ತಡವಾಗಿದ್ದುದರಿಂದ ಈ ಹೊಲಸು ನರಕವನ್ನು ಕಂಡು ಬೇಸರದಿಂದಲೂ ಆಶ್ಚರ್ಯದಿಂದಲೂ ನಾನು ಕೋಣೆಗೆ ಹಿಂತೆರಳಿದೆ."

ಮುಂದಿನ ಭಾಗದ ಸ್ವಾರಸ್ಯಮಯ ವಿಚಾರಗಳನ್ನು ಬರುವ ಸಂಚಿಕೆಯಲ್ಲಿ ನೋಡಿರಿ!




ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕೆಲವರು ತಮ್ಮೊಳಗೆ ಗೊರಿಲ್ಲಾಯುದ್ಧಕ್ಕೆ ತೊಡಗಿದ್ದಾರೆ.

X X X

'ಅವರವರೊಳಗೇನು ಧಾಡಿ ಬಡಿಯಿತು?' ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. 'ಒಬ್ಬರದಿನ್ನೊಬ್ಬರಿಗೆ ಬಡಿಯಿತು.' ಹೇಗೆ ಗೊತ್ತುಂಟೆ? ಹೀಗೆ:—

X X X

ಒಂದು ಕಡೆಯಲ್ಲಿ ಇಬ್ಬರು ಕಾಡುಮನುಷ್ಯರು ಒಟ್ಟುಗೂಡಿದರು. ಒಂದೇ ಜಾತಿಯವರಾದುದರಿಂದ ಓಡಿಬಂದು ಪ್ರೀತಿಪೂರ್ವಕ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು.

X X X

ಕಾಡುಮನುಷ್ಯರೆಂದರೆ ಕೋರೆ ಹಲ್ಲು, ಉದ್ದ ನಖಗಳಿರುವ ಜಾತಿ. ಅವರು ಅಪ್ಪಿಕೊಂಡ ಭರಕ್ಕೆ ಅವನ ನಖ ಇವನ ಬೆನ್ನಲ್ಲಿ-ಇವನ ಹಲ್ಲು ಅವನ ತುಟಿಯಲ್ಲಿ ಅರ್ಧರ್ಧ ಇಂಚು ಆಳಕ್ಕೂ ನಾಟಿತು. ನೋವಾಗದೆ ಹೋದೀತೆ?

X X X

ಸರಿ. ಸಿಟ್ಟುಬಂದು ಮರುಕ್ಷಣದಲ್ಲೇ ಒಬ್ಬರಿಗಿನ್ನೊಬ್ಬರು ಕಚ್ಚುವದಕ್ಕೂ ಪರಚುವದಕ್ಕೂ ನಿಗುರಿನಿಂತರು. ಎಂತಹ ಪ್ರಮಾದ!

X X X

ಚೂಪಾದ ನಖದಂತಗಳನ್ನು ಮನುಷ್ಯಜಾತಿಯನ್ನು ಕಂಡಾಗ ಹೊರಚಾಚದಿರುವದು ಎಷ್ಟೋ ವಾಸಿ. ಅದು ಸ್ವಭಾವಕ್ಕೆ ವಿರುದ್ಧವೆಂದಾದರೆ ಪ್ರಥಮಾಲಿಂಗನದ ಸಮಯ ಜಾಗರೂಕತೆಯಾದರೂ ಬೇಕಲ್ಲ!

---

'ಏನು ಮಾಡಿಕೊಂಡರೂ ಕಾಂಗ್ರೆಸ್ ಕೆಲಸಗಾರರಲ್ಲವೆ? ಒಂದಲ್ಲೊಂದು ದಿನ ತೀರ್ಮಾನಕ್ಕೆ ಬಂದಾರು' ಎಂಬ ಆಸೆಯಿತ್ತು. ಆದರೆ ಏನಿದು ಗಂಡಾಂತರ!

X X X

ಅವರೊಳಗಿನ 'ವಿ-ಶ್ವಾಸ'ವು ಮಿನಿಟಿಗೆಪ್ಪತ್ತೈದು ಸಲ ಹಿಂದಕ್ಕೂ ಮುಂದಕ್ಕೂ ಹೋಗುತ್ತಾ ಉಂಟಲ್ಲ! ಕೊನೆಯ ಪರಿಣಾಮವನ್ನು ನೆನಸಿಕೊಂಡು ಅಳುವದು ಬೇಡವೆ?

X X X

'ಶ್ವಾಸ'ವು ಹದತಪ್ಪಿ ಮೇಲೆ ಕೆಳಗೆ ಎಳೆಯಲಾರಂಭವಾಯಿತೆಂದೊಡನೆ ಸಂಬಂಧಿಕರು ಅಳುವುದಕ್ಕೆ ಪ್ರಾರಂಭಿಸುವ ಕ್ರಮ. 'ವಿಶ್ವಾಸ'ವು 'ಶ್ವಾಸ'ಕ್ಕಿಂತ ಮಿಗಿಲಾದುದು!

---

ಮಾತಾಡಿದರೆ ಆಡಬೇಕು ಹಿಟ್ಲರನ ಹಾಗೆ. ಮೊನ್ನೆ ಒಂದೆಡೆಯಲ್ಲಿ ಭಾಷಣವೀಯುವಾಗ ಬ್ರಿಟಿಷರ ಪ್ರಜಾಸತ್ತೆಯ ಕುರಿತು ವ್ಯಂಗ್ಯವಾಗಿ '...ಹಿಂದುಸ್ಥಾನದಲ್ಲಿ ಪ್ರಜಾಸತ್ತೆಯುಂಟಲ್ಲ!' ಎಂದು ಹಂಗಿಸಿಯೇ ಬಿಟ್ಟ. ಕಣ್ಣಿಗೆ ಕೈಹಾಕಿ ಮಾತಾಡುವದೆ?

X X X

"ಪ್ರಜಾಸತ್ತೆಯನ್ನು ಫೆಡರೇಶನಿನೊಳಗೆ ತುಂಬಿಸಿಕೊಡುತ್ತೇವೆ, ತೆಗೆದುಕೊಳ್ಳಿ ರಾಯರೇ, ಎಂದು ಎಷ್ಟೋ ವರುಷಗಳಿಂದ ಹೇಳುತ್ತಿದ್ದರೂ ಹಿಂದೀಯರು ಕೇಳುವದಿಲ್ಲ. ನಾವೇನುಮಾಡಲಿ?" ಎಂದು ಬ್ರಿಟಿಷರು ಉತ್ತರ ಕೊಡದಿರುವರೆ?

---

ಈ ಮೊದಲೂ ಒಮ್ಮೆ ಹಿಂದುಸ್ಥಾನದ ಹೆಸರೆತ್ತಿ ಮಾತಾಡಿದ್ದ ಹಿಟ್ಲರ್. ಆಗ ಏನು ಹೇಳಿದ್ದ ಗೊತ್ತುಂಟೆ? "ಭಾರತೀಯರಿಗೆ ನಡೆಯಲು ಕಲಿಸಿದುದು ಬ್ರಿಟಿಷರು!'

X X X

ಅಲ್ಲವೆಂದೇಕೆ ಹೇಳಬೇಕು? 'ಬಗ್ಗಿ ನಡೆಯಲು ಭಾರತೀಯರಿಗೆ ಕಲಿಸಿದುದೇ ಬ್ರಿಟಿಷರು' ಎಂದು ನಾವೂ ಒಪ್ಪಿಕೊಂಡರಾಯಿತು.

X X X

ಬ್ರಿಟಿಷರು ಅನ್ಯರಿಗೆ ನಡೆಯಲು ಕಲಿಸಲಿಕ್ಕೂ ಬಲ್ಲರು, ಮಾತಾಡಲು ಕಲಿಸಲಿಕ್ಕೂ ಬಲ್ಲರು-ಎಂದು ಈಗ ತಿಳಿಯಿತು. ಸರ್ವಜ್ಞರಲ್ಲವೇ ಅವರು?

X X X

ಹಿಂದುಸ್ಥಾನದ ವಿಷಯವಾಗಿ ಅಂದು ಹಾಗೆ ಮಾತಾಡಿದ್ದ ಹಿಟ್ಲರನಿಗೆ, ಚರ್ಚಿಲ್ಲರೇ ಮೊದಲಾದವರು ಹೊಡೆದು ಬಡೆದು ಇಂದು ಹೀಗೆ ಮಾತಾಡಲು ಕಲಿಸಿದರು!

X X X

ನಮಗೂ ಹಿಟ್ಲರನಿಗೂ 'ನಡೆ-ನುಡಿ' ಕಲಿಸುವ ಗುರುಗಳಯ್ಯಾ ಬ್ರಿಟಿಷರು!

X X X

ಹಿಟ್ಲರನಂಥಾ ಜಗದೇಕವೀರನು ತಮ್ಮ 'ಸ್ಕೂಲ್ ಮೇಟ್' ಎಂಬುದೊಂದು ಭೂಷಣವಲ್ಲವೇ ಹಿಂದೀಯರಿಗೆ?

— ಚೂಚು.

---

# "?"

**ಪ್ರಿಯ ವಾಚಕನೇ,**

ನಾವೆಲ್ಲರೂ ಗಮನಿಸಬೇಕಾದ ಚಿಕ್ಕ ಪ್ರಾಮುಖ್ಯ ವಿಷಯಗಳು ಅನೇಕ ಇವೆ. ಅವುಗಳನ್ನು ನೀನು ಯೋಚಿಸುವಂತೆ ಈ ವರೆಗೆ ನಾನು ಕೆಲವು ಲೇಖನಗಳನ್ನು ಅಂತರಂಗದಲ್ಲಿ ಬರೆದೆನು. ಹೊಗೆಸೊಪ್ಪಿನ ಉಪಯೋಗದಿಂದ ಮನುಷ್ಯನು ಹಾಳಾಗುತ್ತಿರುವನು. ಸ್ವಚ್ಛವಾದ ನೀರು ಧರ್ಮಾರ್ಥವಾಗಿ ಎಲ್ಲೆಲ್ಲಿಯೂ ದೊರೆಯುತ್ತಿರುವಾಗ ಒಂದಿಷ್ಟು ಯೋಚಿಸದೆ ಹಣ ಕೊಟ್ಟು ನಿರ್ಮಲವಾಗಿಲ್ಲದ ಸೋಡದ ನೀರನ್ನು ಕುಡಿಯುತ್ತಿರುವನು. ಅನವಶ್ಯಕವಾಗಿ ಬಸ್ಸುಗಳಲ್ಲಿ ಪ್ರಯಾಣ ಮಾಡಿ ತನ್ನ ಕಷ್ಟಾರ್ಜಿತ ಹಣವನ್ನು ದುರ್ವ್ಯಯ ಮಾಡುತ್ತಿರುವನು. ಈ ವಿಚಾರದಲ್ಲಿ ಈ ವರೆಗೆ ನಾನು ಬರೆಯುತ್ತಿದ್ದೆನು. ಕಾಫಿ ಹೊಟೆಲುಗಳಿಂದ ಆಗುತ್ತಿರುವ ಅನರ್ಥಗಳ ವಿಷಯವಾಗಿ ಮುಂದೆ ಬರೆಯುವೆನೆಂದು ಕಳೆದ ಸಲ ಪ್ರಕಟಿಸಿದ್ದೆನು. ಇಷ್ಟರಲ್ಲಿ ಬೇಸರಗೊಂಡ ವಾಚಕರು ಕೆಲವರು ಕೆಲವು ಪ್ರಶ್ನೆಗಳನ್ನು ಸಂಪಾದಕರಿಗೆ ಕಳುಹಿಸಿರುವರು.

ಬೀಡಿ ಸಿಗರೇಟು ಸೇದುವವರ ಹೆಂಡಂದಿರು ಬಹಳ ಕಷ್ಟದಿಂದಿರುವರು ಎಂದು ನಾನು ಬರೆದಿದ್ದೆನಷ್ಟೆ. ಅವರ ಕಷ್ಟ ನನಗೆ ಹೇಗೆ ತಿಳಿಯಿತು ಎಂಬುದೊಂದು ಒಬ್ಬ ವಾಚಕರ ಪ್ರಶ್ನೆ. ಬಸ್ಸಿನಲ್ಲಿ ಫಸ್ಟ್ ಕ್ಲಾಸಿನಲ್ಲಿ ಕುಳಿತು ಬೀಡಿ ಸಿಗರೇಟು ಸೇದುವಾಗ ಅವರ ಹೊಗೆಯನ್ನು ಸಹಿಸಲಾರದೆ ರಿಸರ್ವ್ ಸೀಟಿನಲ್ಲಿ ಕುಳಿತ ಹೆಂಗಸರು ವಾಂತಿ ಮಾಡುವುದನ್ನು ನಾನು ಅನೇಕ ವೇಳೆ ಕಂಡಿದ್ದೇನೆ. ಅಲ್ಲದೆ ನನ್ನ ಬಂಧು ಬಳಗದ ಸ್ತ್ರೀಯರಲ್ಲಿ ಅನೇಕರ ಗಂಡಂದಿರು ಬೀಡಿ ಸಿಗರೇಟು ಸದಾ ಸೇದುವವರಿದ್ದು ಆದರಿಂದಾಗಿ ಅವರು ಪಡುತ್ತಿರುವ ಸಂಕಷ್ಟಗಳು ನನಗೆ ತಿಳಿದು ಬಂದಿವೆ. ಹೀಗಿರುತ್ತಾ ನಾನು 'ಗಂಡಂದಿರು ಬೀಡಿ ಸಿಗರೇಟು ಸೇದುವವರಾದರೆ ಹೆಂಡಂದಿರಿಗೆ ಬಹಳ ಸಂಕಷ್ಟ'ವೆಂದು ಬರೆದುದರಲ್ಲಿ ಅಸ್ವಾಭಾವಿಕವೇನೂ ಇಲ್ಲ.

ಇನ್ನೊಬ್ಬ ವಾಚಕರಿಗೆ ನನ್ನ ಲೇಖನದಲ್ಲಿ ಬರೆದ ವಿಷಯಗಳಲ್ಲೇನೂ ಆಕ್ಷೇಪವಿಲ್ಲ. 'ವಾಚಕನೇ' ಎಂದು ಏಕವಚನದಲ್ಲಿ ಕರೆದದ್ದು ಮಾತ್ರ ನನ್ನದು ತಪ್ಪಾಯಿತಂತೆ. ವಾಚಕರಲ್ಲಿ ಹಿರಿಯರಿದ್ದಾರೆ, ಕಿರಿಯರಿದ್ದಾರೆ, ಐಶ್ವರ್ಯವಂತರಿದ್ದಾರೆ. ಎಲ್ಲರನ್ನೂ 'ವಾಚಕನೇ' ಎಂದು ಒಂದೇ ರೀತಿ ಏಕ ವಚನದಲ್ಲಿ ಸಂಬೋಧಿಸುವ ಈ ಗೆಳೆಯನ್ಯಾರು? ಎಂಬುದು ಅವರ ಪ್ರಶ್ನೆ. ಇದಕ್ಕೆ ನಮ್ಮ ಸಂಪಾದಕರು ಅವರದೊಂದು ಕ್ರಮದಲ್ಲಿ ಉತ್ತರ ಬರೆದಿದ್ದಾರೆ. ನನಗಂತೂ ಇವರ ಪ್ರಶ್ನೆ ನೋಡಿ ಬಹಳ ಬೇಸರವಾಗಿದೆ. 'ನಿಮಗೆ ಬೇಸರವಾದರೆ ನನಗೆ ಬರೆಯಿರಿ' ಎಂದು ಸಂಪಾದಕರ ಆಮಂತ್ರಣವೊಂದು ಯಾವಾಗಲೂ ಇದೆಯೆನ್ನಿ. ಆದರೂ ನಾನು ಸಂಪಾದಕರಿಗೆ ಈ ವಿಚಾರದಲ್ಲಿ ಬರೆಯುವ ಬದಲಿಗೆ ನಿನ್ನ ಕೂಡೆ ಎರಡು ಮಾತು ಹೇಳಬೇಕೆಂದಿದ್ದೇನೆ.

ನಾನು ಈ ಲೇಖನಗಳನ್ನು ಬರೆಯುವಾಗ ಪ್ರತಿಯೊಬ್ಬ ವಾಚಕನನ್ನೂ ಉದ್ದೇಶಿಸಿ ಬರೆಯುತ್ತಿದ್ದೇನೆ. ಯಾರೊಬ್ಬ ವಾಚಕನಾದರೂ ನನ್ನ ಲೇಖನವನ್ನು ಓದುತ್ತಿರುವಾಗ ತನ್ನ ಕೂಡೆ ತನ್ನ ಪ್ರೀತಿಯ ಗೆಳೆಯನೊಬ್ಬನು ಯಾವ ನಿರ್ಬಂಧವೂ ಇಲ್ಲದೆ ತನಗೆ ಕೆಲವು ಹಿತೋಕ್ತಿಗಳನ್ನು ಹೇಳುತ್ತಿದ್ದಾನೆಂದು ಭಾವಿಸಬೇಕು. ನನ್ನ ಈ ಲೇಖನವನ್ನು ಓದುತ್ತಿರುವ 'ಪ್ರಿಯ ವಾಚಕನೇ' ಈಗಲಾದರೂ ಹೇಳು. ನಿನ್ನ ಪ್ರಿಯ ಗೆಳೆಯನು ಅಂತರಂಗದಲ್ಲಿ ನಿನಗೆ ಕೆಲವು ಹಿತೋಕ್ತಿಯನ್ನು ಹೇಳುತ್ತಿರುವಾಗ ನಿನ್ನನ್ನು ಬಹುವಚನದಲ್ಲಿ ಸಂಬೋಧಿಸಬೇಕೇ? ವಾಚಕನೇ, ಎಂದು ಸಂಬೋಧಿಸಿದರೆ ಸಾಲದೇ? ನಿನ್ನನ್ನು 'ವಾಚಕರೇ' ಎಂದು ಸಂಬೋಧಿಸಬಾರದೆಂದು ನನಗೇನೂ ಹಟವಿಲ್ಲ. ನಾನು ಪ್ರಾಯದಲ್ಲಿ ಬಹಳ ಕಿರಿಯವನಲ್ಲವಾದರೂ ಎಲ್ಲಾ ವಾಚಕರಿಂದ ಹಿರಿಯನಲ್ಲ. ದೊಡ್ಡವರನ್ನು ಬಹುವಚನದಲ್ಲಿ ಕರೆಯಬೇಕು, ಬಡವರನ್ನು ಏಕವಚನದಲ್ಲಿ ಕರೆಯಬಹುದೆಂಬ ಭಾವನೆ ನನ್ನಲ್ಲಿಲ್ಲ. ನಾನೊಬ್ಬ ಎಲ್ಲರಿಗಿಂತಲೂ ಹಿರಿಯ ಅಥವಾ ಹಣವಂತನೆಂಬ ಕಾರಣದಿಂದ 'ವಾಚಕನೇ' ಎಂದು

ಎಲ್ಲರನ್ನೂ ಏಕವಚನದಲ್ಲಿ ಸಂಬೋಧಿಸುವುದಲ್ಲ. 'ವಾಚಕರೇ' ಎಂದು ನಾನು ಸಂಬೋಧಿಸಿದರೆ ನಾನು ಪ್ರತಿಯೊಬ್ಬನನ್ನು ಉದ್ದೇಶಿಸಿ ಮಾತಾಡುತ್ತಿದ್ದೆನೋ ಅಥವಾ ಇಡೀ ವಾಚಕವೃಂದವನ್ನು ಉದ್ದೇಶಿಸಿ ಮಾತಾಡುತ್ತಿದ್ದೆನೋ ಎಂದು ತಿಳಿಯುವುದು ಹೇಗೆ? ಪತ್ರಿಕೆಯನ್ನು ಓದುವಾಗ ಪ್ರತ್ಯೇಕವಾಗಿ ಒಬ್ಬನು ಓದುತ್ತಿರುವನು. ಅವನನ್ನು ಉದ್ದೇಶಿಸಿ ನಾನು ಮಾತಾಡುತ್ತಿದ್ದೆನು. 'ವಾಚಕರೇ' ಎಂದು ವಾಚಕವೃಂದವನ್ನು ಬಹಿರಂಗವಾಗಿ ಸಂಬೋಧಿಸುವವನು ಬಹುವಚನದಲ್ಲೇ ಸಂಬೋಧಿಸಲಿ. ಒಬ್ಬನನ್ನು ವಾಚಕರೇ ಎಂದು ನಾನು ಕರೆದರೆ ವಾಚಕ ವೃಂದವನ್ನು ಸಂಬೋಧಿಸುವುದಾದರೆ ಹೇಗೆ ಕರೆಯಬೇಕು? ವಾಚಕವೃಂದವನ್ನು ಹೊಗಳಿ ಸಂತೋಷಗೊಳಿಸುವ ಲೇಖನಗಳಲ್ಲಿ ಅವು. ಪ್ರತಿಯೊಬ್ಬನ ನಡೆನುಡಿಗಳಲ್ಲಿರುವ ಕುಂದುಕೊರತೆಗಳನ್ನು ಸರಿಪಡಿಸಲೆತ್ನಿಸುವ ಲೇಖನಗಳನ್ನು ಬರೆಯುವಾಗ ಉಪಚಾರದ ಮಾತುಗಳು ಪ್ರಯೋಜನಕ್ಕೆ ಬೀಳುವುದಿಲ್ಲ. ಆದುದರಿಂದ ನಿನ್ನನ್ನು ಬೇಕಾದರೆ 'ವಾಚಕ ಮಹಾಶಯನೇ' ಎಂದು ಕರೆಯುತ್ತೇನೆ. ವಾಚಕರೇ ಎಂದು ಮಾತ್ರ ಕರೆಯಲು ಸಾಧ್ಯವಿಲ್ಲ. ಇದಕ್ಕಾಗಿ ನೀನು ಬೇಸರ ಪಡವುದಾದರೆ ಹೇಳು. ನನ್ನ ಲೇಖನಮಾಲೆಯನ್ನು ಇಲ್ಲಿಯೇ ಅಂತ್ಯಪಡಿಸುತ್ತೇನೆ.

ಹೀಗೆಲ್ಲಾ ನಾನೇಕೆ ಬರೆವೆನೆಂದರೆ ನನಗೆ ನಿನ್ನ ಕೂಡೆ ಹೇಳುವ ಸಾವಿರ ಸಂಗತಿಗಳಿವೆ. ಕ್ರಮೇಣ ಅವನ್ನೆಲ್ಲಾ ಒಂದೊಂದಾಗಿ ನಿರ್ಭೀತಿಯಿಂದಲೂ ನಿರ್ದಾಕ್ಷಿಣ್ಯದಿಂದಲೂ ಹೇಳಬೇಕೆಂದಿದ್ದೆ. ಸಂಬೋಧಿಸುವ ವಿಧಾನದಲ್ಲಿಯೇ ನಮ್ಮೊಳಗೆ ಇಷ್ಟು ವಿವಾದವಿರುವುದಾದರೆ ನಮ್ಮೊಳಗಿನ ಮಾತು-ಕತೆ ಮುಂದರಿಯುವುದು ಹೇಗೆ?

ಬರುವ ವಾರ ಕಾಫಿ **ಹೊಟೆಲು**ಗಳ ವಿಷಯವೆಂದು ಪ್ರಕಟಿಸಿದ್ದೆ. ಪ್ರಸ್ತಾವನೆಯಲ್ಲಿಯೇ ಈಗ ಕಾಲ ಕಳೆಯಿತು. ನಿನ್ನನ್ನು 'ವಾಚಕನೇ' ಎಂದು ಕರೆಯುವುದರಿಂದ ನಿನಗೆ ಬೇಸರವಾಗುವುದಿಲ್ಲವಾದರೆ ಆ ವಿಷಯ ಬರುವ ಸಂಚಿಕೆಯಲ್ಲ ಬರೆಯುತ್ತೇನೆ. ನಾನು ಇದೇ ರೀತಿ ಮುಂದರಿಸುವುದು ನಿನಗೆ ಒಪ್ಪಿಗೆಯಾದರೆ ಅದನ್ನೂ ವಿವರಿಸಿ ತಿಳಿಸು. ಇತಿ

ನಿನ್ನ ಪ್ರಿಯ **ಗೆಳೆಯ.**

---


# BEST——CHEAP——AND RELIABLE.

Our 'M' Brand **PURE MUSK**, packed in 1/96th TOLA bottles, price Rs. 4—8—0 per dozen (F. O. R. any station) is a boon to humanity and can be used in all cases of emergency. Highly appreciated and recommended by Doctors, Hakims & Vaids.

Our 'M' Brand **KASTURI PILLS** packed in bottles containing 300 Pills costing annas three (F. O. R. any station) is the best tonic of the day and is highly recommended in cases of impotency, nervous debility and all other diseases of heart weakness.

Our **KRISHANA BRAND HINGOO** packed in 3 tola packets costing 1-14-0 per dozen (F. O. R. any station) is best, fragrant for daily uses. Highly recommended by all who use it.

We also supply best Musk, Saffron, Silver and Gold leaves, Pachakarpur, Goulochin etc. Best Crystal SHILAJIT recommended by all Vaids, Doctors and guaranteed to be pure and best by all who have once used it, packed in beautiful packets of tola one each costing 0—8—0 per bottle F. O. R.

**ALL OTHER MEDICINAL ARTICLES AND JODI BATHIS CAN ALSO BE HAD. ONCE TRIED ALWAYS PATRONISED.**

***PLEASE ORDER ONCE AND OBLIGE.***

## S. D. METHA & CO., *(REGISTERED)*

**Purani Kanak Mandi, AMRITSAR.**

(೧೪ನೆ ಪುಟದಿಂದ)

ಇವೆರಡನ್ನು ಒಂದುಗೂಡಿಸಿದನು. ಈ ಸಂಯುಕ್ತಸಂಘವು ಕೊನೆಗೆ "ತರುಣ ಟರ್ಕರು" ಎಂಬ ಹೆಸರನ್ನು ಪಡೆಯಿತು. ಈ ಸಂಸ್ಥೆಯು ನವಟರ್ಕಿಯ ರಚನೆಯಲ್ಲಿ ತುಂಬಾ ಸಹಾಯಕಾರಿಯಾಯಿತು. ಈ ಕಾಲದಲ್ಲಿ ಕಮಾಲನು ತನ್ನ ತಾಯಿಯೊಂದಿಗೆ ಜೀವಿಸುತ್ತಿದ್ದನು. ಆಕೆ ಮಗನ ಚಟುವಟಿಕೆಗಳಿಗೆ ಅಡ್ಡಿ ಹೇಳುತ್ತಿದ್ದುದನ್ನು ಕಂಡು ಕಮಾಲನು ಬೇರೆಯೇ ವಾಸಿಸಲಾರಂಭಿಸಿದ. ಅವನು ಟರ್ಕಿಯ ಅಧಿನಾಯಕನಾದ ಬಳಿಕವೇ ಆಕೆಯು ಅವನೊಡನಿರುವಂತಾಯಿತು.

## ಸೈನ್ಯಾಧಿಪತಿ ಕಮಾಲ್

ಸುಲ್ತಾನನಿಗೆ ಕಮಾಲನಲ್ಲಿ ವೈರತ್ವವಿದ್ದರೂ ೧೯೦೮ರಲ್ಲಿ ಅವನ ಸಾಮರ್ಥ್ಯವನ್ನು ಕಂಡು ಮೆಸೆಡೋನಿಯರ ಸೈನ್ಯದ ದಳಪತಿಯನ್ನಾಗಿ ನೇಮಿಸಿದನು. ಆ ಕಾಲದಲ್ಲಿ ಕಮಾಲನು ತನ್ನ ಅಪ್ರತಿಮ ಸಾಹಸವನ್ನು ತೋರಿ ಬಹಳ ಜನಪ್ರೀತನಾದನು.

## ಮಹಾ ಯುದ್ಧದಲ್ಲಿ

೧೯೦೮ರಲ್ಲಿ "ತರುಣ ಟರ್ಕ"ರು ಅನ್ವರ್ ಪಾಶನ ಮುಂದಾಳುತನದಲ್ಲಿ ಪ್ರಸಿದ್ಧಿಗೆ ಬಂದರು. ಅನ್ವರ್ ಪಾಶನ ಧಾರ್ಮಿಕ ಮನೋವೃತ್ತಿ ಮತ್ತು ಸಾಮಾಜಿಕ ನಡೆನುಡಿಗಳನ್ನು ಕಮಾಲನು ಮೆಚ್ಚದಿರುತ್ತಿದ್ದುದಂತಿರಲಿ,ಅವುಗಳನ್ನು ಬಹಿರಂಗವಾಗಿ ಖಂಡಿಸಲು ಪ್ರಾರಂಭಿಸಿದ. ರಷ್ಯಕ್ಕೆ ಬೆದರಿ ಜರ್ಮನಿಯೊಡನೆ ಸೇರಿಕೊಳ್ಳುವ ಸಂದರ್ಭವು ಮಹಾಯುದ್ಧದಿಂದಾಗಿ ಟರ್ಕಿಗೆ ದೊರಕಿತು. ಕಮಾಲನು ಇದಕ್ಕೂ ವಿರೋಧವನ್ನು ವ್ಯಕ್ತಪಡಿಸಿದ್ದನು. ಆದರೆ ಅವನು ಯುದ್ಧರಂಗಕ್ಕೆ ಹೋಗದೆ ಸುಮ್ಮನಿರಲಿಲ್ಲ.

## ಕೀರ್ತಿಯ ಹೊಸ್ತಿಲು

ಈ ಕಾಲದಲ್ಲಿ ಜನರಲ್ ಹವಾನ್ ವೊನ್ ಸೇಂಡರ್ಸ್ ಎಂಬವನು ಟರ್ಕಿಯ ಸೈನಾಧಿಪತ್ಯಕ್ಕೆ ರಾಜಿಯಿತ್ತುದರಿಂದ ಕಮಾಲನಿಗೆ ಆ ಸ್ಥಾನವು ದೊರಕಿತು. ೧,೬೦,೦೦೦ ಟರ್ಕಿ ಸೈನಿಕರ ದಳಪತಿತ್ವವು ಕಮಾಲನಿಗೆ ದೊರಕಿತು. ಅವನು ಸೈನಿಕರ ಪ್ರೀತಿಗೆ ಪಾತ್ರನಾದ ರೀತಿಯೂ ಬಹಳ ಸ್ವಾರಸ್ಯವಾಗಿದೆ. ಆದಾನಾ ಎಂಬಲ್ಲಿ ಕಮಾಲನು ಸ್ವತಃ ಸೈನ್ಯದ ಮುಂಚೂಣಿಯಲ್ಲಿ ನಿಂತಿದ್ದಾಗ ಒಂದು ಗುಂಡು ಅವನೆದೆಯನ್ನು ಪ್ರವೇಶಿಸಿತು. ಕಮಾಲನು ಬೆದರದೆ ತನ್ನೆದೆಗುಂಡಿಯ ಮೇಲಿದ್ದ ಜೇಬಿನಿಂದ ಪುಡಿಪುಡಿಯಾದೊಂದು ವಾಚನ್ನು ಹೊರತೆಗೆದನು. ಅದು ಅವನ ಜೀವವನ್ನುಳಿಸಿತು. ಟರ್ಕಿಯ ಸೈನಿಕರು ಅವನನ್ನು ಪರಮಾತ್ಮನೇ ರಕ್ಷಿಸಿದನೆಂದು ಎಣಿಸಿದರು.

## ಗ್ಯಾಲಿಪೋಲಿ ಸಮರ

ಕಮಾಲನು ಯಶಸ್ಸಿನ ಪ್ರಗತಿಪಥದಲ್ಲಿ ಮುನ್ನಡೆಯಲಾರಂಭಿಸಿದ. ಮಹಾಗ್ಯಾಲಿ ಪ್ಯೋಲಿ ಸಮರದಲ್ಲಿ ಬ್ರಿಟಿಷರನ್ನು ಅವನು ಪೂರ್ಣವಾಗಿ ಸೋಲಿಸಿದ. ಇದರಿಂದಾಗಿ ಅವನಿಗೆ 'ಪಾಶಾ' ಅಥವಾ ಮುಖ್ಯ ಸೈನ್ಯಾಧಿಪತಿಯ ಸ್ಥಾನದೊರಕಿತು. ಅನ್ವರ್ ಪಾಶನಿಗೆ ಇದನ್ನು ಕಂಡು ಮತ್ಸರವಾಗಿ ಕಮಾಲನನ್ನು ಏಸ್ಯಾಮೈನರಿಗೆ ಸೈನ್ಯಪರೀಕ್ಷಕನಾಗಿ ಕಳುಹಿಸಿದ. ಇದು ಕಮಾಲನಿಗೆ ಮೆಚ್ಚುಗೆಯಾಗಲಿಲ್ಲ. ಸೂಚನೆಯನ್ನು ತಳ್ಳಿಗಳೆದು ಏಸ್ಯಾಮೈನರಿಗೆ ಹೋಗುವುದು ಯೋಗ್ಯವಲ್ಲವೆಂಬ ವರದಿಯನ್ನು ಅವನು ಒಪ್ಪಿಸಿದ. ಅಷ್ಟರಲ್ಲಿ ಟರ್ಕಿಯು ರಷ್ಯ ಮತ್ತು ಬ್ರಿಟನುಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು.

## ಸುಲ್ತಾನನ ಪದಚ್ಯುತಿ.

ಟರ್ಕಿಯು ನಿರುತ್ಸಾಹಜನಕ ಪರಿಸ್ಥಿತಿಯಲ್ಲಿತ್ತು. ಮೊದಲಿನ ಸುಲ್ತಾನನು ತೀರಿ ಹೋಗಿ ಅವನ ಮಗನಿಗೆ ಪಟ್ಟವಾಗುವುದರಲ್ಲಿತ್ತು. ಅನ್ವರ್ ಪಾಷನು ರಷ್ಯಕ್ಕೆ ಹೋಗಿ ಅಲ್ಲಿ ಮಡಿದಾಯಿತು. "ಯುರೋಪಿನ ರೋಗಿ"ಯ ಅಸ್ವಸ್ಥತೆಯು ಬಹಳ ಕಠಿನವಾಯಿತು. ಐರೋಪ್ಯ ಶಕ್ತಿಯೊಂದಕ್ಕೆ ಟರ್ಕಿಯ ಒಡೆತನವನ್ನು ಕೊಡುವ ಸೂಚನೆಗಳು ಆಗಾಗಲೆ ಮುಂದೆ ಬಂದಿದ್ದುವು. ಆದರೆ ಟರ್ಕಿಯ ವೀರಪುತ್ರನಾದ ಕಮಾಲನು ತನ್ನ ಪಿತೃಭೂಮಿಯ ರೋಗವನ್ನು ನಿವಾರಿಸುವಂತಾಯಿತು.

## ಮೂರು ವರುಷಗಳ ಮಹತ್ಕಾರ್ಯ!

ಮುಸ್ತಾಫಾ ಕಮಾಲನು ಮೂರು ವರುಷಗಳಲ್ಲಿ ಮಾಡಿದ ಮಹತ್ಕಾರ್ಯಗಳಿಂದ ಟರ್ಕಿಯು ವಿಜಯಪತಾಕೆಯ ಮೇಲೇರುವಂತಾಯಿತು. ಚುಟುಕಾಗಿ ಹೇಳುವುದಿದ್ದರೆ ಸುಲ್ತಾನನ್ನು ಓಡಿಸಿಯಾಯಿತು. ಖಲೀಫತನವನ್ನು ಬೇರು ಸಹಿತ ಕಿತ್ತೊಗೆಯಲಾಯಿತು. ಗ್ರೀಕರೊಡನೆ ಬೃಹತ್ ಸಮರ ಬೆಳೆಸಿ ಅವರನ್ನು ಸಮುದ್ರಕ್ಕೋಡಿಸಿಯಾಯಿತು. ಚಾನಾರ್ ಎಂಬಲ್ಲಿಂದ ಮುಂದಡಿಯಿಡದಂತೆ

ಪ್ರತಿಪಕ್ಷರ ಪ್ರಗತಿಯನ್ನೇ ನಿಲ್ಲಿಸ ಲಾಯಿತು. ಇಸ್ಮೆಟ್ ಪಾಶನ ಮೂಲಕ ಲೌಸಾನ್ ಒಪ್ಪಂದ ವನ್ನು ಮಾಡಿಸಿಯಾಯಿತು. ಇದ ರಿಂದಾಗಿ ವಿದೇಶಿಯರು ಟರ್ಕಿಯ ಮೇಲೆ ಅಧಿಕಾರ ನಡೆಸುವುದು ನಿಲ್ಲಿಸಲ್ಪಟ್ಟಿತು. ರಿಪಬ್ಲಿಕಿಗೆ ಒಂದು ಕಾಯಿದೆಯನ್ನು ಕಮಾ ಲನೇ ಬರೆದನು. ಅದಕ್ಕೆ ಸರಿಯಾದ ಒಂದು ಪಾರ್ಲಿಮೆಂಟು ನಿರ್ಮಾಣ ವಾಯಿತು. ಅಂಕಾರವನ್ನು ರಾಜ ಧಾನಿಯನ್ನಾಗಿ ಆರಿಸಲಾಯಿತು. ಹೆಚ್ಚೇಕೆ, ಮುಸ್ತಾಫ ಕಮಾ ಲನು ಇಸ್ವರ ತನಕ ಟರ್ಕಿಯ ಜೀವದಾತ ಅಧ್ಯಕ್ಷನಾಗಿ ಮೆರೆ ದನು.

## ಟರ್ಕಿಯ ರಾಷ್ಟ್ರಧುರೀಣ

ಗ್ರೀಕರನ್ನು ಸೋಲಿಸಿದ ಕೀರ್ತಿ ಮತ್ತು ಲೌಸಾನ್ ಒಪ್ಪಂದದ ಪರಿಣಾಮ ಇವೆರಡರಿಂದಾಗಿ ಕಮಾ ಲ್ ಪಾಶಾನನ್ನು ಟರ್ಕಿಯ ಎಲ್ಲಾ ಪಂಗಡದವರು ಮೆಚ್ಚಲಾರಂಭಿಸಿ ದರು. ಮುಸ್ತಾಫಾ ಕಮಾಲನು ಧೈರ್ಯದಿಂದ ಆಗಾಗ ತಲೆದೋರು ತ್ತಿದ್ದ ವಿಧವಿಧದ ಅವ್ಯವಸ್ಥೆಗಳನ್ನು ಕಷ್ಟವಿಲ್ಲದೆ ಸರಿಪಡಿಸುತ್ತಿದ್ದನು. ಅವನ ಪ್ರಾಣಹರಣ ಮಾಡಬೇ ಕೆಂದು ಅಂಧಶ್ರದ್ಧೆಯ ಸುಲ್ತಾನರ ಪಕ್ಷದವರು ಯತ್ನಿಸಿದರೂ ಅದು ಶಕ್ಯವಾಗಲಿಲ್ಲ.

## ರಿಪಬ್ಲಿಕ್ ಟರ್ಕಿ.

೧೯೨೩. ಅಕ್ಟೋಬರ ೨೯ ರಂದು ಟರ್ಕಿಯು ರಿಪಬ್ಲಿಕೆಂದು ಉದ್ಘೋಷಿಸಲ್ಪಟ್ಟಿತು. ಆಗಲೇ ಕಮಾಲ್ ಪಾಶನು ಟರ್ಕಿಯ ಅಧ್ಯಕ್ಷನಾದ. ಆ ಬಳಿಕ ಅವನಿಗೆ ಅಟಾಟರ್ಕ (ಟರ್ಕರ ಜನಕ) ಎಂಬ ಹೆಸರಾಯಿತು.

## ಪ್ರಚಂಡ ಸುಧಾರಣೆ.

ಕಮಾಲ್ ಪಾಶನ ಸುಧಾರಣೆ ಗಳು ಸಮಗ್ರಜಗತ್ತಿಗೆ ಆದರ್ಶ ಪ್ರಾಯವಾಗಿವೆ. ಅಷ್ಟೊಂದು ಅಲ್ಪ ಸಮಯದಲ್ಲಿ ಟರ್ಕಿಯ ಸಮಾಜ ಪದ್ಧತಿ, ಧರ್ಮ ಮೊದಲಾದುವುಗ ಳನ್ನು ನಖಶಿಖಾಂತ ವ್ಯತ್ಯಾಸ ಗೊಳಿಸಿ, ಯಶಸ್ವಿಯಾದ ಕಮಾಲ್ ಪಾಶನಿಗೆ ಜಗತ್ತಿನ ಮುಸಲ್ಮಾನರು ಋಣಿಗಳಾಗಬೇಕಾಗಿದೆ. ಶತಮಾನ ಶತಮಾನಗಳಿಂದ ಅಜ್ಞಾನದಿಂದ ಅಂಧರಾದ ಜನರನ್ನು ಸುಧಾರಿಸುವುದು ಸುಲಭ ಸಾಧ್ಯವಾದ ಕೆಲಸವಲ್ಲ.

## ಧಾರ್ಮಿಕ ಪ್ರಭಾವಕ್ಕೆ ಕೊಡಲಿ.


ಜನಜೀವನದಲ್ಲಿ ಧರ್ಮಾಧಿಕಾರಿ ಗಳಿಗಿರುವ ಪ್ರಭಾವವನ್ನು ಹೊಡೆ ದೋಡಿಸುವ ಕಾರ್ಯವನ್ನು ಕಮಾ ಲನು ಮೊದಲು ಪ್ರಾರಂಭಿಸಿದನು. ಪಾಶ್ಚಾತ್ಯ ಸುಧಾರಣೆಗಳನ್ನು ಜಾರಿ ಗೆತಾರದೆ ಗತ್ಯಂತರವಿಲ್ಲವೆಂದು ಕಮಾಲನಿಗೆ ಮನದಟ್ಟಾಯಿತು. ಸ್ತ್ರೀಯರನ್ನು ಪರ್ದೆಯೊಳಗಿನ ಪ್ರಾಣಿಗಳಂತಿರಿಸಿ ಕೇವಲ ಭೋಗ ಸಾಧನಗಳನ್ನಾಗಿ ಉಪಯೋಗಿ ಸುವ ಲಜ್ಜಾವಹ ಧೋರಣೆಯು ಸಮೂಲವಾಗಿ ಕಿತ್ತೊಗೆಯಲ್ಪ ಟ್ಟಿತು. ಇಂದು ಟರ್ಕಿಯಲ್ಲಿ ಸ್ತ್ರೀಯರು ಪುರುಷರಂತೆ ಸ್ವತಂತ್ರ ರಾಗಿದ್ದಾರೆ. ಯುದ್ಧರಂಗದಲ್ಲಿ ಹೋರಾಡುವುದರಿಂದ ಮೊದ ಲ್ಗೊಂಡು ಪ್ರತಿಯೊಂದು ಚಟು ವಟಿಕೆಗಳಲ್ಲಿಯೂ ಅವರು ಭಾಗ ವಹಿಸುತ್ತಾರೆ. ಪರ್ದೆಯೂ ಫೆಜ್ ಟೊಪ್ಪಿಗಳೂ ಮೂಲೆಪಾಲಾದುವು. ಮೆಟ್ರಿಕ್ ಲೆಖ್ಖ ಮತ್ತು ಲ್ಯಾಟಿನ್ ಅಕ್ಷರಗಳು ಜಾರಿಗೆ ತರಲ್ಪಟ್ಟವು. ಬಹುಪತ್ನಿತ್ವವು ನಿಷೇಧಿಸಲ್ಪಟ್ಟಿತು. ಇದಾದ ಬಳಿಕ ಕಮಾಲನು ಟರ್ಕಿಯ ಆರ್ಥಿಕ ಸುಧಾರಣೆಗೆ ಕೈಗೊಟ್ಟನು. ಕೃಷಿ ಕೈಗಾರಿಕೆ, ವಿದ್ಯಾಭ್ಯಾಸ ಮೊದಲಾದುವುಗ ಳಲ್ಲಿ ನವೀನ ವಿಧಾನಗಳು ಕಂಡು ಹಿಡಿಯಲ್ಪಟ್ಟವು.

## ಮೋಂಟ್ರ್ಯೂ ಪರಿಷತ್ತು.

೧೯೩೬ ರಲ್ಲಿ ಕಮಾಲನಿಗೆ ಕೊನೆಯ ವಿಜಯ ದೊರಕಿತು. ಮೋಂಟ್ರ್ಯೂ ಪರಿಷತ್ತಿನಲ್ಲಿ ಡಾರ್ಡನೆಲ್ಸನ್ನು ಅವನು ಕೈವಶ ಪಡಿಸಿಕೊಂಡನು. ರಷ್ಯವು ಇತರ ಶರಧಿಗಳನ್ನು ಪ್ರವೇಶಿಸಬೇಕಾದರೆ ಇದೊಂದೇ ದಾರಿಯಾಗಿದೆ.

## ಕಮಾಲನ ಖಾಸಗಿ ಜೀವನ

ಮುಸ್ತಾಫಾ ಕಮಾಲನ ಖಾಸಗಿ ಜೀವನವು ಸುಖಮಯವಾಗಿದ್ದಿಲ್ಲ




Advertise in Antaranga

ಯುದ್ಧ ಕಾಲದಲ್ಲಿ ಈತನು ಅತಿ ಯಾಗಿ ಸಂಭೋಗಸುಖವನ್ನು ಪಡೆಯುತ್ತಿದ್ದ. ತನ್ನ ತಾರುಣ್ಯದಲ್ಲಿ ಹೊಗೆಬತ್ತಿ ಸೇದುತ್ತಿದ್ದುದಕ್ಕೆ ಲೆಖ್ಖವಿದ್ದಿಲ್ಲ. ಕೊನೆಗೆ ಕಮಾಲನು ಟಿಕ್ರಿ ಹಾನೂಮ್ ಎಂಬೋರ್ವ ಸುಂದರಿಯನ್ನು ಮದುವೆಯಾದನು. ಬಹುವಿಧದ ಯತ್ನಗಳಿಂದ ಆಕೆಯು ಅವನೊಡನಿರಲು ಯತ್ನಿಸಿದರೂ ಅದರಿಂದ ಫಲವಾಗಲಿಲ್ಲ. ಲತೀಫೀ ಹಾನೂಮ್ ಎಂಬಾಕೆ ಸುಧಾರಿತ ಸ್ತ್ರೀ. ಆಕೆಯು ಅವನ ಪತ್ನಿಯಾದಳು. ಆದರೆ ಅವರ ವೈವಾಹಿಕ ಜೀವನವು ಸುಖಮಯವಾಗದಿದ್ದುದರಿಂದ ಅದು ಬಹುಕಾಲ ಬಾಳಲಿಲ್ಲ. ಆಕೆಯನ್ನು ಕಮಾಲನು ಸ್ವತಃ ವಿವಾಹವಿಚ್ಛೇದನ ಮಾಡಿಕೊಂಡಿದ್ದ.

**ಈಗಿನ ಅಧ್ಯಕ್ಷರು**

ಕಮಾಲ್ ಪಾಶರ ಧೋರಣೆಯನ್ನೇ ಅನುಸರಿಸುವ ಹಾಗೂ ೧೩ ವರುಷಗಳ ತನಕ ಪ್ರಧಾನಮಂತ್ರಿಯಾಗಿದ್ದ **ಜನರಲ್ ಇಸ್ಮೆಟ್ ಇನ್ಯೂನ್** ಎಂಬವರು ಸರ್ವಾನುಮತದಿಂದ ಟರ್ಕಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಟರ್ಕಿಯು ಎಂದಿನಂತೆ ಶಾಂತಮಯ ವಾತಾವರಣದಲ್ಲಿ ಮುನ್ನಡೆದು ಲೋಕಶಾಂತಿಗೆ ಬೆಂಬಲವನ್ನೀಯುವಂತಾಗಲಿ.

## ತುಸು ವಿನೋದ

ರಾಮರಾಯರು ಮುಂಬಯಿಯಿಂದ ಒಬ್ಬ ಹುಡುಗಿಯನ್ನು ಮದುವೆಯಾದರು. ಹುಡುಗಿಯ ಕುರಿತು ಅವರು ಮನೆಯಲ್ಲಿ ತಾಯಿಯೊಡನೆ ಚರ್ಚಿಸುತ್ತಿದ್ದರು.

"ನಿನ್ನ ಹೆಂಡ್ತಿಗೆ ಮನೆಕೆಲ್ಸ ಗೊತ್ತುಂಟೇನೋ ರಾಮೂ?"

"ಇಲ್ಲಮ್ಮಾ"

"ಮತ್ತೇನು ಗೊತ್ತುಂಟವ್ಳಿಗೆ?"

"ಸಂಗೀತ"

"ಒಂದು ಕೋಗಿಲೆ ಹಿಡಿದು ತಂದು ಮನೆಯಲ್ಲಿಡಬಾರದೇನೋ ರಾಮೂ?" ಎಂದು ಕೋಪದಲ್ಲ ಹೇಳಿದರವರ ತಾಯಿ.


ನಿರೀಕ್ಷಿಸಿರಿ!

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಹೊಸ ಸಾಹಸ!

ಮಕರ ಸಂಕ್ರಾಂತಿ **ನವಯುಗ** ವಿಶೇಷ ಸಂಚಿಕೆ.

ADVERTISE IN NAVAYUGA ANNUAL 1939.

**12ನೇ ಜನವರಿ 1939ಕ್ಕೆ** ಪ್ರಕಟವಾಗುವುದು.

- ವಿಚಾರ ಕ್ರಾಂತಿಯ ವಿವಿಧ ಲೇಖನಗಳು!
- ಮನೋರಂಜಕ ಕತೆ, ಕವನಗಳು!
- ನಗನಗಿಸುವ ಹಾಸ್ಯಚಿತ್ರ ವಿಚಿತ್ರಗಳು!
- ಪುಟಗಳು ನೂರೈವತ್ತಕ್ಕೂ ಮಿಗುವವು!
- ಚಿತ್ರಗಳು ಪುಟ ಪುಟದಲ್ಲಿ ಇರುವವು
- ಪ್ರಸಿದ್ಧರೆಲ್ಲರ ಬರಹಗಳು ಬರುವವು.

ಹೊಸವರ್ಷದ ಆದಿಯಲ್ಲಿ, ನವೀನ ಮಾದರಿಯಲ್ಲಿ, ಹೊಸತಾಗಿ ಹೊರಡುವ **ವಿಶೇಷತರದ ವಿಶೇಷಸಂಚಿಕೆ. ಬೆಲೆ ಬರೇ ನಾಲ್ಕಾಣೆ ಮಾತ್ರ!**

ಇಂದೇ ನಿಮ್ಮ ಆರ್ಡರುಗಳನ್ನು ದಾಖಲ್ಮಾಡಿರಿ. **0—4—0 ಸ್ಟಾಂಪನ್ನು ಮುಂಗಡವಾಗಿ ದಶಂಬರಾಂತ್ಯದೊಳಗೆ ಕಳುಹಿಸುವವರಿಗೆ ಅಂಚೆವೆಚ್ಚವಿಲ್ಲ.**

ಜಾಹೀರಾತುದಾರರಿಗೆ ಸುವರ್ಣ ಸಂದರ್ಭ!

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಜಾಹಿರಾತಿನ ದರಗಳಿಗೂ ಏಜನ್ಸಿಶರ್ತಗಳಿಗೂ ಕೂಡಲೇ ಬರೆಯಿರಿ.

**ಮೆನೇಜರ್, ನವಯುಗ, ಉಡುಪಿ, ದಕ್ಷಿಣ ಭಾರತ.**

## श्री प्रसाद ಶ್ರೀ ಪ್ರಸಾದ SRI PRASADA

ಸಮಗ್ರ ಭಾರತದಲ್ಲಿ ಅನೇಕ ವರ್ಷಗಳಿಂದ ಸಂಚರಿಸುತ್ತಲಿರುವ
ಮಂತ್ರವಿದ್ಯೆಯಲ್ಲಿ ಪಾರಂಗತರಾದ ತನ್ನ ಮಂತ್ರಶಕ್ತಿಯಿಂದ
ಅನೇಕ ಜನರಿಗೆ ಪ್ರಯೋಜನವನ್ನುಂಟುಮಾಡಿದ
ಯೋಗಿ ಮಹಾಶಯರೊಬ್ಬರ

# ಮಹಾಮಂತ್ರಶಕ್ತಿಯ ಪ್ರಸಾದ

ಈ ಪ್ರಸಾದಗಳ ಸೇವನೆಯಿಂದಲೂ, ಧಾರಣೆಯಿಂದಲೂ, ಪ್ರಯೋಗದಿಂದಲೂ ಅನೇಕರು ಅನೇಕ ವಿಧಗಳಿಂದ ಪ್ರಯೋಜನವನ್ನು ಹೊಂದಿರುವರು.

*Personal interviews are prohibited*

## ಈ ಪ್ರಸಾದದಿಂದ

ಮುಖತಃ ಭೇಟಿಯನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಪರೀಕ್ಷೆಯಲ್ಲಿ ಪಾಸಾಗುವದು, ಶತ್ರುಗಳನ್ನು ಸ್ವಾಧೀನಪಡಿಸುವದು, ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವದು, ಮುಂತಾದ ಯಾವತ್ತು ಅಭೀಷ್ಟಗಳನ್ನು ಸಾಧಿಸಬಹುದು.

**ಒಂದು ತಿಂಗಳು ಉಪಯೋಗಿಸುವ ಪ್ರಸಾದಕ್ಕೆ ರೂಪಾಯಿ ಒಂದು.**

**ವಿಶೇಷತರದ ಪ್ರಸಾದಕ್ಕೆ ರೂಪಾಯಿ ಐದು.**

ಪ್ರಸಾದ ಬೇಕಾದವರು ತಮ್ಮ ನಕ್ಷತ್ರ, ಯಾ ಜನನ ಸಮಯವನ್ನೂ ತಾರೀಕನ್ನೂ ತಿಳಿಸಬೇಕು. ಅದು ಗೊತ್ತಿಲ್ಲದಿದ್ದರೆ ಕಾಗದಬರೆಯುವ ಸ್ಥಳ, ಸಮಯಗಳನ್ನೂ ನಿರ್ದೇಶಿಸಬೇಕು.

**ವಿ. ಪಿ. ಕ್ರಮವಿಲ್ಲ**–ಹಣವನ್ನು ಮುಂಗಡವಾಗಿಯೇ ಕಳುಹಿಸಬೇಕು. ಹಣವನ್ನು ಕಳುಹಿಸದೆ ಬರುವ ಕಾಗದಗಳಿಗೆ ನಿಗಾ ಕೊಡಲಾರದು.

**ಪತ್ರವ್ಯವಹಾರ:—ಇಂಗ್ಲಿಷ್, ಸಂಸ್ಕೃತ, ಯಾ ಕನ್ನಡ ಭಾಷೆಯಲ್ಲಿ ಮಾಡಬಹುದು.**

**ಎಲ್ಲ ಪತ್ರಗಳು ಗುಪ್ತವಾಗಿರಿಸಲಾಗುತ್ತವೆ.**

C. C. No. 4.

**C/o. ANTARANGA, UDIPI.**



# ತ್ರಿಮೂರ್ತಿಗಳಿಗೆ ಏಳೇಳು ವರ್ಷ ಕಠಿನ ಶಿಕ್ಷೆ!

**ಡಕಾಯಿತಿನ ತಕ್ಸೀರಿಗೊಳಗಾಗಿ ಏಳು ವರ್ಷ ಕಠಿನ ಶಿಕ್ಷೆ ಪಡೆದು ಮದ್ರಾಸ್ ಪ್ರಾಂತ್ಯದ ಬೇರ ಬೇರೆ ಜೈಲುಗಳಲ್ಲಿದ್ದು ಬಂದವರೊಬ್ಬರ ಆತ್ಮಕಥೆಯಿದು.**

● ಲೇಖಾಂಕ ೪.

## ಪೋಲಿಸರ ಫಜೀತಿ!

ಕಳೆದ ಸಂಚಿಕೆಯಲ್ಲಿ, ಅಡಿಗೆ ಕೋಣೆ। ಮಥನದ ವರೆಗಿನ ಚರಿತ್ರೆಯನ್ನು ತಿಳಿಸಿಯಾಯಿತು. ರಾತ್ರಿ ಹೊತ್ತಿನಲ್ಲಿ ಮನೆ ನುಗ್ಗಿ, ತಲೆಯೊಡೆದು, ಪೆಟ್ಟಿಗೆ ದೋಚಿಕೊಂಡು ಹೋದ ದೊಡ್ಡ ದರೋಡೆಯದು. ಕಡಿಮೆಯೆಂದರೆ ಹತ್ತು ಮಂದಿಯಾದರೂ ಸೇರದೆ ಆಗುವ ಕೆಲಸವಲ್ಲ. ಈ ಹತ್ತು ಮಂದಿಯ ಪೈಕಿ ನಮ್ಮನ್ನು ಮೂವರನ್ನು ಮಾತ್ರ ಸಂಪಾದಿಸಲು ಸಾಧ್ಯವಾಯಿತು ಪೋಲಿಸರಿಗೆ. ಮಾಸ್ತರರ ಹಾಡಿಯಿಂದ ಕಡಿದ ಕೆಲವು ದೊಣ್ಣೆಗಳು, ಅವರ ಮನೆಯ ಒಂದು ಕೊಡಲಿ, ಇಷ್ಟನ್ನು ಕಟ್ಟಿಕೊಂಡು ಹೋಗಿದ್ದರು ಪೋಲೀಸರು. ಅದೇ ಆ ದರೋಡೆಯ ರಿಕಾರ್ಡಿನ ಕಟ್ಟು. ಆದರೆ ದೊಣ್ಣೆಗಳನ್ನು ಸಂಪಾದಿಸಿದಷ್ಟು ಸುಲಭವಾಗಿ ದರೋಡೆಗೆ ಬೇಕಾಗುವ ಮನುಷ್ಯರನ್ನೂ ಸಂಪಾದಿಸುವದು ಸಾಧ್ಯವೆ? ಈ ಭಾಗದಲ್ಲಿ ತೀರಾ ಫಜೀತಿಗೊಳಗಾದರು ಪೋಲೀಸರು. ಒಂದು ದರೋಡೆಯೋ, ಖೂನಿಯೋ, ಕಳವೋ, ನಡೆದಿದೆ ಎಂದು ರಿಕಾರ್ಡಾದ ಮೇಲೆ ಅದಕ್ಕಾಗಿ ಯಾರಿಗಾದರೂ ಶಿಕ್ಷೆಯಾಗಲೇ ಬೇಕು. ತಪ್ಪಿಗೊಂದು ಪ್ರತಿಫಲವನ್ನು ಕೊಡದೆ ಸರಕಾರವೆಂದಿಗೂ ಬಿಡುವದಿಲ್ಲ. ಈ ಡಕಾಯತಿಯ ಪ್ರಾಯಶ್ಚಿತ್ತರೂಪದ ಶಿಕ್ಷೆಯನುಭವಿಸುವವರು ಅಗತ್ಯವಾಗಿ ಬೇಕಾದರು. ಅವರನ್ನು ಸಂಪಾದಿಸಿಕೊಡುವದು ಪೋಲೀಸರ ಕೆಲಸ. ಅದು ಕೈಲಾಗದೆ ಹೋದರೆ ಪೋಲಿಸರು ತಮ್ಮ ಕೆಲಸವನ್ನು ತಾವು ಮಾಡಲಿಲ್ಲವೆಂದಲ್ಲವೇ ಅದರ ಅರ್ಥ? ಆದ್ದರಿಂದ ಪೋಲಿಸರು ಮಿತಿಮೀರಿ ಚುರುಕುತನವನ್ನು ತೋರಿಸಹತ್ತಿದರು. ಅವುಗಳಲ್ಲಿ ಮಾದರಿಯಾಗಿ ಕೆಲವು ಸಂಗತಿಗಳನ್ನು ವಿವರಿಸಿ ಹೇಳಿದೆ. ಇನ್ನು ಎಷ್ಟೋ ಹೇಳಲಿಕ್ಕಿವೆ. ತುಂಬಿಗಳನ್ನು ತಂದು ಹೆಂಗಸರ ಸೆರಗಿನೊಳಗೆ ತುಂಬಿಸಿದ್ದುಂಟು. ಆ ತುಂಬಿಯು ಹೆಂಗಸಿನೆದೆಯೊಳಗೆ 'ಘುಂಯಿ' ಎಂದೂ ಹೆಂಗಸು 'ಕುಂಯಿ' ಎಂದೂ ಪೋಲಿಸರ ಗುಣಗಾನ ಮಾಡಿದ್ದುಂಟು! ಪೋಲಿಸರು ತಮ್ಮ ಕಣ್ಣಿಗೆ ಅಂಜನಹಾಕಿಕೊಳ್ಳುವ ಬದಲು, ಅವನನ್ನೋ ಇವನನ್ನೋ ಹಿಡಿದು ಕಣ್ಣಿಗೆ ಮೆಣಸಿನ ಹುಡಿ ಹಾಕಿ ಬಾಯಿ ಬಿಡಿಸಿದ್ದುಂಟು. ಎಷ್ಟೋ ಜನರ ಜುಟ್ಟಿನ ತುದಿ ಹಿಡಿದು ಇಡೀ ದೇಹವನ್ನು ಮೇಲಕ್ಕೆತ್ತುವ ಸರ್ಕಸ್ ಮಾಡಿ ತೋರಿಸಿದ್ದುಂಟು. ಆ ಕತೆಗಳನ್ನೆಲ್ಲಾ ವರ್ಣಿಸಿ ಫಲವಿಲ್ಲ. ಆದರೆ ಅವುಗಳಲ್ಲಿ ಯಾವುದೂ ಫಲಿಸದೆ ಕೊನೆಗೆ ಪೋಲಿಸರು, ಆ ದರೋಡೆಗೆ ತ್ರಿಮೂರ್ತಿಗಳ ಮಹಾತ್ಮೆಯೇ ಕಾರಣವೆಂಬ ನಿರ್ಧಾರಕ್ಕೆ ಬಂದು ಸೋಜ, ಅಹಮ್ಮದ್, ಮತ್ತು ನನ್ನನ್ನು ಗಟ್ಟಿ ಹಿಡಿದರು.

ಈ ಸಂಗತಿಗಳೆಲ್ಲಾ ನಡೆಯುವಾಗ ನಾನು ಕೋಣೆಯೊಳಗೇ ಇದ್ದೆ. ನಮ್ಮನ್ನು ಮೂವರನ್ನು ಮಾಸ್ತರರ ಮನೆಯ ಕೋಣೆಯೊಳಗೆ ಸೇರಿಸಿದ ನಂತರ, ಊರ ಮೇಲಿನ ಕತೆಗಳನ್ನೆಲ್ಲಾ ನಿಮಗೆ ತಿಳಿಸುವದಕ್ಕಾಗಿ ನಾನು ಊರಿಗಿಳಿದುದು ನೆನಪುಂಟಷ್ಟೆ. ಯಾರೇ ಇರಲಿ—ಪೋಲಿಸರಿಗೆ ಬೇಕಾಗು

ವಷ್ಟು ಮಂದಿ ಪೇರಿಯಿ ದೊರೆತು ನಾನು ಹೊರಗೆ ಹೋಗು ವಂತಾಗಲಿ—ಎಂದು ಮನಃಪೂರ್ವಕ ವಾಗಿ ನಾನು ಪೋಲಿಸರ ಊರ ಧಾಳಿಯ ವಿಜಯವನ್ನು ಕೋರುತ್ತಿದ್ದೆ. ಆದರೆ ಅವರು ತಿರುಗಿ ನಮ್ಮ ಮೇಲೆಯೇ ಬಿದ್ದರು. ಆದ್ದರಿಂದ ಈಗ ನಾನು ಹೇಳಲಿರುವದು ನನ್ನ ಚರಿತ್ರೆಯನ್ನೇ.

**ನಮ್ಮ ಬಂಗಲೆವಾಸ**

ಕೆಲವು ದಿನಗಳ ವರೆಗೆ ನಾವು ಮಾಸ್ತರರ ಮನೆಯ ಕೋಣೆಯಲ್ಲಿದ್ದೆವು. ಆ ಮೇಲೆ ನಮ್ಮನ್ನು ಪೋಲೀಸು ಬಂದೋಬಸ್ತಿನೊಡನೆ ಚಂದ್ರಪುರಕ್ಕೆ ಸಾಗಿಸಲಾಯಿತು. ಅಲ್ಲಿ ನಮಗೊಂದು ಬಂಗಲೆ ತಯಾರಿತ್ತು. ಅದು ಮೊದಲೇ ಬರಿದಾಗಿತ್ತೊ, ಅಥವಾ ನಮಗಾಗಿ ಖಾಲಿಯಾಯಿತೋ ನನಗರಿಯದು. ಅಂತೂ ನಾವಲ್ಲಿ ಕೆಲವು ಸಮಯವನ್ನು ಆಫೀಸರರ ಠೀವಿಯಿಂದ ಕಳೆದೆವು. ಚೊಕ್ಕ ಬಂಗಲೆ, ಹೋಗುವಾಗ ಬರುವಾಗ ಹಿಂದಿನಿಂದ ಪೋಲಿಸರು, ಸಮಯ ತಪ್ಪದೆ ಸಿಗುವ ಊಟ, ಇವು ಆಫೀಸರರಿಗೆ ಮತ್ತು ನಮ್ಮಂಥವರಿಗೆ ಮಾತ್ರ ದೊರಕುವ ಸೌಭಾಗ್ಯಗಳು!

ಒಮ್ಮೊಮ್ಮೆ ಪೋಲಿಸರು ನನ್ನನ್ನೊಬ್ಬನನ್ನೇ ಹೊರಗೆ ಕರೆದುಕೊಂಡು ಸ್ವಲ್ಪದೂರ ನಡೆಯಿಸುವದಿತ್ತು. ಅಲ್ಲಿ ನನ್ನನ್ನು ಘಾವೀನೆಂಟನಂತೆ ನೋಡುತ್ತಾ ಮಾಫಿಸಾಕ್ಷಿ ಹೇಳಿದರೆ ಆಗುವ ಬಿಡುಗಡೆ, ದೊರಕುವ ಬಹುಮಾನಗಳ ರೀತಿಯನ್ನು ವರ್ಣಿಸುವದಿತ್ತು. ಒಂದೊಂದು ರಾತ್ರಿ ನಮ್ಮಲ್ಲೊಬ್ಬನನ್ನು ಎಂಗಡಿಸಿಟ್ಟು ಉಳಿದವರೊಟ್ಟಿಗೆ ಮಲಗಿ ಪೋಲಿಸನು ಗಮ್ಮತಿನಿಂದ ಗೊರಿಕೆ ಹೊಡೆಯುತ್ತಿದ್ದ. ಆ ಗೊರಿಕೆಯು ನಮ್ಮ ಕರ್ಣರಂಧ್ರಕ್ಕೆ ಮಾತ್ರ ಬಾಧೆ ಕೊಡುತ್ತಿತ್ತಲ್ಲದೆ ಪೋಲಿಸನ ಕಿವಿಯು 'ಇವರ ಬಾಯಿಂದೇನು ಪಿಸು ಮಾತು ಬರುತ್ತದೆ' ಎಂಬುದನ್ನು ಕೇಳಲು ಚುರುಕಾಗಿಯೇ ಇತ್ತು. ನಾವು ಪೋಲಿಸನು ಕೇಳುವಂತಹದಲ್ಲವೆಂಬಷ್ಟು ಮೆಲ್ಲಗೆ ಮಾತಾಡುತ್ತಿದ್ದೆವು 'ನನಗೆ ಆ ರಾತ್ರಿ ಮನೆಯಲ್ಲಿ ಮಲಗಿದವನಿಗೆ ಭಾರೀ ಕನಸು ಕೂಡ ಬಿದ್ದಿತ್ತು ನೋಡು! ನಮ್ಮ ಮನೆಯ ಅರೆಯುವ ಕಲ್ಲು ನನ್ನ ಹೆಂಡತಿಯ ತಲೆಯ ಮೇಲೆ ಬಿದ್ದಂತೆ ಕನಸು ಕಂಡಿದ್ದೆ. ಹಾಗೆಯೇ ಆಯಿತಲ್ಲ! ಯಾವ ಸಂಗತಿಯೂ ಗೊತ್ತಿಲ್ಲದೆ ನಮಗೆ ಎಂಥಾ ವಿಪತ್ತು ಬಂತು! ದೇವರೇ!' ಹೀಗೆಲ್ಲಾ ಒಬ್ಬರಿಗೊಬ್ಬರು ಹೇಳಿಕೊಂಡು ಅಳುವಂತೆ ಮಾಡುತ್ತಿದ್ದೆವು. ಇಂತಹ ಪರೀಕ್ಷೆಗಳು ಆ ಬಂಗಲೆಯಲ್ಲಿದ್ದ ಎರಡು ತಿಂಗಳುಗಳಲ್ಲಿ ಹಲವು ನಡೆದವು. ಕೊನೆಗೆ ನಮ್ಮನ್ನು ಅಲ್ಲಿಂದ ನಮ್ಮ ನೆರೆಯೂರಾದ ಮಾರ್ನಳ್ಳಿಗೆ ತಂದು ಅಲ್ಲಿ ಒಂದು ಹಾಳುಬಿದ್ದ ಮನೆಯೊಳಗಿಟ್ಟರು. ಇಲ್ಲಿಯೂ ಸುಮಾರು ಒಂದು ತಿಂಗಳ ವರೆಗೆ ನಾವಿದ್ದೆವು. ಊಟವನ್ನು ನಾವು ನಮ್ಮ ಮನೆಯಿಂದಲೇ ತರಿಸಿ ಉಣ್ಣಬೇಕಾಗಿತ್ತು. ಇಲ್ಲಿ ಪುನಃ ನಾವು ಆಗಾಗ ಹೊಡೆತಗಳನ್ನು ತಿನ್ನಬೇಕಾಯಿತು. ನಡನಡುವೆ ಕೆಲವರನ್ನು ತಂದು ಆ ಮನೆಯೊಳಗೆ ಸೇರಿಸಿ ಒಂದೆರಡು ದಿನವಿಟ್ಟುಕೊಂಡು, ಹೊಡೆದು ಬಡೆದು ವಿಚಾರಿಸಿ, ಬಿಟ್ಟುಬಿಡುತ್ತಿದ್ದರು!

**ಒಂದು ರಾತ್ರಿ ಹೇಳದೆ ಕೇಳದೆ ಪರಾರಿ!**

ನಮ್ಮ ಸಂಕಟವು ಮಿತಿಮೀರಿತು. ನಾವು ತೀರಾ ನಿಸ್ಸಹಾಯಕರಾಗಿದ್ದೆವು. ನಮ್ಮ ಪರವಾಗಿ ವಾದಿಸುವವರಿಲ್ಲ. ಯಾವ ಸಹಾಯವನ್ನೂ ಮಾಡುವವರಿಲ್ಲ. ಪೋಲಿಸರು ಈ ಕೇಸನ್ನು ಯಾವ ಕೊನೆಗೆ ಕೊಂಡು ಹೋಗುವರೋ, ಅದೇ ನಮ್ಮ ಪಾಲಿನ ಭಾಗ್ಯವೆಂದು ನಾವೆಣಿಸಿದ್ದೆವು. ಆದರೆ ಕೊನೆಗೊಳ್ಳುವ ಲಕ್ಷಣವೇ ಕಾಣುವದಿಲ್ಲ. ಅಂಡಮಾನಿಗೆ ಕಳುಹಿಸುವರೋ ಕಳುಹಿಸಲಿ, ಫಾಶಿಗೆ ಕೊಡುವದಾದರೆ ಕೊಡಲಿ. ಆದರೆ ಈ ರೀತಿ ಗುದ್ದಿಗುದ್ದಿ ಹಣ್ಣುಮಾಡಿ, ಕೊಳೆಯಿಸಿ ಕೊಲ್ಲುತ್ತಾರೇಕೆ? ನಾವೆಷ್ಟೆಂದು ತಿನ್ನಲಿ! ಆ ಹಾಳುಮನೆಯಲ್ಲಿ, ಪೋಲೀಸರ ಕೆಂಡಗಣ್ಣಿನಲ್ಲಿ ಬಿದ್ದು ಎಷ್ಟೆಂದು ಬೇಯಲಿ!

ಒಂದು ಮಧ್ಯರಾತ್ರಿ. ಅಹಮ್ಮದನೇಗಿಲೆಳೆದು ಮೈನೋವುಬಂದ ದೊಡ್ಡ ಕೋಣನಂತೆ ಗಮ್ಮತಿನ ನಿದ್ದೆಯಲ್ಲಿದ್ದ. ಮುಂಚಿನ ಇಡೀ ರಾತ್ರಿಯನ್ನು, ಹಲವರನ್ನು ತಿಧ್ದುವದರಲ್ಲೋ ಗುದ್ದುವದರಲ್ಲೋ ಕಳೆದಿದ್ದ ಪೋಲೀಸನ ಕುಂಭಕರ್ಣ ಸುಯಿಲು ಕೇಳಿಬರುತ್ತಿತ್ತು. ಮೊದಲೇ ನಿಶ್ಚಯ ಮಾಡಿಕೊಂಡಂತೆ ನಾನು ಮತ್ತು ಸೋಜ ನಡುರಾತ್ರಿ ಆ ಮನೆಯಿಂದ ಹೊರಬಿದ್ದೆವು; ಓಡಿದೆವು. ಬೆಳಗಾಗುವದರೊಳಗೆ ಮನೆಯಲ್ಲಿದ್ದ ಪುಡಿಕಾಸು, ನಗನಾಣ್ಯಗಳನ್ನು ಹಿಡಿದುಕೊಂಡು ಸೋಜನೊಂದಿಗೆ

ಊರಿಗೆ ನಾನೊಂದೂರಿಗೆ ಮುಟ್ಟಿಯೂ ಆಯಿತು. ನಾನು ಗಟ್ಟಹತ್ತಿದೆ. ಸೋಜ ಬೊಂಬಾಯಿ ಸೇರಿದ. ಆ ದಿನ ಬೆಳಿಗ್ಗೆ, ಮತ್ತೊಂದು ಹೊಸಯುಕ್ತಿಯನ್ನು ಜಾರಿಮಾಡುವೆನೆಂದುಕೊಂಡು ಪೋಲಿಸು ಬಾಗಿಲುತೆರೆದು ಕೋಣೆಯ ನಾಲ್ಕು ಗೋಡೆಗಳನ್ನು ಮಾತ್ರ ಕಂಡು ಅವನಿಗೆ ಹೇಗಾಗಬಹುದೆಂಬುದನ್ನು ನೀವೇ ಊಹಿಸಿಕೊಳ್ಳಿ! ನಾನು ಗಟ್ಟದಲ್ಲಿ ಒಂದೂರಿಂದ ಇನ್ನೊಂದೂರಿಗೋಡುತ್ತಾ, ಕಾಡು ಗುಡ್ಡೆಗಳಲ್ಲಿ ಹೆಚ್ಚಿನ ಸಮಯವನ್ನು ಕಳೆದೆ. ಕೊನೆಗೊಂದೂರಿನಲ್ಲಿ ಗುರುತದವರೊಬ್ಬರಲ್ಲಿ ನಿಂತು ಅವರಿಂದ ಊರಿಗೆ ಕಾಗದ ಬರೆಯಿಸಿ ಉತ್ತರ ಪಡೆದೆ. ಎಲ್ಲಾ ಕಡೆಗಳಲ್ಲಿಯೂ ಪೋಲಿಸರು ಹುಡುಕುತ್ತಿರುವರೆಂದೂ, ನನ್ನ ಮನೆಹೆಂಗಸರಿಗೆ ಕೂಡಾ ಪೆಟ್ಟು ಬಿತ್ತೆಂದೂ, ಮನೆಸಾಮಾನುಗಳನ್ನು ದೋಚಿಕೊಂಡು ಹೋಗಿರುವರೆಂದೂ ತಿಳಿಯಿತು. ಇನ್ನೇನು? ಹೇಗೂ ಬಿಡುವಂತಿಲ್ಲ. ಆದರೆ ತಿರುಗಿ ಸಿಕ್ಕಿದೊಡನೆ ಎಲುಬು ಮುರಿಯವನ್ನೂ ಹಿಡಿದು ಒಡೆಯದೆ ಪೋಲಿಸರು ಬಿಟ್ಟಾರೆ? ಪೋಲಿಸರಿಗೆ ಪ್ರಥಮತಃ ಸಿಗಬಾರದು. ಮೆಜಿಸ್ಟ್ರೇಟರ ಸಮಕ್ಷಮದಲ್ಲೇ ಹಾಜರಾಗಿ ಹೇಳಿಕೊಳ್ಳುವದೆಂದು ನಿರ್ಧರಿಸಿ, ಓಡಿಹೋದ ವಿದ್ಯೆಯ ಬಲದಿಂದಲೇ ತಿರುಗಿ ಊರು ಸೇರಿದೆ. ಮೆಜಿಸ್ಟ್ರೇಟರ ಕೋರ್ಟಿನ ಪಕ್ಕದಲ್ಲಿ ಜನ ಸಂಚಾರವಿರದ ಒಂದು ಓಣಿಯಿತ್ತು. ರಾತ್ರಿಹೋಗಿ ಆ ಓಣಿಸೇರಿ ಕುಳಿತು ಬಿಟ್ಟೆ. ಮರುದಿನ 'ಮೆಜಿಸ್ಟ್ರೇಟರು ಕೋರ್ಟಿಗೆ ಬಂದರು'-ಎಂದು ಗೊತ್ತಾದೊಡನೆ ಓಡಿಹೋಗಿ ಮೆಜಿಸ್ಟ್ರೇಟರ ಮುಂದೆ ನಿಂತೆ. ಎಲ್ಲವನ್ನೂ ಅಡ್ಡಬಿದ್ದುಬಿದ್ದು ಹೇಳಿಕೊಂಡೆ. ಕೊನೆಗೆ ಗುದ್ದೊಂದನ್ನು ಕೊಡದಂತೆ ಮಾಡಬೇಕೆಂದು ಪ್ರಾರ್ಥಿಸಿಕೊಂಡೆ. ಮೆಜಿಸ್ಟ್ರೇಟರು ನನ್ನನ್ನು ಪೋಲೀಸರ ವಶಕ್ಕೊಪ್ಪಿಸಿ ಹೊಡೆಯಕೂಡ

> **ಮಾಸ್ತರರ ಮನೆನುಗ್ಗಿದವರು ಪುಣ್ಯಾತ್ಮರು! 'ಬಂದುದನ್ನೆಲ್ಲಾ ಮತ್ತೆ ಅನುಭವಿಸಬಹುದು' ಎಂಬ ಧೈರ್ಯದಿಂದಲೇ ಅವರು ಮನೆನುಗ್ಗಿರಬೇಕು. ಆದರೆ ಅವರ ಪಾಲುಗಾರರಾಗಿ ನಾವು ದೊರೆತೆವು. ಸೊತ್ತಿನ ಪಾಲು ಅವರಿಗೆ - ಶಿಕ್ಷೆಯ ಪಾಲು ನಮಗೆ!**

ದೆಂದು ಆಜ್ಞಾಪಿಸಿದರು. ಕೆಲವು ದಿನಗಳಲ್ಲಿ ಸೋಜನನ್ನೂ ಪೋಲಿಸರು ಹಿಡಿದು ತಂದರು. ಸ್ವಲ್ಪ ಕಾಲ ಒಬ್ಬೊಬ್ಬರೊಂದೊಂದೆಡೆ ಸೇರಿದ್ದ ನಾವು ತ್ರಿಮೂರ್ತಿಗಳು, ಪೋಲಿಸ್ ಸ್ಟೇಶನಿನ ಒಂದು ಕೋಣೆಯಲ್ಲಿ ಪುನಃ ಒಟ್ಟಾದೆವು.

### ವಿಚಾರಣೆ ಮತ್ತು ಶಿಕ್ಷೆ.

ನನ್ನ ಚರಿತ್ರೆಯನ್ನು ಘಂಟೆಗೆ ೬೦ ಮೈಲು ಸ್ಪೀಡಿನಲ್ಲಿ ಓಡಿಸಿಬಿಟ್ಟೆ. ಹಾಗೆಮಾಡದೆ ನನಗೆಂತಹ ಭೂಷಣವೆಂದು ನಿಮ್ಮೊಡನೆ ಅದರ ಉದ್ದುದ್ದ ವರ್ಣನೆ ಮಾಡಲಿ? ನಿಸ್ಸಹಾಯಕರಾರೆಂದು ಹುಡುಕಿಕೊಂಡು ಬಂದು ಅವರ ನ್ಯಾಯಾಹುತಿಗೊಳ್ಳುತ್ತಿರುವ ಎಷ್ಟೋ ಘಟನೆಗಳಲ್ಲಿ ಇದೂ ಒಂದು-ಎಂದಿಷ್ಟೇ ನೀವು ತಿಳಿದುಕೊಂಡರಾಯಿತು. ಇದರ ವಿಚಾರಣೆಯಾಗಿದೆ, ತೀರ್ಪಾಗಿದೆ, ಅನುಭವಿಸಿಯೂ ಆಗಿದೆ. ಈಗ ಉಳಿದಿರುವದೆಂದರೆ ನೀವು ಎಲ್ಲವನ್ನೂ ವಿಚಾರಿಸಿ ತೀರ್ಮಾನಕೊಡುವ ಭಾಗಮಾತ್ರ. ಅದನ್ನಷ್ಟೇ ನೀವು ಮಾಡಿದರೆ ಸಾಕು.

ನಮ್ಮ ವಿಚಾರಣೆಯು ಚಂದ್ರಪುರ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯಿತು. ಆರೋಪಿಗಳಾಗಿ ಕೊನೆಗೆ ಉಳಿದವರು ನಾವು ಮೂವರೇ,- ಅಹಮ್ಮದ್, ಸೋಜ, ನಾನು. ಕೋಚಣ್ಣ ಸೆಟ್ಟಿ, ಮಿಂಡೋಸ, ಅಬೂಬಕರ್, ಅನಿರುದ ಭಟ್ಟ, ಪೌಲಿನ ಬಾಯಿ, ಇವರೆಲ್ಲಾ ಪೋಲಿಸು ಕಡೆಯಿಂದ ಸಾಕ್ಷಿಹೇಳಿದರು. ನಾವು ದರೋಡೆಗಾಗಿ ಎಷ್ಟೋ ದಿನಗಳಿಂದ ನಡೆಸುತ್ತಿದ್ದ ಒಳಸಂಚುಗಳನ್ನು ಕೋಚಣ್ಣ ಸೆಟ್ಟಿ ತನ್ನ ಸಾಕ್ಷ್ಯದಲ್ಲಿ ಬಯಲುಪಡಿಸಿದ! ದರೋಡೆಯ ಸಂಜೆ ಮಾಸ್ತರರ ಮನೆಬದಿಯ ಓಣಿಯಲ್ಲಿ ನಾನು ಅಡಗಿಕೊಂಡಿದ್ದುದನ್ನು ಅನಿರುದ್ಧ ಭಟ್ಟ ಕಂಡಿದ್ದ! ಮಿಂಡೋಸನ ಮನೆಯಿಂದ ಕಟ್ಟಿಗೆ ಕಡಿಯಲಿಕ್ಕೆಂದು ನಾನು ಕೊಡಲಿ ಬೇಡಿದ್ದುಂಟಂತೆ! ಒಲೆಬೆಲ್ಲ ಮಾರಿ ರಾತ್ರಿಯಲ್ಲಿ ಹಿಂದಿರುಗುತ್ತಿದ್ದ ಅಬುಬಕರನಿಗೆ ಮಾಸ್ತರರ ಮನೆಯ ಗಲಾಟೆಯೂ, ಆ ಗಲಾಟೆಯಲ್ಲಿ

ನನ್ನ ಸ್ವರವೂ ಒಟ್ಟೊಟ್ಟಿಗೆ ಕೇಳಿದ್ದುಂಟು! ಸೋಜ, ರಾತ್ರಿ ನಮ್ಮ ಮನೆಗೆ ಬರುವಾಗ ನಾನು ಮನೆಯಲ್ಲಿದ್ದಿಲ್ಲವಂತೆ! ಪೌಲಿನ ಸೊಪ್ಪು ತರಲು ಬಂದವಳು ನಾನು ಹಾಡಿಯಲ್ಲಿ ದೊಣ್ಣೆ ಕಡಿಯುತ್ತಿದ್ದುದನ್ನು ಕಣ್ಣಾರೆ ಕಂಡಿದ್ದಳು! ಉಳಿದಿಬ್ಬರ ಮೇಲಿನ ಆರೋಪವೂ ಹೀಗೆಯೇ ರುಜುವಾಯಿತು. ನಾವು ಮೂವರು ಎಲ್ಲವನ್ನೂ ಅಲ್ಲಗಳೆದೆವು. ಆದರೇನು ಪ್ರಯೋಜನ? ಮೆಜಿಸ್ಟ್ರೇಟರು ನಮ್ಮ ಮೇಲೆ ಚಾರ್ಜುಮಾಡಿ ಸೆಶ್ಶನ್ ಕೋರ್ಟಿಗೆ ಕಮಿಟ್ ಮಾಡಿದರು. ಅಲ್ಲಿಯೂ ಹೀಗೆಯೇ ವಿಚಾರಣೆಯಾಯಿತು. ಕೆಳಗಿನ ಕೋರ್ಟಿನಂತೆಯೇ ಸಬ್ ಇನ್ಸ್ಪೆಕ್ಟರನ, ಪೋಲಿಸರ ಹೇಳಿಕೆಗನುಗುಣವಾಗಿ ಎಲ್ಲರೂ ಸಾಕ್ಷಿ ಹೇಳಿದರು. ನಾವು ಇಲ್ಲಿ ಹಾಡಿದ ರಾಗವನ್ನು ಅಲ್ಲಿಯೂ ಹಾಡಿದೆವು. ನಮ್ಮ ಕಡೆಯಿಂದ ಸಾಧನೆ ನಡಿಸಲು ಹೊರಗಿನವರಾರೂ ಇರಲಿಲ್ಲ. ಸಹಾನುಭೂತಿ ತೋರಿಸುವವರಿದ್ದರೂ ಸಹಾಯಕರಾರೂ ಇಲ್ಲ. ನಮಗಾ ಸಮಯದಲ್ಲಿ ಸಹಾಯ ಮಾಡುವದು ಎಲ್ಲರಿಂದಲೂ ಆಗುವಂತಹ ಕೆಲಸವೂ ಅಲ್ಲ. ಹೀಗಾಗಿ ನಾವು ಅಪರಾಧಿಗಳೆಂದು ತೀರ್ಮಾನಿಸಲ್ಪಟ್ಟೆವು.

ಆ ದಿನವು-ಆದರಲ್ಲೂ ಆ ಘಳಿಗೆಯು ಈಗಲೂ ನನ್ನ ನೆನಪಿನಲ್ಲಿದೆ. ನನ್ನ ಜೀವಮಾನದಲ್ಲಿ ಬಹುದೊಡ್ಡ ಮಾರ್ಪಾಟವೊಂದು ಪ್ರಾರಂಭವಾದ ಘಳಿಗೆಯದು. ಜಡ್ಜರು ಜೂರಿಗಳೊಡನೆ ಯೋಚಿಸಿ ಇಂಗ್ಲಿಷಿನಲ್ಲಿ ಏನೇನೋ ಹೇಳಿದಾಗ, ಅಲ್ಲಿ ಬರೆಯುವವರೊಬ್ಬರು ನಿಮಗೆ ಮೂವರಿಗೂ ಏಳೇಳು, ವರ್ಷ ಕಠಿಣಶಿಕ್ಷೆ ವಿಧಿಸಲ್ಪಟ್ಟಿದೆ' ಎಂದು ಗಟ್ಟಿಯಾಗಿ ಹೇಳಿದುದೇ ತಡ-ತೀರ್ಪಿನ ಸ್ವರವು ಸಿಡಿಲಿನಂತೆ ಬಡಿದು ಆವರೆಗೆ ಆಧಾರವಿಲ್ಲದೆಯೂ ನಿಂತಿದ್ದ ನನ್ನ ಒಂದು ಆಶೆಯನ್ನು ನೆಲಕ್ಕೊ, ಹೈಕೋರ್ಟಿನ ಮಾಡನ್ನು ನನ್ನ ತಲೆಯಮೇಲೂ ಒಮ್ಮೆಯೇ ಕೆಡಹಿದಂತಾಗಿತ್ತು. ನನ್ನ ತಲೆಯೊಳಗೆ ಗುಮ್ಮನೆ ಮಂಕುಬೂದಿ ಹರಡಿಕೊಂಡಂತಾಗಿತ್ತು. ಕೂಡಲೇ ಆರುಮಂದಿ ಪೋಲಿಸರು ಧಾವಿಸಿಬಂದು ಗೂಡಿನೊಳಗೆ ನಿಂತಿದ್ದ ನಮ್ಮ ಕೈಗಳಿಗೆ ಕೋಳ ಸಿಕ್ಕಿಸಿದರು. ನಮ್ಮನ್ನು ತಮ್ಮ ನಡುವಿನಲ್ಲಿರಿಸಿಕೊಂಡು ಸಬ್‌ಜೈಲಿನ ಕಡೆಗೆ ನಡೆಯಿಸಿದರು. **ಅಂದಿನಿಂದ ನನ್ನ ಜೈಲುಜೀವನ ಪ್ರಾರಂಭ. ಜೈಲು! ಕಟ್ಟಡಗಳಿಗೆ ಬೆಂಕಿ ಕೊಟ್ಟವನನ್ನೂ ಆ ಕಟ್ಟಡವು ಬಾರೆನ್ನುತ್ತದೆ! ಅನ್ನರ ಅನ್ನ ತೆಗೆದು ಬಂದವನಿಗೂ ಅನ್ನದ ತುತ್ತನ್ನೀಯುವ ಮಂದಿರ! ತಲೆಯೊಡೆದು ಬಂದವನು ತಲೆ ಹೊಗಿಸುವ ಮನೆ! ಅಂತಹ ಜೈಲಿನ ಒಳಜೀವನ ನವು ಹೇಗಿದೆ ಎಂಬುದನ್ನು ಬರುವ ವಾರದ ಸಂಚಿಕೆಯಲ್ಲಿ ನೋಡಿರಿ.**

---

**ಗೆಳೆಯರ ತಂಡದ ಸದಸ್ಯರಾಗುವವರು ಅಂತರಂಗದ ಕೆಳಗಿನ ಕೂಪನಿನಲ್ಲಿ ಬರೆಯಬೇಕು.**

## ಗೆಳೆಯರ ತಂಡದ ಸದಸ್ಯತನದ ಪತ್ರ.

**ನಾನು 'ಗೆಳೆಯರ ತಂಡ'ಕ್ಕೆ ಸೇರಲಿಚ್ಛಿಸುತ್ತೇನೆ. ಆ ಬಗ್ಗೆ ಸದಸ್ಯತನದ ಆರು ತಿಂಗಳ ವರ್ಗಣಿಯಾದ ನಾಲ್ಕಾಣೆಯನ್ನು ಕಳುಹಿಸಿರುತ್ತೇನೆ.**

**ಹೆಸರು.** . . . . . . . . . . . . . . . . . . . . . . . .

**ವಿಳಾಸ.** . . . . . . . . . . . . . . . . . . . . . . . .

**ಉದ್ಯೋಗ.** . . . . . . . . . . . . . . . . . . . . . . .

**ಸಹಿ.** . . . . . . . . . . . . . . . . . . . . . . . . .

*For beautiful Printing* - **Manipal Power Press.**


# ಸಂಯುಕ್ತ ಘಟನೆಗಾಗಿ ಸಂಯುಕ್ತರಾಗೋಣ!

[ಒಂದು ಫೆಡರಲ್ ಹರಟೆ.]

ಸಂಯುಕ್ತ ರಾಜ್ಯ ಘಟನೆ! ಭಾರತವನ್ನು ಸ್ವರ್ಗಕ್ಕೇರಿಸಲಿಕ್ಕಾಗಿ ನಾಗಾಲೋಟದಿಂದ ಬರುತ್ತಿರುವ ಫೆಡರೇಶನ್ನಿಗಾಗಿ ಅದೆಷ್ಟು ಪ್ರಚಾರ ಕಾರ್ಯವನ್ನು ಬ್ರಿಟಿಷರು ನಡೆಸುತ್ತಿದ್ದಾರೆ: ಭಾರತೀಯರ ಭಾಗ್ಯಕ್ಕೆ ಎಣೆಯಿಲ್ಲ. ನಮ್ಮನ್ನು ಸಂಯುಕ್ತಗೊಳಿಸಲಿಕ್ಕಾಗಿ ಬರುತ್ತಿರುವ ಆ ಫೆಡರೇಶನಿನ ಕುರಿತು ಇಂಗ್ಲಿಷ್ ಜನರು ನಡೆಸುತ್ತಿರುವ “ಸ್ಟೇಟ್ಸ್‌ಮನ್” ಎಂಬ ಪತ್ರಿಕೆಯಲ್ಲೊಬ್ಬರು ಬರೆದ ಲೇಖನವನ್ನು ಕಂಡು ನಾವೆಲ್ಲರೂ ಸಂಯುಕ್ತರಾಗಬೇಕೆಂದು ಹೇಳಲು ನನಗೆ ಅಸಾಮಾನ್ಯ ಸ್ಫೂರ್ತಿ ಬಂದುಬಿಟ್ಟಿತು. ಆ ಮಹಾನುಭಾವರು ಸ್ವರ್ಗೀಯ ಫೆಡರೇಶನಿನ ಕುರಿತು ಹೀಗಂದಿದ್ದಾರೆ:

“ಫೆಡರೇಶನೆಂದರೆ ಅದು ದೈವಿಕ ನಿಯಮ. ವಿವಿಧತೆಯಲ್ಲಿ ಐಕ್ಯವನ್ನು ತಂದೊಡ್ಡುವ ಒಂದು ಉಪಾಯ. ಫೆಡರೇಶನ್ ವಿಶ್ವದ ಮೂಲ ಸೂತ್ರ. ಆಕಾಶ ಭೂಮಿ ಮತ್ತು ಎಲ್ಲಾ ಗ್ರಹಗಳೂ ಸಂಯುಕ್ತವಾಗುವುವೆಂದು ನಾನು ಬಯಸುತ್ತೇನೆ”

ಎಂತಹ ಉದಾರ ನುಡಿಗಳಿವು! ಲೋಕಶಾಂತಿಯಾಗಬೇಕಾದರೆ ಸಂಯುಕ್ತರಾಗಬೇಕು! ಇರಲಿ, ಲೋಕಶಾಂತಿಯು ನಮಗೆ ಬೇಕೇ ಬೇಕು. ಅದನ್ನು ಹೊಂದುವುದಕ್ಕಾಗಿ ನಾವು ಕೂಡಲೆ ಸಂಯುಕ್ತರಾಗಲು ಯತ್ನಿಸಬೇಕು. ಇನ್ನು ಮುಂದೆ ಎಲ್ಲೆಲ್ಲಿಯೂ ಸಂಯುಕ್ತ ಮಂತ್ರ! ನಮ್ಮ ಹೆಸರುಗಳ ಮುಂದೆ ಶ್ರೀಯುತ, ಶ್ರೀಮತಿ ಎಂದು ಹಾಕುವುದರಲ್ಲಿ ಅರ್ಥವಿಲ್ಲ! ಎಲ್ಲಾ ಸಂಯುಕ್ತಮಯವಾಗಬೇಕು. ಶ್ರೀಯ ಬದಲಿಗೆ ಸಂಯುಕ್ತದ ಹ್ರಸ್ವರೂಪವಾದ ಸಂ. ರಾಮರಾವ್. ಸಂ. ಲೀಲಾಬಾಯಿ—ಈರೀತಿಯಾಗಿ ಬರೆಯಬೇಕು. ಸಮತಾವಾದಿಗಳು ಕೂಡಾ ತಮ್ಮ “ಕೋಮ್ರೇಡ್” ಎಂಬುದನ್ನು ಬಿಟ್ಟು ಸಂ. ಗೋಳಿವಾಲಾ ಎಂದು ಮೊದಲಾಗಿ ಬರೆಯಬೇಕು.





ನಗುಮುಖದಿಂದ ಫೆಡರಲ್ ಯೋಜನೆಯನ್ನು ಭಾರತಕ್ಕೆ ಕೊಡಲು ಸಿದ್ಧರಾಗಿರುವ ಹಿಟ್ಲರ್‌ಪ್ರಿಯ ಚೇಂಬರ್ಲೆನರು.

ಹೀಗೆ ನಾವು ಸಂಯುಕ್ತ ಘಟನೆಯನ್ನು ಜನಜೀವನದ ಮಂದಿರದೊಳಗೆ ಪ್ರವೇಶಿಸುವಂತೆ ಮಾಡಿದರೆ ಫೆಡರೇಶನ್ ಕೂಡಲೆ ಜಾರಿಗೆ ಬಂದು ‘ಲೋಕಶಾಂತಿ’ಯಾಗಿಯೇ ಹೋಗುತ್ತದೆ. ಜಿನ್ನಾ ಸಾಹೇಬರು ತಮ್ಮ ‘ಬಾದಶಹಾ’ ಬಿರುದನ್ನು ಬಿಟ್ಟು ‘ಸಂ. ಜಿನ್ನಾ’ ಎಂದು ಬರೆಯಬೇಕು. ಕಾಂಗ್ರೆಸ್ ಕಮಿಟಿಯವರು ಕೂಡಾ ‘ಸಂ. ಕಮಿಟಿ’ ಎಂದು ಬರೆಯಬೇಕು. ಹೀಗೆ ಮಾಡಿದರೆ ಇಂಡಿಯಾ ಸರಕಾರಕ್ಕೆ ಮೆಚ್ಚುಗೆಯಾಗುತ್ತದೆ. ಸಂಸ್ಥಾನದ ಛಾಯಾ ನರೇಂದ್ರರ ತಂಡಕ್ಕೆ ಸಂತೋಷವಾಗುತ್ತದೆ! ವೈಟ್ ಹಾಲಿನ ದೇವತೆಗಳಿಗೆ ಪರಮಾನಂದವಾಗುತ್ತದೆ ಈಗ ೧೧ ಪ್ರಾಂತ್ಯಗಳಲ್ಲಿರುವ ಪ್ರಾಂತಿಕ ಸರ್ಕಸ್. ಕಂಪೆನಿಯಾನೆ ಪ್ರಾಂತಿಕ ಸರಕಾರಗಳಿಗೆ ಕೂಡಾ ಒಂದು ವಿಧದಲ್ಲಿ ಆನಂದವಾಗಬಹುದು.

ಇಂಡಿಯಾ ಕಾಯಿದೆಯ ಒಂದನೆ ಭಾಗವಾದ ಪ್ರಾಂತಿಕ ಸ್ವಾಯತ್ತೆಯು ಜಾರಿಗೆ ಬಂದು ಪ್ರಜಾಸತ್ತೆಗೆ ಕತ್ತೆಯಂತೆ ಲತ್ತೆಕೊಡುತ್ತಿದೆ. ಪ್ರಾಂತಿಕ ಮಂತ್ರಿಗಳಿಗೆ

ಆಗಾಗ ಹಿಂಗಾಲಿನೇಟು. ಇನ್ನು ಇಂಡಿಯಾ ಕಾಯಿದೆಯ ಎರಡನೆ ಭಾಗವಾದ 'ಸಂ' ಅಥವಾ ಫೆಡರೇಶನ್ ಜಾರಿಗೆ ಬಂದರೆ ಕೇಳಬೇಕೆ? ಆದರೆ ಇದರಲ್ಲೊಂದು ವಿಚಾರವಿದೆ. ಈ 'ಸಂ. ಘ' ಹೇಗಾದರೂ ಜಾರಿಗೆ ಬರಬೇಕು. ತ್ರಿಶಂಕುವಿನಂತೆ ಬೇರೆಯೇ ಸ್ವರ್ಗದಲ್ಲಿದ್ದರೆ 'ಲೋಕ ಶಾಂತಿ'ಯಾಗುವಂತಿಲ್ಲ.

ಈ ಫೆಡರೇಶನ್ ಅಥವಾ ಸಂಯುಕ್ತ ರಾಜ್ಯಘಟನೆ ಎಂದರೇನು? ಸಂಯುಕ್ತವಾಗುವುದು; ಒಂದಾಗುವುದು! ಪ್ರಜಾಸತ್ತೆಯೂ ನರೇಂದ್ರರ ನಿರಂಕುಶಪ್ರಭುತ್ವವೂ ಒಂದಾಗುವುದು. ಎಣ್ಣೆ ನೀರು ಒಂದಾಗುವುದು. ತೋಳ ಮತ್ತು ಕುರಿಮರಿ ಒಂದಾಗುವುದು. ಒಂದಾಗದಿದ್ದರೂ ಒಂದಾಗುವುದು ಈ ಸಂಯುಕ್ತ ಘಟನೆಯ ವೈಶಿಷ್ಟ್ಯ! ಭಾರತದ ಛಾಯಾ ನರೇಂದ್ರರು ತಮಗೆ ಇಚ್ಛೆ ಬಂದ ಪ್ರತಿನಿಧಿಗಳನ್ನು ಆರಿಸಿ, ಪ್ರಾಂತಿಕ ಸರಕಾರಗಳ ಜನಪ್ರೀತ ಪ್ರತಿನಿಧಿಗಳೊಡನೆ ಕಾಯಿದೆಗಳನ್ನು ಮಂಜೂರು ಮಾಡಿಸುವುದು ಇನ್ನೊಂದು ವೈಶಿಷ್ಟ್ಯ. ನರೇಂದ್ರರ ಪ್ರತಿನಿಧಿಗಳು ಹೆಚ್ಚಿರುವುದರಿಂದ ಭಾರತದ ಭಾಗ್ಯವಿಧಾತರಾದ ಬ್ರಿಟಿಷರು ಹೇಳಿದಂತೆ ಈ ಛಾಯಾರಾಜರ ಛಾಯಾ ಪ್ರತಿನಿಧಿಗಳು ತಮ್ಮ ಛಾಯಾ ಓಟುಗಳನ್ನು ಕೊಡುತ್ತಾರೆ. ಹೀಗೆ ಮೋಸಮಾಡಿ ಭಾರತೀಯರೇ ತಮ್ಮ ಕೊರಳಿಗೆ ಕತ್ತಿಯಿಟ್ಟುಕೊಳ್ಳುವಂತೆ ಮಾಡಿ ಬ್ರಿಟಿಷ್ ಕುಹಕತನವನ್ನು ನಡೆಸಬೇಕೆಂದು ಅಮರಾವತಿ ಯಾನೆ ಲಂಡನಿನ ವೈಟ್ ಹಾಲಿನವರ ಹಂಚಿಕೆ.



ಬಡಭಾರತೀಯನ ಹೊಟ್ಟೆ ಮತ್ತು ಬೆನ್ನನ್ನು ಸಂಯುಕ್ತ ಗೊಳಿಸುವುದರಲ್ಲಿದ್ದಾರೆ ನಮ್ಮ ಭಾಗ್ಯವಿಧಾತರಾದ ಬ್ರಿಟಿಷರು.

ಈ ಸಂಯುಕ್ತ ಘಟನೆಗೆ ಇತರರೂ ಬೆಂಬಲವೀಯಬೇಕು. ಮ್ಯುನಿಸಿಪಾಲಿಟಿಗಳು ತಮ್ಮ ಹೆಸರುಗಳನ್ನು ಫೆಡರೇಶನ್ ಎಂದು ಬದಲಾಯಿಸಬೇಕು. ಮಂಗಳೂರು ಫೆಡರಲ್ ಕೌನ್ಸಿಲ್. ಹುಬ್ಬಳ್ಳಿ ಫೆಡರಲ್ ಕೌನ್ಸಿಲ್ ಎಂದಾಗ ಕರೆಯಬಹುದಾಗುತ್ತದೆ.

ಇಂತಹ ಫೆಡರೇಶನಿಗಾಗಿ ದುಡಿಯಲಿಕ್ಕೆ ಬಂದ ಇಂಡಿಯದ ಅಂಡರ್ ಸೆಕ್ರೆಟರಿಯರಾದ 'ಮಯೂರ ಹೆಡ್'ರವರು ಅಂದರೆ [ಮಯೂರ: ನವಿಲು. ಹೆಡ್ (ಇಂಗ್ಲಿಷ್):ತಲೆ- ಮಯೂರ ತಲೆ] ಏಕಪ್ರಕಾರವಾಗಿ ಫೆಡರೇಟ್ ಮಾಡುತ್ತಿದ್ದಾರೆ.


ಪಟ್ಟಣ ಮತ್ತು ಗ್ರಾಮಗಳನ್ನು ಅರ್ಧ ದಿನಗಳೊಳಗೇನೇ ಕಂಡು ಭಾರತದ ಪರಿಸ್ಥಿತಿಯನ್ನು ಅರಿಯುತ್ತಿದ್ದಾರವರು. ಪರಿಸ್ಥಿತಿಯನ್ನು ಪೂರ್ಣವಾಗಿ ತಿಳಿದನಂತರ ಏನಾಗುವುದು? ಮಯೂರ ದೇವನಿಗೇ ಗೊತ್ತು! ಜಿನ್ನ, ಪರಮಾನಂದರು ಒಂದಾಗಿ, ಹಿಂದೂ ಮಹಾಸಭೆ ಮತ್ತು ಮುಸ್ಲಿಮ್ ಲೀಗ್ ಒಂದಾದರೆ, ಕಾಡಿನ ಹುಲಿಗಳೂ ನಾಡಿನ ಆಡುಗಳೂ ಒಂದಾದರೆ ಭಾರತವು ಕೂಡಾ ಒಂದಾಗದೆ?

ಈ ಒಂದಾಗುವ ತತ್ವವು ಕೇವಲ ಮಾಯೆಯಾಗಿದೆ. ಭಾರತವನ್ನು ಬ್ರಿಟಿಷರೇ ಹರಿಹಂಚಿ ಅದು ಚೂರು ಚೂರಾಗಿದೆ. ಈ ಚೂರುಗಳನ್ನು ಆಳಿ ಹಣವನ್ನು ಕೊಂಡೊಯ್ಯುವುದು ಸ್ವಲ್ಪನಷ್ಟವಾಗಿರುವುದರಿಂದ ಈಗ ಈ ಒಂದಾಗುವಿಕೆ. ಇದರಿಂದ ಭಾರತೀಯರ ಹೊಟ್ಟೆಯೂ ಭೂಮಿಯೂ ಒಂದಾಗದಿದ್ದರೆ ಬದುಕಿ ತಿನ್ನಬಹುದು. ಸಂಯುಕ್ತ ರಾಜ್ಯಘಟನೆ ಹಿಂದಾಬಾದ್!

—ಸಂ. ವ್ಹಾ. ವ್ಹಾ!

*Use always* **Suvasini Agarbathis.** **(Regd.)**

## ಅಂತರಂಗ ಸ್ಪರ್ಧೆಯ ಉತ್ತರಗಳನ್ನು ಬರೆದು ಕಳುಹಿಸುವ ಕೂಪನುಗಳು.



### ಅಂತರಂಗ ಸ್ಪರ್ಧೆ—ನಂ. ೧.

ಹೆಸರು . . . . . . . . . . .

. . . . . . . . . . .

. . . . . . . . . . .

ವಿಳಾಸ . . . . . . . . . . .

. . . . . . . . . . .

. . . . . . . . . . .

ಸಹಿ. . . . . . . . . . .

ಉತ್ತರಗಳ ಸಂಖ್ಯೆ . . . . . . .

ಕಳುಹಿಸಿದ ಹಣವೆಷ್ಟು . . . . . . .

**ವಿ. ಸೂ:** ಉತ್ತರಗಳನ್ನು ಬರೆಯುವಾಗ ಸ್ಪಷ್ಟವಾಗಿ ಬರೆಯಬೇಕು:- ಪ್ರತಿಯೊಂದು ಉತ್ತರವೂ ಅಂತರಂಗದ ಕೂಪನಿನಲ್ಲಿಯೇ ಬರೆಯಲ್ಪಡಬೇಕು.


**ಪ್ರತಿಯೊಂದು ಸಂಚಿಕೆಯಲ್ಲೂ ಹಲವು ಬಗೆಯ ಅಪೂರ್ವ ವೈಶಿಷ್ಟ್ಯಗಳು!**

**ಪ್ರತಿಯೊಂದು ಸಂಚಿಕೆಯ ಒಂದೊಂದು ಪುಟದಲ್ಲಿನ ವಿಷಯವೂ ನಿಮ್ಮ ವಿಚಾರಶಕ್ತಿಯ ಬೆಳವಣಿಗೆಗೆ ಯೋಗ್ಯ ಅಭಿದಾನವಾಗಿದೆ! ಹಾಗಿದ್ದುದರಿಂದಲೇ "ವರ್ತಕ ಧುರೀಣ"ನು**

**ವಾ. ಚಂದಾ ೧—೮—೦.] ಕನ್ನಡಿಗರ ನಲ್ಮೆಯುವನಾಗಿದ್ದಾನೆ. [ಮಾದರಿ ಸಂಚಿಕೆ ೦—೨—೦.**

**ಶ್ರೇಷ್ಠ ವರ್ಗದ ಮಾಸ ಪತ್ರಿಕೆ.**

# ವರ್ತಕ ಧುರೀಣ

**ಹಿಂದಿಗಿಂತ ದೊಡ್ಡ ಆಕಾರ. ಹೆಚ್ಚು ಪುಟಗಳು**

**ಈ ಬಾರಿಯ ಸಂಚಿಕೆಯಲ್ಲಿ:-**

ಶ್ರೀ. ವೆಂಕಟರಾಜರವರ ಲಘು ಕಥೆ 'ತಿರುಪೆಯವಳು'.

,, 'ರಮಾಕಾಂತ'ರವರ ವ್ಯಂಗಲೇಖನ 'ಸಗ್ಗದಲ್ಲಿಒಗ್ಗದ ಪರಿಷತ್ತು'.

,, ಮ. ವಿ. ಹೆಗ್ಡೆಯವರ ಕ್ರಾಂತಿ ಚಿತ್ರ 'ಕಲ್ಲಿದ್ದಲ ಕೆಂಡ'.

**ಬ್ರಹ್ಮಚಾರಿ ಹಿಟ್ಲರನಿಂದ ಅಧೋಗತಿಗಿಳಿದ ತರುಣಿಯರು, ಮರುಭೂಮಿಯಲ್ಲಿ ಮುರಿದು ಬಿದ್ದ ವಿಮಾನ, ಮಿ ಜಮದಗ್ನಿಯವರ ಕಲ್ಕತ್ತಾ ಪ್ರವಾಸ ವರ್ಣನ, ಜಾದುವಿದ್ಯದ ಅಪೂರ್ವ ರಹಸ್ಯಗಳು, ಸ್ಕೋಟ್ಲೆಂಡ್ ಯಾರ್ಡ್ ಅಲ್ಲದೇ ಇನ್ನಿತರ ಇಂತಹವೇ ಆದ ಹಲವು ವಿಷಯಗಳಿವೆ.**

ಬಿಡಿಸಂಚಿಕೆಗಳನ್ನು ನಿಮ್ಮ ಏಜಂಟರಿಂದ ಪಡೆದು ಕೊಳ್ಳಿ. ಇಲ್ಲವೇ ೦-೨-೦ ಆಣೆಯ ಅಂಚೆಯ ಚೀಟನ್ನಿಟ್ಟು ನಮಗೆ ಬರಿಯಿರಿ.

ಏಜಂಟರಾಗುವವರು ಶರ್ತಗಳನ್ನು ಅಪೇಕ್ಷಿಸಿದಲ್ಲಿ ಕಳುಹಿಸಿಕೊಡಲಾಗುವುದು.

**ವಿಳಾಸ:** ಪ್ರೊಪ್ರೈಟರ್, '**ವರ್ತಕ ಧುರೀಣ**' ಪೋಸ್ಟ್-ಉಡುಪಿ, ದಕ್ಷಿಣ ಭಾರತ.

# ಈ ವಾರದ ಪಂಚಾಂಗ

ಬಹುಧಾನ್ಯಸಂವತ್ಸರದಕಾರ್ತಿಕಕೃಷ್ಣ-ಮಾರ್ಗಶಿರಶುಕ್ಲಪಕ್ಷದಕ್ಷಿಣಾಯನಂ

ವೃಶ್ಚಿಕ ೪ರಿಂದ ವೃಶ್ಚಿಕ ೧೦ರ ವರೆಗೆ. ಮಹಾನಕ್ಷತ್ರ ಅನುರಾಧಾ. ನವಂಬರ, ೧೯೩೮

## ಆರ್ಯಭಟ ವಾಕ್ಯಕರಣರೀತ್ಯಾ ನಿತ್ಯಪಂಚಾಂಗಂ

| ತಾ. | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 20 | ೧೪ | ರ೫೮\|\| | ಸ್ವಾ೪೫ | ಸೌ೩೯\| | ಭ೨೮\|\| | ಶೆ೭ವಿ ೫೯\|\| | ೨೨\|\| | ಚಿ೧ಕು೦ ಮಾಸಶಿವರಾತ್ರಿಃ |
| 21 | ೩೦ | ಚ೫೯\|\| | ವಿ೪೭\|\| | ಶೋ೩೭ | ಚ೨೯ | ಶೆ೩\|\|ವಿ ೫೮ | ೨೪\|\| | ವೃಶ್ಚಿಕೆಚ೩೨ ಜ್ಯೆ೪ಬು೩೫ವಿ೪ವಶು ೩೩●ಅಮಾವಾಸ್ಯಾಸೋಮವತೀ† |
| 22 | ೧ | ಕು೬೦ | ಅ್ನ೫೧ | ಅ್ತ೩೫\|\| | ಕಿಂ೩೦\|\|\| | ಶೆ೨ | ೨೩\| | ಅ್ನ೨ರ೪೪ [†ಕಾ. ಕಡೆಸೋಮ. ಫ. ಕಡೆಲ.ದೀಪ |
| 23 | ೧ | ಬು೨ | ಜ್ಯೆ೫೫\|\| | ಸು್ಕ೩೫ | ಬ೨ | ೫\|\|\| | ೩೧\|\|\| | ಧನುಚ೫೫\|\|ಚಂದ್ರದ·ಚಂದ್ರೇಶ್ವರ§ |
| 24 | ೨ | ಗು೫\|\| | ಮೂ೬೦ | ಧೃ೩೫\| | ಕೌ೫\|\| | ೧೭\| | ೪೩\|\| | ಮೂ೧ಧನುಬು೫೬ [§ರಥಃ ಸಾಯನಧನುಸಂಕ್ರಮಃ |
| 25 | ೩ | ಶು೧೦ | ಮೂ೧ | ಶೂ೩೬\| | ಗ೧೦ | ೨೭\|\| | ೫೪ | ಅ್ನ೩ರ೬೦ಚಿ೨ಕು೧೬ಪ್ರಾಗುದಯಂ‡ [‡ಶುಕ್ರಃಗೌರೀಪ್ರದೋಷಃ |
| 26 | ೪ | ಶ೧೫\| | ಪೂಷಾ.೭\| | ಗಂ೩೭\| | ಭ೯೫\| | ೨೯\|\| | ೫೬ | ಮಕರೆಚ೨೩\|\|\| |

## ಕೇತಕೀ ದೃಕ್ಸಿದ್ಧರೀತ್ಯಾ ನಿತ್ಯಪಂಚಾಂಗಂ

| ತಾ. | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 20 | ೧೪ | ರ೫೫\|\| | ಸ್ವಾ೪೧\|\| | ಸೌ೩೫\|\| | ಭ೨೫ | ೫೬\| | ೧೮\|\|\| | ಚಿ೧ಕು೨೨ [†ಕಾರ್ತಿಕ ಸ್ನಾನಸ. |
| 21 | ೩೦ | ಚ೫೭\|\| | ವಿ೪೪\|\|\| | ಶೊ೩೩\|\|\| | ಚ೨೬\|\| | ಶೆ\|\|ವಿ ೫೫\| | ೨೧\|\| | ವೃಶ್ಚಿಕೆಚ೨೯ಜ್ಯೆ೪ಬು೨೦ ವಿ೪ವಶು ೪೮ಸೋಮವತೀ●ಅಮಾವಾಸ್ಯಾ† |
| 22 | ೧ | ಕು೬೦ | ಅ್ನ೪೯ | ಅ್ತ೩೩ | ಕಿಂ೩೯\| | ೦ | ೨೧ | ಅ್ನ೨ರ೩೫ಚಾಪಾಯನಂ೫೫\|\| ಸಹ‡ [*ದಯಃ ಪೂರ್ವೆ ವ್ಯ.ಪ್ರ.೩೫ |
| 23 | ೧ | ಬು\|\|\| | ಜ್ಯೆ೫೪\| | ಸು್ಕ೩೩ | ಬ\|\| | ೪ | ೩೦\| | ಚಾಪೆಚ೫೪\| ಚಂದ್ರ ದ ಶುಕ್ರೋ* |
| 24 | ೨ | ಗು೫ | ಮೂ೬೦ | ಧೃ೩೩\|\|\| | ಕೌ೫ | ೧೬\| | ೪೨\|\|\| | ಮೂ೧ಬು೧೪ಶವ್ವಾಲ್ ವ್ಯ. ನಿ.೨೫\| |
| 25 | ೩ | ಶು೧೦ \| | ಮೂ\|\| | ಶೂ೩೫\| | ಗಂ೧೦\| | ೨೭\| | ೫೪ | ಅ್ನ೩ರ೫೩ಚಿ೨ಕು೨೫ [‡ಸ್ಯಾರಂಭಃ |
| 26 | ೪ | ಶ೧೬ | ಪೂ.ಷಾ.೭\|\| | ಗಂ೩೭\|\| | ಭ೧೬ | ೩೦ | ೫೭ | ಮಕರೆಚ೨೪\| |

# ಈ ವಾರದಲ್ಲಿ

# ನಿಮ್ಮ ಭವಿಷ್ಯವು ಹೇಗಿದೆ?

ತಾ. ೨೧-೧೧-'೩೮ರಿಂದ

ತಾ. ೨೮-೧೧-'೩೮ರ ವರೆಗೆ.

## ಮೇಷ

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೆ ಇಷ್ಟಾನಿಷ್ಟಗಳು ಒಂದೇ ತೆರನಾಗಿರುವವು. ನೀವು ಸತ್ಯಸಂಧರೂ ವಿವೇಕಿಗಳೂ ಆಗಿದ್ದು ಪ್ರಾರಂಭಿಸಿದ ಕಾರ್ಯಗಳನ್ನು ಕೊನೆಗಾಣಿಸುವ ನೈಸರ್ಗಿಕ ಸ್ವಭಾವವುಳ್ಳವರಿರುವಿರಿ. ಆದ್ದರಿಂದ ಈ ವಾರದಲ್ಲಿ ನಿಮಗೆ ಉದ್ಯೋಗಪ್ರಾಪ್ತಿಯೂ ತನ್ಮೂಲಕ ಧನಲಾಭವಾಗುವ ಸಂಭವವೂ ಇದೆ. ಇದಕ್ಕೆ ಅನರ್ಥಕಾರಿಗಳಿಂದ ಶೋಕಪದಂಪರೆಗಳು ಆಗಾಗ ಒದಗಿ ಬಹಳ ಪೀಡಿಸುವವು. ಶತ್ರುಗಳೂ ಕೂಡ ಅನೇಕ ವಿಧದಿಂದ ನಿಮ್ಮ ಕಾರ್ಯಗಳಿಗೆ ವಿಘ್ನವನ್ನು ಮಾಡುವರು. ಶರೀರದ ಆರೋಗ್ಯವೂ ಕೂಡ ಕೆಟ್ಟು ಕೆಲಸಮಯ ಬಂಧನದಲ್ಲಿದ್ದಂತೆ ಇರಬೇಕಾಗುವುದು. ಗೃಹತಾಪತ್ರಯವು ಮುಂಚಿಗಿಂತಲೂ ಸ್ವಲ್ಪ ಅಧಿಕವಾಗಿ ಧನವ್ಯಯವೂ ಹೆಚ್ಚುವುದು. ತಾ. ೨೨ರಿಂದ ೨೬ರ ವರೆಗಿನ ದಿನಗಳಲ್ಲಿ ಹೆಚ್ಚಿನ ಶ್ರಮ, ದೇಹಾಲಸ್ಯ, ಅಧಿಕಾರಿ ವರ್ಗದವರ ಪ್ರಕೋಪಕ್ಕೂ ಕೂಡ ಒಳಗಾಗುವಿರಿ.

## ವೃಷಭ

ಪರಾಕ್ರಮಿಗಳೂ, ಕೀರ್ತಿವಂತರೂ, ಕೊಟ್ಟ ಭಾಷೆಯನ್ನು ಎಷ್ಟು ಕಷ್ಟ ಬಂದರೂ ಇಷ್ಟದಂತೆ ಪೂರೈಸುವ ಶಿಷ್ಟಾಚಾರವುಳ್ಳವರೂ ಆಗಿರುವಿರಿ. ಇದು ನಿಮ್ಮ ಹುಟ್ಟು ಗುಣವೇನೋ ಸಹಜ. ಆದರೇನು ಈ ವಾರದಲ್ಲಿ ಮಾತ್ರ ನಿಮ್ಮ ಪೂರ್ವ ಗೌರವವನ್ನು ಕಾಯ್ದುಕೊಳ್ಳುವುದು ಬಹಳ ಕಷ್ಟಕ್ಕೆ ಬರುವುದು. ದೇಹಶಕ್ತಿಯು ನಿಮ್ಮಲ್ಲಿ ಕಡಿಮೆಯಾಗಿರುವುದರಿಂದಲೂ, ಧನ ಜನರ ಬೆಂಬಲವು ಏನೂ ಇಲ್ಲದಿರುವುದರಿಂದಲೂ, ಶತ್ರುಗಳು ಅಧಿಕಾಧಿಕವಾಗಿ ಉಪದ್ರವಿಸುವುದರಿಂದಲೂ ನಿಮ್ಮ ಕಾರ್ಯಗಳು ಬಹುತೇಕ ವಿಫಲಗಳಾಗುವವು ಧನವ್ಯಯವು ನಿಮ್ಮ ಆಯವನ್ನು ಮಾರಿಹೋಗುವುದು. ದೇಶಾಟನದ ಸಲುವಾಗಿ ಧನವ್ಯಯವಾದರೂ ವಿಶೇಷ ಅನಿಷ್ಟಕಾರಿಗಳಾಗಿರುವುದರಿಂದ ತದ್ದಿನಗಳಲ್ಲಿ ಜಾಗರೂಕತೆಯಿಂದಿರುವುದೊಳ್ಳಿತು.

## ಮಿಥುನ

ಎಂತಹ ಶಕ್ತಿವಂತನಾದರೂ ಆತನು ಚಂಚಲಚಿತ್ತನಾಗಿದ್ದರೆ ಯಾವ ಕಾರ್ಯವನ್ನು ಮಾಡಲೂ ಶಕ್ತನಾಗುವುದಿಲ್ಲ. ಮನೋ ಸಿಧ್ಧಾರವೇ ಸರ್ವ ಕಾರ್ಯಗಳಿಗೂ ತಳಹದಿಯಾಗಿರುವುದು. ಇಂತಹ ಅಡಿಗಲ್ಲಿನ ರೂಪವಾದ ನಿಮ್ಮ ಚಿತ್ತವು ಕೆಸರಿನಲ್ಲಿ ನೆಟ್ಟ ಕಂಭದಂತಾಗಿರುವುದು ಈ ವಾರದಲ್ಲಿ. ಆದ ಕಾರಣದಿಂದಲೇ ವಿದ್ಯಾಭಿಲಾಷಿಗಳಾದ ಜನರಿಗೆ ಈ ವಾರವು ಬಹಳ ಹಾನಿಕರವಾಗಿರುವುದು. ಜನರೊಡನೆ ಕಲಹವು ಹೆಚ್ಚುವುದಲ್ಲದೆ ಕೆಟ್ಟ ಕಾರ್ಯಗಳನ್ನು ಮಾಡುವುದರಿಂದ ಅಪವಾದಕ್ಕೊಳಗಾಗುವಿರಿ. ನಿಮ್ಮ ಶರೀರವು ಆರೋಗ್ಯದಲ್ಲಿರಲಾರದು. ನಿಮ್ಮಲ್ಲಿರತಕ್ಕ ಧನದ ಅಪವ್ಯಯಕ್ಕೆ ಹೆಚ್ಚಿನಂಶ ಶತ್ರುಗಳೇ ಕಾರಣರಾಗುವರು. ತಾ ೨೦, ೨೧ರಲ್ಲಿ ನಿಮಗೆ ಹೆಚ್ಚಿನ ಅನಿಷ್ಟಗಳು ಸಂಭವಿಸಿದರೂ ಮೇಲಿನ ದಿನಗಳಲ್ಲಿ ಆರೋಗ್ಯ ಲಾಭವೂ ಧನಲಾಭವೂ ಆಗುವುದು.

## ಕರ್ಕಾಟಕ

"ಕೈಕೆಸರಾದರೆ ಬಾಯಿ ಮೊಸರಾದೀತು" ಎಂಬಂತೆ ಸದ್ಯಕ್ಕೆ ನಿಮ್ಮ ಗ್ರಹಸ್ಥಿತಿಯು ಬಂದಿರುವುದು. ಬಂಧುಜನರಿಂದಲೂ ಆಪ್ತಮಿತ್ರರಿಂದಲೂ ಕೂಡಿದ ನಿಮಗೆ ವಾರವು ತಿಳಿಯದೇ ಕಳೆದೀತು. ಪುತ್ರರಿಂದಲೂ, ಮಿತ್ರವರ್ಗದವರಿಂದಲೂ ಹೆಚ್ಚಿನ ಲಾಭವಾಗತಕ್ಕ ಕಾರ್ಯವು ಜರಗುವದು. ಶರೀರ ಪ್ರಕೃತಿಯು ಅಷ್ಟೊಂದು ಉತ್ತಮ ಸ್ಥಿತಿಯಲ್ಲಿಲ್ಲದಿದ್ದರೂ ಹೆಚ್ಚಿನ ಪೀಡೆಗಳುಂಟಾಗಲಾರವು. ಮಾಡತಕ್ಕ ಕಾರ್ಯಗಳೆಲ್ಲವೂ ನಿಸ್ಸಂದೇಹವಾಗಿ ಕೊನೆ

ಗೊಳ್ಳುವವು. ಶತ್ರುನಿಗ್ರಹಕ್ಕೂ ಕೂಡ ಅಯೋಗ್ಯ ಕಾಲವಾಗಿರುವುದು. ಸಾಂಸಾರಿಕ ಭಾಗವೂ, ಸಾಂಪತ್ತಿಕ ಸ್ಥಿತಿಯೂ ಬಹಳ ಉತ್ತಮ ತರಗತಿಯಲ್ಲಿರುವುದು. ಕಾಮುಕ ಜನರು ವನಿತಾಧರಾಮೃತ ಪಾನದಿಂದ ಮತ್ತರಾಗುವರು. ವಾರಾದಿಯಲ್ಲಿ ಭಯಕಲಹಗಳು ಹೆಚ್ಚಿದ್ದರೂ ವಾರಾಂತ್ಯದಲ್ಲಿ ಅವೆಲ್ಲವೂ ನಿವಾರಣೆಯಾಗುವವು.

## ಸಿಂಹ

ನೈಸರ್ಗಿಕ ಶುಭರಾದ ಗ್ರಹರ ಸಂಪೂರ್ಣ ಅನುಗ್ರಹವು ನಿಮಗಿರುವುದರಿಂದ, ಶಾಂತ ಸ್ವಭಾವ, ಕ್ಷಮಾ ದಯಾ ದಾಕ್ಷಿಣ್ಯಾದಿ ಗುಣಗಳು ನಿಮ್ಮಲ್ಲಿ ವೃದ್ಧಿಗೊಳ್ಳುವವು. ಶುಭ ಮತ್ತು ಧರ್ಮಕಾರ್ಯಗಳು ಹೆಚ್ಚಾಗಿ ಜರಗುವವು. ರಾಜಕೀಯ ಕ್ಷೇತ್ರದಲ್ಲಿ ಕೆಡುಕು ಮತ್ತು ಮಾನಹಾನಿಯ ಪ್ರಸಂಗ ಒದಗಿದರೂ ನಿಮ್ಮ ಬುದ್ಧಿಚಾತುರ್ಯದಿಂದ ಅವನ್ನು ಪಾರುಗಾಣುವಿರಿ. ಭೋಗಿಗಳಾದ ನಿಮ್ಮ ಮನೋರಥಗಳು ಈಡೇರುವವು ಜನರಿಂದ ಮಾನಮರ್ಯಾದೆಗಳನ್ನು ಹೊಂದುವಿರಿ. ಗೃಹಚ್ಛಿದ್ರ ವಿಷಯಕವಾಗಿಯೂ ತಾಪಜ್ವರದ ಸಲುವಾಗಿಯೂ ಕೆಲವಂಶ ಧನವ್ಯಯವಾಗುವುದು. ಜನಸಹಾಯವು ನಿಮಗೆ ಚೆನ್ನಾಗಿರುವುದರಿಂದ ಯಾವ ದುಸ್ಸಾಧ್ಯವಾದ ಕಾರ್ಯವಾದರೂ ನಿಮ್ಮ ಭಾಗಕ್ಕೆ ತೃಣಪ್ರಾಯ. ತಾ. ೨೨ರಿಂದ ೨೬ರ ವರೆಗೂ ಜಾಗ್ರತೆ ತಪ್ಪಿ ನಡೆಯದಿರಿ.

## ಕನ್ಯಾ

ನಿಮ್ಮ ಕಾರ್ಯಕ್ಕೆ ತಕ್ಕ ಪ್ರತಿಫಲ ದೊರೆತರೂ ಕೂಡ ನಿಮಗೆ ಈ ವಾರದಲ್ಲಿ ಹಣದ ಅಡಚಣೆಯು ಹೆಚ್ಚಾಗುವುದು. ಕಾರಣ ಖರ್ಚಿನ ಮಾರ್ಗಗಳು ವೃದ್ಧಿಯಾಗುತ್ತಲಿವೆ. ನಿಮ್ಮ ಉದ್ಯೋಗದಲ್ಲಿ ನಿಮಗೆ ತೃಪ್ತಿಯಿರುವುದರಿಂದ ಸ್ವಲ್ಪಮಟ್ಟಿನ ಮನಶ್ಶಾಂತಿಯಾಗುವುದು. ಆದರೂ ಶತ್ರುಗಳ ಭಯದಿಂದಲೂ, ಅಕಸ್ಮಾತ್ ಉಂಟಾಗತಕ್ಕ ದೇಹ ಪೀಡೆಯಿಂದಲೂ ಮನೋವ್ಯಥೆಯು ವೃದ್ಧಿಯಾಗುವುದು. ಮಿತ್ರಜನರ ಬೆಂಬಲವು ಚೆನ್ನಾಗಿದ್ದರೂ ಕೆಲವು ಕಾರ್ಯಗಳು ಶತ್ರುಗಳ ಹಂಚಿಕೆಯಿಂದ ಪೂರ್ತಿಯಾಗಲಾರವು. ಪ್ರವಾಸದಲ್ಲಿ ಅನೇಕ ಕಷ್ಟನಷ್ಟಗಳು ಸಂಭವಿಸುವವು. ಆಪ್ತಜನರಲ್ಲಿ ಕೆಲವೊಂದು ಕಾರಣದಿಂದಾಗಿ ವೈಮನಸ್ಸುಂಟಾಗುವುದು. ವಾರದ ಆದ್ಯಂತೆ ಭಾಗಗಳಲ್ಲಿ ದೇಹಾಲಸ್ಯವೂ ಧನವ್ಯಯವೂ ಅಧಿಕವಾಗುವುದು.

## ತುಲಾ

ನಿಮ್ಮ ಭವಿಷ್ಯವು ಈ ವಾರದಲ್ಲಿ ಉತ್ತಮಸ್ಥಿತಿಗೆ ಬಂದಿರುವುದು. ರವಿಯೊಬ್ಬನು ದ್ವಿತೀಯಗತನಾಗಿದ್ದು ಧನವ್ಯಯ, ನೇತ್ರರೋಗ, ಸುಖ ಹಾನಿಕಾರಕನಾಗಿದ್ದರೂ ಇತರ ಸರ್ವಗ್ರಹರ ಇದಿರಿನಲ್ಲಿವು ಫಲಕಾರಿಯಾಗಲಾರವು. ನಿರೋಗಿಯಾದ ನಿಮ್ಮ ಶರೀರಕ್ಕೆ ಅವ ರೋಗವೂ ಸೋಂಕಲಾರದು. ಶತ್ರುಗಳೆಲ್ಲರೂ ನಿಮ್ಮ ಪಾದಾಕ್ರಾಂತರಾಗುವರು. ಗೃಹಸಂಪತ್ತು ಸರ್ವ ವಿಧದಲ್ಲಿಯೂ ಮನೋಜ್ಞವಾಗಿರುವುದು. ಪರಿಜನರು, ಮಿತ್ರರು, ಬಂಧುಗಳು ಎಲ್ಲರೂ ನಿಮ್ಮ ಹಿತಚಿಂತಕರಾಗಿರುವುದಲ್ಲದೆ ಆಜ್ಞಾಧಾರಿಗಳಾಗಿದ್ದರೆಂದರೂ ತಪ್ಪಾಗದು, ಕೋರ್ಟು ಕಛೇರಿಗಳಲ್ಲಿನ ವ್ಯವಹಾರಗಳು ನಿಮ್ಮಂತೆಯೇ ಆಗುವವು. ಚಲಾವಣೆಯಲ್ಲಿರತಕ್ಕ ಯಾವ ತರಡ ಉದ್ಯೋಗದಲ್ಲೂ ಲಾಭವಲ್ಲದೆ ನಷ್ಟದ ಸುಳಿವೇ ಇಲ್ಲವು ಸ್ನಾನಮಾನಾದಿ ಸಕಲ ಮನ್ನಣೆಗಳೂ ದೊರೆಯುವವು. ಆದರೂ ನಿಮ್ಮ ಅಂತರ್ಯದಲ್ಲಿ ದುಶ್ಚಾರಿತ್ರ್ಯ ಸಂಬಂಧವಾದೊಂದು ಭಯವು ಇದ್ದೇ ಇದೆ. ತಾ ೨೨, ೨೩ ಈ ದಿನಗಳಲ್ಲಿ ಹೆಚ್ಚಿಗೆ ಖರ್ಚುಮಾಡುವಿರಿ.

## ವೃಶ್ಚಿಕ

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೆ ಶುಭಾಶುಭಗಳು ಮಿಶ್ರವಾಗಿ ಫಲಾನುಭವಕ್ಕೆ ಬರುವುದು. ವಾರದ ಆದ್ಯಂತ ಭಾಗಗಳಲ್ಲಿ ಹೆಚ್ಚಿನ ಆಯಾಸ, ಅಜೀರ್ಣ ಸಂಬಂಧವಾದ ಉದರ ರೋಗಗಳು ಕಂಡು ಬರುವವು. ಮತ್ತು ಸೋದರರಲ್ಲಿಯೂ ಸ್ತ್ರೀಯರೊಡನೆಯೂ ಕಲಹವಾಗುವುದು. ಆದರೂ ನಿಮ್ಮ ಖರ್ಚಿಗೆ ಬೇಕಾದಷ್ಟು ಉತ್ಪತ್ತಿಯು ಆಗಿಯೇ ತೀರುವುದು. ಪರಕೀಯ ಸ್ತ್ರೀಯಳ ಧನಲಾಭವಾಗುವ ಸಂಭವವೂ ಇದೆ. ಪರಿಜನರಿಂದಲೂ ಧಾನ್ಯ ಧನ ಕನಕ ವಸ್ತು ವಾಹಾನಾದಿಗಳಿಂದಲೂ ಕೂಡಾ ಗೃಹವು ಪೂರ್ಣವಾಗಿರುವುದು. ಜನರಿಂದ ಗೌರವಾದರಗಳನ್ನು ಪಡೆಯುವಿರಿ. ಮಾತ್ರವಲ್ಲ, ಅಕಸ್ಮಾತ್ ಧನಸಿಗುವ ಚಾನ್ಸೂ ಇದೆ. ತಾ. ೨೦. ೨೧, ಮತ್ತು ೨೪, ೨೫, ೨೬, ಈ ದಿನಗಳಲ್ಲ ಹೆಚ್ಚಿನ ಧನವ್ಯಯವೂ ಕಾರ್ಯವಿಘ್ನವೂ ಆಗಲಿದೆ.

ಹಸ್ತ ಸಾಮುದ್ರಿಕ ಲಕ್ಷಣ ಬೆಲೆ ೦-೮-೦

## ಧನು

ಕಾಲಹೋದಂತೆ ಕನಿಷ್ಠ ಪೆಂಬಂತೆ ನಿಮ್ಮ ಸ್ಥಿತಿಯು ಬಂದಿರುವುದು. ಕಷ್ಟಪಟ್ಟು ದುಡಿದ ಧನ ವಸನಾದಿಗಳು ಅತ್ಯಲ್ಪಾವಕಾಶದಲ್ಲೇ ಸತ್ಕಾರ್ಯಕ್ಕಾಗಿಯೇ ವ್ಯಯಹೊಂದುವುವು. ಮಿತ್ರಜನರ ಮತ್ತು ಆಪ್ತಸ್ತ್ರೀಯಳ ವಿಯೋಗದಿಂದ ಮನೋವ್ಯಥೆಯು ಅಧಿಕವಾಗುವುದು! ಖರ್ಚಿನ ಭಾಗವು ಮಿತಿಮೀರಿ ಹೋಗುವುದರಿಂದ ತದ್ವಿಷಯಕವಾದ ಚಿಂತೆ ಮತ್ತು ಅಡಚಣಿಗಳು ಯಾವಾಗಲೂ ತಪ್ಪುವಂತಿಲ್ಲವು. ವಾತಸಂಬಂಧವಾದ ರೋಗ ವಿಶೇಷವು ತಲೆದೋರಿ ಅಂಗಾಂಗಗಳಲ್ಲಿ ನೋವುಂಟಾಗುವುದು. ನಿಷ್ಠುರವಾಣಿಗಳಾದ ನಿಮಗೆ ಜನರಲ್ಲಿ ಕಲಹವು ಹೆಚ್ಚಿ ಜನನಿಂದೆಗೆ ಪಾತ್ರರಾಗುವಿರಿ. ತಾ. ೨೨, ೨೩ರಲ್ಲಿ ಆಪತ್, ಪ್ರವಾಸ, ಧನವ್ಯಯಗಳು ಸಂಭವಿಸುವವು.

## ಮಕರ

ಕಳೆದ ವಾರಕ್ಕಿಂತ ಈ ವಾರವು ನಿಮಗೆ ಕೆಲವಂಶಗಳಲ್ಲಿ ಹೀನಸ್ಥಿತಿಗೆ ಬಂದಿರುವುದು. ಮಿತ್ರವರ್ಗದವರಿಂದ ಧನಲಾಭವಾಗುವುದು. ಸಂಕಲ್ಪಿಸಿದ ಕಾರ್ಯಗಳು ಜಯಶೀಲವಾಗಿ ಕೊನೆಗೊಳ್ಳುವವು. ಆದರೂ ಕೆಲವು ಕಾರ್ಯಗಳಲ್ಲಿ ಅಜಾಗರೂಕತೆಯಿಂದಾಗಿ ಅಪಜಯವಾಗುವುದು. ವ್ಯಯವು ಎಂದೂ ಆಯವನ್ನು ಮೀರಿ ಹೋಗುವಂತಿಲ್ಲ. ಮನೋರೋಗದಿಂದ ಶರೀರ ಪ್ರಕೃತಿಯು ಕೆಡುವ ಸಂಭವವಿದೆ. ಶರೀರದ ಸಾರವತ್ತಾದ ಪದಾರ್ಥಗಳ ವ್ಯಯದಿಂದ ದೇಹವು ಕ್ಷೀಣವಾಗಬಹುದು. ಪ್ರವಾಸಕ್ಕೆ ಈ ಸಮಯವು ಅಹಿತವಾಗಿರುವುದು. ತಾ. ೨೪, ೨೫, ೨೬ರಲ್ಲಿ ಧನವ್ಯಯದಲ್ಲಿ ಚೆನ್ನಾಗಿ ದೃಷ್ಟಿಯನ್ನಿಡತಕ್ಕದ್ದು.

## ಕುಂಭ

ಗೃಹಸಂಪತ್ತು ಮನಸ್ಸಿಗೆ ತೃಪ್ತಿಕರವಾಗಿದ್ದು ಸಂಸಾರ ರಥವು ಕ್ರಮವಾಗಿ ಸಾಗುವದು. ಮನೆಯಲ್ಲಿನ ಜನರು ಅನ್ಯೋನ್ಯ ಮೈತ್ರೀಭಾವದಿಂದಿರುವುದರಿಂದ ಸಾಂಸಾರಿಕ ತಾಪತ್ರಯವು ಬರುವಂತಿಲ್ಲ. ಆದರೂ ನಿಮ್ಮ ಅವಿವೇಕದಿಂದಾಗಿ ಕೆಲವು ಭಾಗದಲ್ಲಿ ಜನರೊಡನೆ ಕಲಹವಾಗುವುದು. ಮತ್ತು ಮಾನಹಾನಿಯೂ ಧನವ್ಯಯವೂ ಸಂಭವಿಸುವುದು. ಕಜ್ಜಿ, ವ್ರಣ ಮುಂತಾದುವುಗಳಿಂದ ಶರೀರಕ್ಕೆ ಹೆಚ್ಚಿನ ಪೀಡೆಯುಂಟಾಗಿ ದೇಹಸುಖವು ಸಂಪೂರ್ಣ ನಾಶವಾಗುವದು. ದೇಹವು ವೈವರ್ಣ್ಯಭಾವವನ್ನು ಹೊಂದುವುದು. ಶತ್ರುಗಳು ಅನೇಕ ವಿಧದಿಂದ ಪೀಡಿಸಿದರೂ ನಿಮ್ಮ ಕಾರ್ಯಗಳಿಗೆ ವಿಘ್ನವಾಗುವಂತಿಲ್ಲವು. ತಾ. ೨೦, ೨೧ ರಲ್ಲಿ ಅಧಿಕಾರೀ ಜನರಿಂದ ಭಯವೂ ಆಯಾಸವೂ ಹೆಚ್ಚುವುದು.

## ಮೀನ

ನೀವು ಜನಪ್ರಿಯರೂ ವ್ಯವಹಾರ ಕುಶಲರೂ ಅಜಾತಶತ್ರುಗಳೂ ಆಗಿರುವಿರಿ. ಪ್ರಕೃತದ ಗ್ರಹಸ್ಥಿತಿಯಿಂದಾಗಿ ನಿಮಗೀ ವಾರವು ಸ್ವಲ್ಪ ಮಟ್ಟಿಗೆ ಕೆಟ್ಟದ್ದಾಗಿಯೇ ಇರುವುದು. ಆಪತ್ತುಗಳು ಮೇಲಿಂದ ಮೇಲೆ ಬರುವುದರಿಂದಲೂ ಶರೀರದಲ್ಲಿ ಅನೇಕ ರೋಗಗಳು ತಲೆಯೆತ್ತುವುದರಿಂದಲೂ ನಿಮ್ಮ ಮನೋವ್ಯಥೆಯು ಅತ್ಯಧಿಕವಾಗುವುದು. ಧನವಿಷಯಕವಾದ ಕಲಹವು ಹೆಚ್ಚುವುದು. ಸ್ವಜನರೆಂಬವರು ನಿಮ್ಮಿಂದ ದೂರವಾಗುವರು. ಆದರೂ ಧರ್ಮ ಕಾರ್ಯಗಳು ಕ್ರಮದಂತೆ ನಿಮ್ಮಿಂದ ಆಚರಿಸಲ್ಪಡುವುದರಿಂದ ಕೆಲವು ಕಾರ್ಯಗಳಲ್ಲಿ ಧನಲಾಭ, ಸ್ತ್ರೀಸುಖಗಳನ್ನೂ ಹೊಂದುವಿರಿ. ವಾರಾದಿಯ ಐದು ದಿನಗಳು ಹೆಚ್ಚಿನ ಹಾನಿಕರಗಳಾಗಿರುವುದರಿಂದ ಜವಾಬ್ದಾರಿ ಕಾರ್ಯಗಳಲ್ಲೂ ದೇಹಾರೋಗ್ಯದ ವಿಷಯದಲ್ಲೂ ಚೆನ್ನಾಗಿ ದೃಷ್ಟಿಯನ್ನಿಡತಕ್ಕದ್ದು.

— ಬಾಲಭಾಸ್ಕರ.

## ನನಗರಿಯದು-ನಿಮಗೆ



ಬಹುಧಾನ್ಯವನ್ನು ಎಲ್ಲಿ ಬೆಳೆಸುತ್ತಾರೆ?

# ಅಂತರಂಗ ಸ್ಪರ್ಧೆ

**ನಂ. ೧.**

## ಪ್ರಥಮ ಬಹುಮಾನ:- ರೂಪಾಯಿ ೨೫

**ದ್ವಿತೀಯ ಬಹುಮಾನ:**- ಒಂದು ತಪ್ಪಿರುವ ಪ್ರತಿಯೊಂದು ಉತ್ತರಕ್ಕೆ "Paryayam Souvenir" ಎಂಬ ಸಚಿತ್ರ ಪುಸ್ತಕ.

**ತೃತೀಯ ಬಹುಮಾನ:**-ಎರಡು ತಪ್ಪಿರುವ ಪ್ರತಿಯೊಂದು ಉತ್ತರಕ್ಕೆ "ಪುರಂದರದಾಸರ ಕೀರ್ತನೆ

**ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಸೂಚನೆಗಳು:—**

ಈ ಸ್ಪರ್ಧೆಯ ಸರಿಯಾದ ಉತ್ತರವು 'ಅಂತರಂಗ'ದ ಸಂಪಾದಕರ ಬಳಿ ಮೊಹರು ಮಾಡಿ ಇಡಲಾಗಿದೆ. ಅದಕ್ಕೆ ಪ್ರತಿ ಅಕ್ಷರವೂ, ಸರಿಹೋಲತಕ್ಕ ಉತ್ತರಕ್ಕೆ ಮೊದಲನೆ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಎರಡು ಮತ್ತು ಮೂರನೆ ಬಹುಮಾನಗಳೂ ಕೊಡಲ್ಪಡುವುವು. ತಪ್ಪಾದ ಪ್ರತಿಯೊಂದು ಪದವೂ ಒಂದೊಂದು ತಪ್ಪೆಸಂತೆ ಭಾವಿಸಲಾಗುತ್ತದೆ. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮೆನೇಜರರಿಗೆ ಸೇರಿದುದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಉತ್ತರಕ್ಕೂ ಪ್ರವೇಶ ಧನ ನಾಲ್ಕಾಣೆ. ಒಬ್ಬನು ಎಷ್ಟೂ ಉತ್ತರಗಳನ್ನು ಕಳುಹಿಸಬಹುದು. ಒಂದುರೂಪಾಯಿಗೆ ಐದು ಉತ್ತರಗಳನ್ನು ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿ ಆರ್ಡರ್ ಮೂಲಕ ರವಾನಿಸಬಹುದು. ಉತ್ತರವನ್ನು ಬರೆಯತಕ್ಕವರು ದಶಂಬರ ೧೦ ರೊಳಗೆ ಬರೆದು ಕಳುಹಿಸಬೇಕು. ನಂತರ ಈ ಸ್ಪರ್ಧೆಗಾಗಿ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ದಶಂಬರ ೧೮ರ ಅಂತರಂಗದಲ್ಲಿ ಪ್ರಕಟಿಸಲಾಗುತ್ತದೆ. ಈ ಸ್ಪರ್ಧೆಯ ಉತ್ತರಗಳು ಅಂತರಂಗದ ಕೂಪನಿನಲ್ಲಿಯೇ ಬರೆಯಲ್ಪಡಬೇಕು. ಈ ಕೂಪನುಗಳು ಈ ಸಂಚಿಕೆಯ ಮೊದಲ್ಗೊಂಡು ಅಂತರಂಗದ ನಾಲ್ಕು ಸಂಚಿಕೆಗಳಲ್ಲಿ ಪ್ರಕಟಿಸಲ್ಪಡುತ್ತವೆ. ಉತ್ತರ ಕೊಡುವವರು ತಮ್ಮ ಪೂರ್ಣ ವಿಳಾಸವನ್ನು ಬರೆಯತಕ್ಕದ್ದು.

ಉತ್ತರಗಳು ಕೆಳಗಿನ ವಿಳಾಸಕ್ಕೆ ಕಳುಹಿಸಲ್ಪಡಬೇಕು.

**ಮೆನೇಜರ್, 'ಅಂತರಂಗ ಸ್ಪರ್ಧೆ', ಅಂತರಂಗ, ಉಡುಪಿ.**

**ವಿ. ಸೂ:** ಈ ಸ್ಪರ್ಧೆಯಲ್ಲಿ ಸಪ್ಲೈ ಏಜನ್ಸಿ, ಲಿಮಿಟೆಡ್, ಉಡುಪಿ—ಇದರ ಯಾವ ನೌಕರರಿಗೂ ಭಾಗವಹಿಸಲೆಡೆಯಿಲ್ಲ.

---

**ಸ್ಪರ್ಧೆಯನ್ನು ಮುಂದಿನ ಪುಟದಲ್ಲಿ ನೋಡಿರಿ.**

Printed and published by P. Venkataramanacharya for and on behalf of SUPPLY AGENCY LTD.,
at Manipal Power Press, Udipi.

| | | | | | | | | |
|---|---|---|---|---|---|---|---|---|
| ೧ | ೨ | ದ ೩ | ೪ | ೫ | ■ | ೬ | ೭ | ನ ೮ |
| ೯ | ■ | ೧೦ | ■ | ೧೧ | ೧೨ | ೧೩ | ■ | ೧೪ |
| ೧೫ | ೧೬ | ೧೭ ಹ | ೧೮ | ■ | ೧೯ | ■ | ೨೦ | ೨೧ |
| ■ | ೨೨ | ೨೩ | ■ | ■ | ■ | ೨೪ | ೨೫ | ■ |
| ೨೬ | ■ | ೨೭ | ೨೮ | ■ | ೨೯ | ೩೦ | ಮ ೩೧ | ೩೨ |
| ೩೩ | ೩೪ | ■ | ೩೫ | ೩೬ | ಥೆ ೩೭ | ■ | ೩೮ | ■ |
| ೩೯ | ಡಾ ೪೦ | ೪೧ | ೪೨ | ■ | ೪೩ | ೪೪ | ದೆ ೪೫ | ■ |
| ೪೬ | ■ | ೪೭ | ■ | ತ ೪೮ | ೪೯ | ಣ ೫೦ | ■ | ಜ ೫೧ |
| ೫೨ | ೫೩ | ೫೪ | ■ | ೫೫ | ■ | ೫೬ | ೫೭ | ನ ೫೮ |

## ಎಡದಿಂದ ಬಲಕ್ಕೆ.

೧ರಿಂದ ೫ .... ವಾದ ಮಾತುಗಳಿಂದ ಇತರರಿಗೆ ಸಂತೋಷವಾಗುತ್ತದೆ

೬ ,, ೮ .... ಗಳನ್ನು ಮಾಡುವವರಿಗೆ ತುಂಬಾ ವಿಚಾರ ಶಕ್ತಿಯಿರಬೇಕಾಗುತ್ತದೆ.

೧೧ ,, ೧೩ ಸವಿ.

೧೫ ,, ೧೮ ... ಉಡಿಗೆ ತೊಡಿಗೆಗಳಿಗಾಗಿ ಸ್ತ್ರೀಯರು ಹಂಬಲಿಸುತ್ತಾರೆ.

೨೦ ,, ೨೧ ಇದೊಂದನ್ನು ಬಿಟ್ಟರೆ ಹೊಟ್ಟೆತುಂಬಿಸಿಕೊಳ್ಳುವುದು ಕಷ್ಟವಲ್ಲ.

೨೨ ,, ೨೩ ಅತಿ ... ಯಾಗಿರುವ ಪದಾರ್ಥಗಳನ್ನು ತಿಂದರೆ ಕೆಲವೊಮ್ಮೆ ಅನಾರೋಗ್ಯವುಂಟಾಗುತ್ತದೆ.

೨೪ ,, ೨೫ ದಟ್ಟ ... ಗಳಲ್ಲಿ ಸಂಚರಿಸುವಾಗ ಜಾಗ್ರತೆಯಿಂದಿರಬೇಕಾಗುತ್ತದೆ.

೨೭ ,, ೨೮ ಋಷಿಗಳು ಇದರ ಬಲದಿಂದಲೇ ಜ್ಞಾನವನ್ನು ಸಂಪಾದಿಸುತ್ತಿದ್ದರು.

೨೯ ,, ೩೨ ನಲ್ಲೆಯರ .... ತುಟಿಗಳ ಕುರಿತು ಕವಿಗಳು ತುಂಬಾ ವರ್ಣಿಸಿದ್ದಾರೆ.

೩೩ ,, ೩೪ ಮ್ಯೂನಿಕ್ ಒಪ್ಪಂದದಲ್ಲಿ ರಷ್ಯವು .. ವಹಿಸಲಿಲ್ಲ.

೩೫ ,, ೩೭ ಆಧುನಿಕ ಕನ್ನಡ ಕವಿತೆಯ ಛಂದಸ್ಸುಗಳೆಲ್ಲಾ ಇದರ ಪ್ರಭೇದಗಳು.

೩೯ ,, ೪೨ ಆರು ಆಗಮಗಳು.

೪೩ ,, ೪೫ ದಿ. ವೆಂಕಟಾಚಾರ್ಯರ ಕಾದಂಬರಿಗಳಲ್ಲೊಂದರ ಹೆಸರು.

೪೮ ,, ೫೦ ಜವಾಹರಲಾಲ ನೆಹರುಗಳು ಹಿಂದುಸ್ಥಾನದ ... ರ ಧುರೀಣರಾಗಿದ್ದಾರೆ.

೫೨ ,, ೫೪ ಇವರ ಸಂಸ್ಕೃತಿಯು ಆರ್ಯರ ಸಂಸ್ಕೃತಿಗಿಂತಲೂ ಪ್ರಾಚೀನವಾದುದೆಂದು ಹೇಳುತ್ತಾರೆ.

೫೬ ,, ೫೮ ಗುಪ್ತರ ... ಕ್ಕಾಗಿ ಪರಮಾತ್ಮನು ಅವತರಿಸುತ್ತಾನಂತೆ.

## ಮೇಲಿಂದ ಕೆಳಗೆ

೧ ,, ೧೫ ವಿಶ್ರಾಂತಿ.

೨೬ ,, ೫೨ ಈಗಿನ ರಾಷ್ಟ್ರಪತಿ.

೩೪ ,, ೪೦ ಗತಕಾಲಂ ಲಯಕಾಲಮಾಯ್ತು ನಿನಗಿನ್ನಾಯ್ತಂತ್ಯಕಾಲಂ ....

೩ ,, ೨೩ ಮುಗುಳು ನಗೆ.

೪೧ ,, ೫೪ ವಿಷ್ಣುವಿನ ವಾಹನ.

೨೮ ,, ೪೨ ಶ್ರೇಷ್ಠ.

೫ ,, ೧೧ ಇವನ ಲೋಕಕ್ಕೆ ಯಾರೂ ಹೋಗಲೊಪ್ಪುವುದಿಲ್ಲ.

೪೮ ,, ೫೫ ಕರೆ.

೧೨ ,, ೧೯ ಯುದ್ಧ.

೨೯ ,, ೪೯ ಇದು ಇಲ್ಲದಿದ್ದರೆ ಬೇಸಾಯ ಮಾಡುವುದು ಬಹಳ ಕಷ್ಟ.

೬ ,, ೧೩ ವಧುವಿನ ... ಪಿಡಿವವನಿಗೆ ವರನೆನ್ನುತ್ತಾರೆ.

೨೪ ,, ೩೦ ವರನಿಗೆ ಕೈಕೊಡುವವಳಿಗೆ ಹೀಗೆನ್ನುತ್ತಾರೆ

೪೪ ,, ೫೬ .... ಹೆದರಿಕೆಯಿಂದ ಚೇಂಬರ್ಲೇನರು ಹಿಟ್ಲರನಿಗೆ ತಲೆಬಾಗಿದರು.

೨೦ ,, ೪೫ ದೇಹವನ್ನು ವಿಕ್ರಯಿಸಿಕೊಳ್ಳುವ ಸ್ತ್ರೀಯರಿಗೆ ಇದಿರುವುದಿಲ್ಲ.

೮ ,, ೨೧ ಹೊಸತು.

೫೧ ,, ೫೮ ... ರಿಲ್ಲದ[redacted]ೂರಿಗೆ ಹಾಳೂರೆನ್ನುತ್ತಾರೆ

(ಸ್ಪರ್ಧೆಯ ಕೂಪನುಗಳಿಗೆ ೪೫ನೆ ಪುಟ ನೋಡಿರಿ)

This page is available for advertisement. Rate Rs. 15. (per insertion.)

"A thing of beauty
Is a joy for ever."



Beautiful Pictorial
**CALENDARS**
will be an effective
Advertisement.

For Printing
**CALENDARS**
of Every description

# Manipal Power Press, Udipi.

This Page is available for Advertisement. Rate Rs. 20/-. (per insertion.)